ಸಮಗ್ರ ವಿಜ್ಞಾನ ಪತ್ರಿಕೆ

ಕುತೂಹಲಿ ಕನ್ನಡ

ಸಂಚಿಕೆ 7 | ಸಂಪುಟ 2 | ಜೂನ್ 2025

ಕಣ್ಮಣಿ ಮರಗಳು

ನಾಗಾಲ್ಯಾಂಡಿನ ಜಪ್ಫು ಬೆಟ್ಟದ ಮೇಲಿರುವ ಈ ಮರ, ಪ್ರಪಂಚದಲ್ಲಿಯೇ ಅತಿ ಎತ್ತರದ ರೋಡೊಡೆಂಡ್ರಾನ್ ಮರ

ನಾಗರತ್ನ ಸ್ಮಾರಕ ಅನುದಾನದ ನೆರವಿನಿಂದ ಪ್ರಕಟವಾದ ಸಂಚಿಕೆ.
ಪ್ರತಿಷ್ಠಾನಕ್ಕೆ ಕೃತಜ್ಞತೆಗಳು.

5

ಕಣ್ಮಣಿ ಮರಗಳು ಡಾ. ಎಸ್. ನಟೇಶ್

13

ಕತೆ| ಇಸವಿ 2889

ಜೂಲ್ಸ್ ವರ್ನೆ ಮತ್ತು ಮೈಖೇಲ್ ವರ್ನೆ

ಪಿರಮಿಡ್ ಎತ್ತರವನ್ನು ಅಳೆದ ಕಥೆ 22

ಶ್ರೀ ವಿಎಸ್ಎಸ್ ಶಾಸ್ತ್ರಿ

ಹಕ್ಕಿಗೂಡು 16

ಸುಸ್ಥಿರ ಜೇನುಕೃಷಿ 17 ಚರಣ್ ಕುಮಾರ್

ಅಗಲಿದ ತಾರೆಗಳು 4 । ನಗೆಕೋಶ 24 । ನಮ್ಮನ್ನು ಉಳಿಸಿ 26 ।
ಚುಟುಕು 27 । ಕೇಶ ಕ್ವಿಜ್ 29। ಆಕಾಶ ನಕ್ಷೆ 30 । ಪದಬಂಧ 31 ।

ಸಂಪಾದಕ: ಕೊಳ್ಳೇಗಾಲ ಶರ್ಮ (ಎ.ಎಸ್.ಕೆ.ವಿ.ಎಸ್.ಶರ್ಮ)
ಸಂಪಾದಕ ಮಂಡಳಿ: ಡಾ. ಎ. ಎಂ. ರಮೇಶ್ • ಡಾ. ವಿ. ಎಸ್. ಕಿರಣ್ • ಶ್ರೀ ಟಿ. ಜಿ. ಶ್ರೀನಿಧಿ • ಶ್ರೀ ಶಶಿಧರ ಡೋಂಗ್ರೆ • ಶ್ರೀ ಪ್ರವೀಣಕುಮಾರ್ ಸಯ್ಯಪ್ಪರಾಜು • ಶ್ರೀ ಎಸ್. ಕುಮಾರ್ |
ಮುಖಪುಟ ಹಾಗೂ ಪತ್ರಿಕೆಯ ವಿನ್ಯಾಸ: ಎಸ್. ಕುಮಾರ್ | **ಪ್ರಕಾಶಕರು:** ಕುತೂಹಲಿ-ಕನ್ನಡ ಬಳಗ
ಪ್ರಕಾಶಕರ ಹಾಗೂ ಸಂಪಾದಕರ ವಿಳಾಸ: ಕುತೂಹಲಿ ಕನ್ನಡ, 1885, ಶ್ರೀ ಲಕ್ಷ್ಮಿ, 30 ಅಡಿ ರಸ್ತೆ 6ನೇ ಮೈನು, ಹಂಪಿ ವೃತ್ತದ ಸಮೀಪ, ಮೈಸೂರು-570017 |
ಮೊಬೈಲ್: +91-9886640328 | **ಸ್ಥಿರ ದೂರವಾಣಿ:** 91-0821-2971171 | Email: kutuhalikannada@gmail.com

ಉಚಿತ ಪತ್ರಿಕೆಗಳು ಹಾಗೂ ಇತರೆ ಉಚಿತ ಮಾಧ್ಯಮಗಳು ಕುತೂಹಲಿ ಕನ್ನಡದಲ್ಲಿ ಪ್ರಕಟವಾದ ಲೇಖನಗಳನ್ನು, ಆಕರಗಳನ್ನು ನಮೂದಿಸಿ ಪೂರ್ಣವಾಗಿ ಅಥವಾ ಆಂಶಿಕವಾಗಿ ಮರುಬಳಕೆ ಮಾಡಿಕೊಳ್ಳಲು ಮುಕ್ತವಾಗಿ ಅನುಮತಿ ನೀಡಲಾಗಿದೆ ಕುತೂಹಲಿ ಕನ್ನಡ ಪತ್ರಿಕೆಯ ಇಲೆಕ್ಟ್ರಾನಿಕ್ ಸಂಚಿಕೆಯನ್ನು ವೈಯಕ್ತಿಕವಾಗಿ ಯಾರ ಜೊತೆಗೆ ಬೇಕಿದ್ದರೂ ಹಂಚಿಕೊಳ್ಳಬಹುದು. ಪತ್ರಿಕೆಯಲ್ಲಿ ಪ್ರಕಟವಾಗಿರುವ ಲೇಖನಗಳ ಹಕ್ಕುಗಳು ಆಯಾ ಲೇಖಕರದ್ದೇ ಆಗಿರುತ್ತದೆ. ಬೇರೆಡೆ ಪ್ರಕಟಿಸುವಾಗ ಲೇಖಕರು "ಈ ಲೇಖನ ಮೊದಲು ಕುತೂಹಲಿ ಕನ್ನಡ ... ಸಂಚಿಕೆಯಲ್ಲಿ ಪ್ರಕಟವಾಗಿತ್ತು" ಎಂದು ಷರಾ ಜೊತೆಗೆ ಪ್ರಕಟಿಸಬಹುದು.

ಪರಿಸರಕ್ಕೊಂದು ಉಪವಾಸ!

ಪ್ರತಿ ವರ್ಷವೂ ಜೂನ್ 5ನೆಯ ತಾರೀಖು ವಿಶ್ವ ಪರಿಸರ ದಿನವನ್ನು ಆಚರಿಸುತ್ತೇವೆ. ಇದು ಸಂಭ್ರಮದ ಆಚರಣೆಯೂ ಅಲ್ಲ. ಕಾಳಜಿಯ ಆಚರಣೆಯೂ ಅಲ್ಲ ಎನಿಸುವಂತಾಗಿದೆ. ಆ ದಿನ ಕೆಲವರು ಮರಗಳನ್ನು ನೆಡುತ್ತಾರೆ. ಇನ್ನು ಕೆಲವರು ಕಸ ಆಯ್ದು ಬಿಸಾಡುತ್ತಾರೆ. ಇನ್ನು ಕೆಲವರು ಸೀಡ್ ಬಾಲ್ ಗಳನ್ನು ಮಾಡಿ ಅಲ್ಲಲ್ಲಿ ಬಿಸಾಡುತ್ತಾರೆ. ಅರಣ್ಯ ಇಲಾಖೆಯವರು ಉಚಿತವಾಗಿ ಸಸಿಗಳನ್ನು ವಿತರಿಸುತ್ತಾರೆ. ಇವೆಲ್ಲವೂ ಕೇವಲ ಆಚರಣೆಗಳು. ಪರಿಸರವನ್ನು ಇವು ನಿಜಕ್ಕೂ ಸುಧಾರಿಸಿವೆಯೇ ಎಂದರೆ ಹೌದೆನ್ನಲು ಕಷ್ಟವಾಗುತ್ತದೆ. ಪರಿಸರವನ್ನು ನಿಜಕ್ಕೂ ಸಂರಕ್ಷಿಸಬಯಸುವವರು ಮಾಡಬೇಕಾದದ್ದು ಈ ಆಚರಣೆಗಳನ್ನಲ್ಲ. ಬದಲಿಗೆ ನಿತ್ಯದ, ಸಣ್ಣ, ಪುಟ್ಟ ಚಟುವಟಿಕೆಗಳನ್ನು ಬದಲಿಸಿಕೊಂಡರೂ ಸಾಕು ಪರಿಸರವನ್ನು ಸಂರಕ್ಷಿಸುವತ್ತ ಸಾಕಷ್ಟು ಕೊಡುಗೆ ನೀಡಬಹುದು.

ದೈನಂದಿನ ಚಟುವಟಿಕೆಗಳಲ್ಲಿ ಪರಿಸರಕ್ಕೆ ಹಾನಿಯನ್ನುಂಟು ಮಾಡುವ ಕೆಲವು ಅಂಶಗಳಿವೆ. ಅವುಗಳನ್ನು ಇಲ್ಲಿ ಒತ್ತಿ ಹೇಳುವುದು ಬಹು ಮುಖ್ಯ. ಮೊದಲನೆಯದು ನೀರಿನ ಅಪಬಳಕೆ, ಅತಿಬಳಕೆ. ಎರಡನೆಯದು ಆಹಾರವನ್ನು ವ್ಯರ್ಥ ಮಾಡುವುದು. ಮೂರನೆಯದು ಖರೀದಿ ವ್ಯವಹಾರ. ಈ ಎಲ್ಲ ಚಟುವಟಿಕೆಗಳಲ್ಲಿಯೂ ಇತ್ತೀಚೆಗೆ ನಮ್ಮ ಅಭ್ಯಾಸಗಳು ಬದಲಾಗಿವೆ. ಇವೆಲ್ಲವೂ ಪರಿಸರವನ್ನು ಅತ್ಯಂತ ಶೀಘ್ರವಾಗಿ ಹಾಳುಗೆಡಿಸುತ್ತಿರುವ ಪ್ಲಾಸ್ಟಿಕ್ಕು, ತ್ಯಾಜ್ಯಗಳ ಸಮಸ್ಯೆಯನ್ನು ಇನ್ನಷ್ಟು ಗಂಭೀರವಾಗಿಸುತ್ತಿವೆ.

ಆನ್ಲೈನ್ ಆಹಾರ ಖರೀದಿ ಇತ್ತೀಚೆಗೆ ಈ ಸಮಸ್ಯೆಯ ಗುಡ್ಡವನ್ನು ಎತ್ತರವಾಗಿಸುತ್ತಿದೆ. ಕಳೆದ ಐದು ವರ್ಷಗಳಲ್ಲಿ ಆನ್ಲೈನ್ ಖರೀದಿ ವ್ಯವಹಾರ ಪ್ರತಿ ವರ್ಷವೂ ಶೇಕಡ ಮೂವತ್ತರಿಂದ ನಲವತ್ತರಷ್ಟು ಅಧಿಕವಾಗುತ್ತಿತ್ತು. ಇದಕ್ಕಾಗಿ ಬೇಕಾದ ಪ್ಯಾಕೇಜಿಂಗ್ ವಸ್ತುಗಳ ಬೇಡಿಕೆಯೂ ಅಷ್ಟೇ ಪ್ರಮಾಣದಲ್ಲಿ ಹೆಚ್ಚಿದೆ. ಇವುಗಳಲ್ಲಿ ಅತಿ ಹೆಚ್ಚಿನವು ರಟ್ಟಿನ ಡಬ್ಬಿಗಳು, ಪ್ಲಾಸ್ಟಿಕ್ ಚೀಲ, ಹೊದಿಕೆ ಹಾಗೂ ಒಳಪದರಗಳು. ಫ್ರಿಜ್ಜು, ಫೋನು, ಸಾಬೂನು, ಕ್ರೀಂ ಮೊದಲಾದ ಕೊಳೆಯದ ವಸ್ತುಗಳ ಪ್ಯಾಕೇಜಿಂಗಿನಲ್ಲಿ ಬಹುತೇಕವನ್ನು ಮರುಬಳಕೆಗೆಂದು ರದ್ದಿಯಾಗಿ ಕೊಡುವ ಅವಕಾಶವಿದೆ. ಆದರೆ ಆಹಾರದ ಪ್ಯಾಕೇಜಿಂಗ್ ಬೇರೆಯದೇ ಸಮಸ್ಯೆಯನ್ನು ತಂದೊಡ್ಡುತ್ತದೆ.

ಆಹಾರದ ಪ್ಯಾಕೇಜಿಂಗಿನ ವಸ್ತುಗಳಲ್ಲಿ ಅತಿ ಹೆಚ್ಚಿನವು ಒಮ್ಮೆ ಬಳಸಿ ಬಿಸಾಡುವಂತಹ ವಸ್ತುಗಳಾದ್ದರಿಂದ ಇವುಗಳೊಡ್ಡುವ ಸಮಸ್ಯೆಯ ಪ್ರಮಾಣ ಇನ್ನೂ ಹೆಚ್ಚು. ಭಾರತದಲ್ಲಿ ಆಹಾರ ಉದ್ಯಮವೊಂದೇ ಸುಮಾರು ಐದು ಲಕ್ಷ ಟನ್ನುಗಳಿಂದ ಆರು ಲಕ್ಷ ಟನ್ನುಗಳ ಪ್ರಮಾಣದ ಪ್ಯಾಕೇಜಿಂಗ್ ವಸ್ತುಗಳನ್ನು ಬಿಸಾಡುತ್ತದೆ.

ಈ ವರ್ಷ ಇದು ಇನ್ನೂ ಎರಡು ಲಕ್ಷ ಟನ್ನುಗಳಷ್ಟು ಹೆಚ್ಚಾಗುತ್ತದೆಂದು ಅಂದಾಜಿದೆ. ಇದಕ್ಕೆ ಮುಖ್ಯ ಕಾರಣ, ಜೊಮಾಟೊ, ಸ್ವಿಗ್ಗಿ ಮೊದಲಾದ ಆನ್ಲೈನ್ ಆಹಾರ ಖರೀದಿ ಸೇವೆಗಳನ್ನು ಹೆಚ್ಚೆಚ್ಚು ಜನರು ಬಳಸಲು ಆರಂಭಿಸಿದ್ದಾರೆ.

ಐದು ವರ್ಷಗಳಲ್ಲಿ ಹೀಗೆ ಆನ್ಲೈನ್ ಆಹಾರವನ್ನು ಖರೀದಿಸುವವರ ಸಂಖ್ಯೆ ಹತ್ತು ಪಟ್ಟು ಹೆಚ್ಚಿದೆ. ಕಳೆದ ವರ್ಷ ಪ್ರತಿದಿನವೂ ಏನಿಲ್ಲವೆಂದರೂ ಎಂಭತ್ತರಿಂದ ತೊಂಭತ್ತು ಲಕ್ಷ ಮಂದಿ ಆನ್ಲೈನಿನಲ್ಲಿ ಆಹಾರವನ್ನು ಕೊಂಡಿದ್ದರು.

26

ಅಗಲಿದ ತಾರೆಗಳು

ವಿಕಕಾಲದಲ್ಲಿ ಭಾರತವು ವಿಜ್ಞಾನ ಹಾಗೂ ವಿಜ್ಞಾನ ಸಂವಹನದಲ್ಲಿ ಅಪಾರ ಆಸಕ್ತಿ ಇದ್ದ ನಾಲ್ವರು ಮಹಾನ್ ವ್ಯಕ್ತಿಗಳನ್ನು ಕಳೆದುಕೊಂಡಿದೆ. ಕನ್ನಡದವರೇ ಆದ ಡಾ.ಎಸ್. ಬಾಲಚಂದ್ರರಾವ್, ಪ್ರೊ. ಎಸ್. ಅಯ್ಯಪ್ಪನ್ ಹಾಗೂ ಬೆಂಗಳೂರನ್ನೇ ತಮ್ಮ ನೆಲೆಯಾಗಿಸಿಕೊಂಡಿದ್ದ ಪ್ರೊ. ಎಂ. ಆರ್. ಶ್ರೀನಿವಾಸನ್ ಹಾಗೂ ಸುಪ್ರಸಿದ್ಧ ಖಗೋಳವಿಜ್ಞಾನಿ ಮತ್ತು ವಿಜ್ಞಾನ ಕಥೆಗಾರ ಪ್ರೊ. ಜಯಂತ್ ವಿ ನಾರಳೀಕರ್ ಅವರೇ ಈ ನಾಲ್ವರು. ಕುತೂಹಲಿ–ಕನ್ನಡ ವಿಜ್ಞಾನ, ವಿಜ್ಞಾನ ಶಿಕ್ಷಣ ಹಾಗೂ ವಿಜ್ಞಾನ ಸಂವಹನ ಕ್ಷೇತ್ರಕ್ಕೆ ಇವರೆಲ್ಲರೂ ನೀಡಿದ ಕೊಡುಗೆಗಳನ್ನು ಸ್ಮರಿಸುತ್ತಾ ಭಾರವಾದ ಹೃದಯದಿಂದ ವಿದಾಯ ಹೇಳುತ್ತಿದೆ.

ಡಾ. ಬಾಲಚಂದ್ರರಾವ್ ಅವರು ಪುರಾತನ ಭಾರತೀಯ ಗಣಿತ ಪರಂಪರೆಯ ಬಗ್ಗೆ ಇದ್ದ ದಂತಕಥೆಗಳನ್ನು ದೂರವಿಟ್ಟು, ವಾಸ್ತವಾಂಶಗಳನ್ನು ತಿಳಿಸುವ ಪುಸ್ತಕಗಳನ್ನು ನಮಗೆ ನೀಡಿದ್ದಾರೆ. ಜ್ಯೋತಿಷ್ಯಕ್ಕೂ, ಖಗೋಳವಿಜ್ಞಾನಕ್ಕೂ ವ್ಯತ್ಯಾಸವೇನೆಂಬುದನ್ನು ಮನದಟ್ಟು ಮಾಡಿಸುವಲ್ಲಿ ಅವರ ಪುಸ್ತಕಗಳ ಕೊಡುಗೆ ಅಪಾರ.

ಪ್ರೊ. ಅಯ್ಯಪ್ಪನ್ ಭಾರತದಲ್ಲಿ ನೀಲಿಕ್ರಾಂತಿಯ ಹರಿಕಾರರೆಂದೇ ಸುಪ್ರಸಿದ್ಧ. ಹಸಿರುಕ್ರಾಂತಿ ನಮಗೆ ಧಾನ್ಯಗಳನ್ನು ನೀಡಿದರೆ, ನೀಲಿಕ್ರಾಂತಿ ಮೀನುಗಳನ್ನು, ಜಲಮೂಲದ ಆಹಾರಗಳನ್ನು ನೀಡಿತು. ಸರಳ ಜೀವಿ, ಮೆಲುಮಾತಿನ ಪ್ರೊ. ಅಯ್ಯಪ್ಪನ್ ಕುತೂಹಲಿ–ಕನ್ನಡದ ಆರಂಭದ ಅವತಾರದ ಪ್ರೇರಕ ಶಕ್ತಿಯಾಗಿದ್ದರು. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಭಾರತದ ಕೃಷಿ ವಿಜ್ಞಾನ ಸಂಶೋಧನಾ ಸಂಸ್ಥೆಯ ಮಹಾನಿರ್ದೇಶಕರಾಗಿ ನಿವೃತ್ತರಾಗಿದ್ದರು.

ಪ್ರೊ. ನಾರಳೀಕರರು ಮೂಲತಃ ಮರಾಠಿಗರು. ಜನಪ್ರಿಯವಾದ ಬಿಗ್ ಬ್ಯಾಂಗ್ ಎನ್ನುವ ವಿಶ್ವದ ಜನನವನ್ನು ತಿಳಿಸುವ ತರ್ಕಕ್ಕೆ ಪರ್ಯಾಯವಾಗಿ ಸ್ಟೆಡಿ ಸ್ಟೇಟ್ ಥಿಯರಿ ಎನ್ನುವ ವಾದವನ್ನು ಇಂಗ್ಲೆಂಡಿನ ಫ್ರೆಡ್ ಹಾಯ್ಲ್ ಅವರೊಟ್ಟಿಗೆ ಮಂಡಿಸಿದ್ದರು. ಮರಾಠಿಯಲ್ಲಿಯೇ ವಿಜ್ಞಾನದ ಬಗ್ಗೆ ಜನಪ್ರಿಯ ಭಾಷಣಗಳು ಹಾಗೂ ಪುಸ್ತಕಗಳನ್ನು ಬರೆದಿದ್ದಾರೆ. ಫ್ರೆಡ್ ಹಾಯ್ಲ್‌ರಂತೆಯೇ ವಿಜ್ಞಾನವನ್ನು ಕಥೆ, ಕಾದಂಬರಿಗಳ ಮೂಲಕ ಪಸರಿಸಿದವರು. ವಿಜ್ಞಾನ ಕಥೆಗಳಿಗೆ ಭಾರತದಲ್ಲಿ ಮನ್ನಣೆ ದೊರಕಿಸುವಲ್ಲಿ ಪ್ರೊ. ನಾರಳೀಕರರ ಪಾತ್ರ ಹಿರಿದು.

ಪ್ರೊ. ಎಂ. ಆರ್. ಶ್ರೀನಿವಾಸನ್ ಎಲೆಮರೆಯ ಕಾಯಿಯಂತೆ ಪರಮಾಣು ಕ್ಷೇತ್ರದಲ್ಲಿ ಹೆಸರು ಪಡೆದ ಪ್ರೊ. ರಾಜಾ ರಾಮಣ್ಣ, ಪ್ರೊ. ಎಂ.ಜಿ.ಕೆ ಮೆನನ್ ಮೊದಲಾದವರ ಜೊತೆಯಲ್ಲಿಯೇ ಇದ್ದು ಆ ವಿಜ್ಞಾನ ಕ್ಷೇತ್ರವನ್ನು ಬಲಗೊಳಿಸಿದ್ದರು. ಭಾರತದ ಪ್ರಪ್ರಥಮ ಪರಮಾಣು ಬಾಂಬು ತಯಾರಿಕೆಯಲ್ಲಿ ಮಹತ್ತರ ಕೊಡುಗೆ ನೀಡಿದವರು. ಭಾರತೀಯ ಅಣುಶಕ್ತಿ ವಿಭಾಗದ ಕಾರ್ಯದರ್ಶಿಯಾಗಿ, ಅಣುಶಕ್ತಿ ಆಯೋಗದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಅಗಲಿದ ಈ ತಾರೆಗಳು ಭಾರತದಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ತಮ್ಮ ಕೊಡುಗೆಗಾಗಿ ದೇಶದಾದ್ಯಂತ ಹೆಸರುವಾಸಿಯಾಗಿದ್ದರು.

ಡಾ. ಎಸ್. ಬಾಲಚಂದ್ರರಾವ್
(ಜನನ: 14 ಡಿಸೆಂಬರ್ 1944, ಮರಣ: 14 ಮೇ 2025)



ಪ್ರೊ. ಎಸ್. ಅಯ್ಯಪ್ಪನ್
(ಜನನ: 10 ಡಿಸೆಂಬರ್ 1955, ಮರಣ: 10 ಮೇ 2025)



ಪ್ರೊ. ಜಯಂತ್ ವಿ. ನಾರ್ಲೀಕರ್
(ಜನನ: 19 ಜುಲೈ 1938, ಮರಣ: 20 ಮೇ 2025)



ಪ್ರೊ. ಎಂ. ಆರ್. ಶ್ರೀನಿವಾಸನ್
(ಜನನ: 5 ಜನವರಿ 1955, ಮರಣ: 20 ಮೇ 2025)

ಕಣ್ಮಣಿ ಮರಗಳು

ನೆಲದೊಳಗೆ ಆಳವಾಗಿ ನೆಲೆಯಾದ ಅವುಗಳ ಬೇರುಗಳು, ಸಾಮರ್ಥ್ಯದ ಪ್ರತೀಕ. ಗಾಳಿಯಲ್ಲಿ ಮೇಲೆದ್ದು ನಿಂತ, ಗಟ್ಟಿಯಾಗಿ, ದೃಢವಾಗಿದ್ದರೂ, ಮಂದಮಾರುತದಲ್ಲಿ ತೊನೆದಾಡುವ ಕಾಂಡ, ರೆಂಬೆಗಳು, ಸಹನೆ, ಕಷ್ಟಸಹಿಷ್ಣುತೆಯ ಬಿಂಬಗಳು. .

ಚಿತ್ರಗಳು ಮತ್ತು ಲೇಖನ:
ಡಾ. ಎಸ್. ನಟೇಶ್

ಪುಟ್ಟ ಚುಕ್ಕೆಯಂಥದ್ದೊಂದು ಬೀಜ ಮೊಳೆತು, ಗಗನವನ್ನು ಮುತ್ತಿಕ್ಕುವ ರೆಡ್ವುಡ್ ಮರವಾಗಿಯೋ, ಎಕರೆಗಟ್ಟಲೆ ಹರಡಿಕೊಂಡ ಆಲದ ಮರವಾಗಿಯೋ, ಅದಕ್ಕಿಂತ ಬೇರೆ ಪವಾಡ ಇನ್ನೊಂದಿಲ್ಲ. ಮರಗಳು ನಮ್ಮ ಒಳಗನ್ನು ತಟ್ಟುವ ಜೀವಿಗಳು. ನೆಲದೊಳಗೆ ಆಳವಾಗಿ ನೆಲೆಯಾದ ಅವುಗಳ ಬೇರುಗಳು, ಸಾಮರ್ಥ್ಯದ ಪ್ರತೀಕ. ಗಾಳಿಯಲ್ಲಿ ಮೇಲೆದ್ದು ನಿಂತ, ಗಟ್ಟಿಯಾಗಿ, ಧೃಡವಾಗಿದ್ದರೂ, ಮಂದಮಾರುತದಲ್ಲಿ ತೊನೆದಾಡುವ ಕಾಂಡ, ರೆಂಬೆಗಳು, ಸಹನೆ, ಕಷ್ಟಸಹಿಷ್ಣುತೆಯ ಬಿಂಬಗಳು.

ಮರಗಳು ಅಪಾಯ ಎದುರಾದಾಗ ಓಡಿಹೋಗುವ ಪ್ರಾಣಿಗಳಂತಲ್ಲ. ಉಗ್ರವಾದ, ಕೋಟಲೆಯ ಪರಿಸರದಲ್ಲಿಯೂ, ಎಲ್ಲ ಅಡೆತಡೆಗಳನ್ನೂ ಮೀರಿ ಬದುಕುಳಿಯುವ ಸಾಮರ್ಥ್ಯಶಾಲಿಗಳು ಇವು. ನೂರಲ್ಲ, ಸಾವಿರಾರು ವರ್ಷಗಳವರೆಗೂ ಬದುಕುವ ಶಕ್ತಿಯುಳ್ಳ ಮರಗಳು ಇತಿಹಾಸದೊಡನೆ ನಮ್ಮನ್ನು ಕೂಡಿಸುವ ಸೇತುವೆಗಳು. ಮರಗಳಿಗೂ ಜೀವವಿದೆ. ಅವು ಕೂಡ ನೋವು, ನಲಿವನ್ನು ಅನುಭವಿಸುತ್ತವೆ ಎಂದು ಹಲವು ಸಂಸ್ಕೃತಿಗಳು ನಂಬುತ್ತವೆ. ಮರಗಳು ಬದುಕಿದ್ದಾಗ ಎಷ್ಟು ಘನತೆಯಿಂದ ಕಾಣುತ್ತವೆಯೋ, ಸಾವಿನಲ್ಲಿಯೂ ಅಷ್ಟೇ ಅಮೋಘ. ಇತಿಹಾಸದಲ್ಲಿ ದಾಖಲಾಗಿರುವ ಪ್ರತಿಯೊಂದು ಸಂಸ್ಕೃತಿಯಲ್ಲಿಯೂ ನೃತ್ಯ, ಸಂಗೀತ, ಕಾವ್ಯ, ಪ್ರಬಂಧ, ಕಲೆ ಹಾಗೂ ಶಿಲ್ಪಕಲೆಗೆ ಮರಗಳು ಸ್ಫೂರ್ತಿಯಾಗಿರುವುದು ಅಚ್ಚರಿಯ ವಿಷಯವೇನಲ್ಲ. ಮರಗಳನ್ನು ಮಾದರಿಯನ್ನಾಗಿ, ಪ್ರತೀಕಗಳನ್ನಾಗಿ, ಉದಾಹರಣೆಯಾಗಿ ಕಾಣಲಾಗಿದೆ. ಮರಗಳು ಸಂಸ್ಕೃತಿಗಳನ್ನು ಪ್ರಭಾವಿಸಿರುವುದಷ್ಟೆ ಅಲ್ಲದೆ, ತಲೆತಲೆಮಾರುಗಳ ಕುಶಲಕರ್ಮಿಗಳನ್ನು ಹುರಿದುಂಬಿಸಿದ ಕಲೆಗಳ ಆಧಾರಸ್ತಂಭಗಳೂ ಹೌದು. ಹಲವು ನಾಗರೀಕತೆಗಳಲ್ಲಿ ಕಾಣುವ ಸ್ವರ್ಗದ ಪರಿಕಲ್ಪನೆಯಲ್ಲಿ ಮರಗಳೇ ಕೇಂದ್ರಬಿಂದು. ಅಥವಾ ಅವುಗಳೇ ಸ್ವರ್ಗದ ಮೆಟ್ಟಿಲ ಏಣಿಗಳು ಎನಿಸಿವೆ. ಬೈಬಲ್ಲಿನಲ್ಲಿ ಸ್ವರ್ಗವನ್ನು ಲೆಬನಾನ್ ಸೆಡಾರ್ ಮರಗಳಿಂದ ಸಮೃದ್ಧವಾದ ತೋಟ ಎಂದೇ ವಿವರಿಸಲಾಗಿದೆ. ಅದೇ ಗ್ರೀಕರ ನೋರ್ಸ್ ಪುರಾಣಗಳು ಇಗ್ಡ್ರಾಸಿಲ್



ನೀಲಗಿರಿ ಮರಗಳನ್ನು ಪ್ರಾಯಶಃ 1790ನೇ ಇಸವಿಯಲ್ಲಿ ಟಿಪ್ಪುಸುಲ್ತಾನನು ಮೊತ್ತ ಮೊದಲು ಭಾರತಕ್ಕೆ ಪರಿಚಯಿಸಿದ. ನಂದಿ ಬೆಟ್ಟದಲ್ಲಿರುವ ಈ ಮರದ ಎದುರು ಇರುವ ಹಳೆಯ ಮುರುಕು ಕಟ್ಟಡ ಟಿಪ್ಪುಸುಲ್ತಾನನ ಬೇಸಗೆಯ ನಿವಾಸವಾಗಿತ್ತು ಎನ್ನಲಾಗಿದೆ. 2015ನೇ ಇಸವಿಯಲ್ಲಿ ಕಟ್ಟಡಕ್ಕೆ ಅಪಾಯವಾಗಬಹುದೆಂಬ ಭಯದಿಂದ, ಇಲ್ಲಿದ್ದ ಇನ್ನೂ ಮೂರು ಪಾರಂಪರಿಕ ಮರಗಳನ್ನು ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಕಡಿದು ಹಾಕಿದರು. ಅದು ಸಿಬ್ಬಂದಿಯ ನಿರ್ಲಕ್ಷ್ಯವೋ ಅಥವಾ ಮರಗಳ ಪಾರಂಪರಿಕ ಚರಿತ್ರೆ ತಿಳಿಯದ್ದರಿಂದ ಹೀಗಾಯಿತೋ ಗೊತ್ತಿಲ್ಲ.

ಎನ್ನುವ ಬೂದಿ ಮರವನ್ನು ದೇವರುಗಳ ನೆಲೆ ಎಂದೂ, ಅದರ ಒಂದು ಬೇರು ವಲ್ಹಾಲಾ ಎನ್ನುವ ಶೂರರುಗಳ ನೆಲೆಯೆಂದೂ, ಮತ್ತೊಂದು ಬೇರನ್ನು ನರಕವೆಂದೂ ಗುರುತಿಸುತ್ತವೆ. ಬೌದ್ಧ, ಹಿಂದೂ ಹಾಗೂ ಜೈನರ ಧಾರ್ಮಿಕ ಗ್ರಂಥಗಳಲ್ಲಿ ಮರಗಳು ಮತ್ತು ದೇವರು, ಹಾಗೂ ಗುರುಗಳ ಜೊತೆಗೆ ಅವುಗಳಿಗಿರುವ ಸಂಬಂಧಗಳ ಉಲ್ಲೇಖ ಯಥೇಚ್ಛವಾಗಿದೆ. ಮನುಷ್ಯರು ಹಾಗೂ ಮರಗಳ ನಡುವಿನ ಸಂಬಂಧ ಇಷ್ಟೊಂದು ಆಳವಾದದ್ದು.

ಮನುಷ್ಯರಿಗೆ ನಿಸರ್ಗದ ಜೊತೆಗಿನ ಆಪ್ತತೆಯೇ ಇದಕ್ಕೆ ಕಾರಣ ಎನ್ನುವ ವಾದವೊಂದಿದೆ. ಇದನ್ನು ಬಯೋಫೀಲಿಯ ಅಥವಾ ಜೀವಿಪ್ರೇಮ ಎನ್ನೋಣ. ಈ ಸಹಜ ಅನುಭಾವವೇ ನಿಸರ್ಗದ ಕೆಲವು ಅಂಶಗಳಿಗೆ ನಾವು ಹೆಚ್ಚಿನ ಪ್ರಾಮುಖ್ಯ ನೀಡುವಂತೆ ಮಾಡಿವೆಯಂತೆ. ಬಯೋಫೀಲಿಯ ಎನ್ನುವ ಪದವನ್ನು ಜರ್ಮನ್ ಮನೋವಿಜ್ಞಾನಿ ಹಾಗೂ ತತ್ವಶಾಸ್ತ್ರಜ್ಞ ಎರಿಕ್ ಫ್ರಾಮ್ 1964ರಲ್ಲಿ ವಿವರಿಸಿದ್ದ. ಅವನ ಪ್ರಕಾರ ಜೀವ ಹಾಗೂ ಜೀವವಿರುವ ಎಲ್ಲದರ ಬಗೆಗಿನ ಉತ್ಕಟ ಪ್ರೀತಿ ಇದು. 1984ರಲ್ಲಿ ಈ ಪದವನ್ನು ಇನ್ನಷ್ಟು ಜನಪ್ರಿಯಗೊಳಿಸಿದ ಪುಲಿಟ್ಸರ್ ಪ್ರಶಸ್ತಿ ವಿಜೇತ ವಿಜ್ಞಾನಿ, ಇ. ಓ. ವಿಲ್ಸನ್ ಪ್ರಕಾರ ಇದು ಇತರೆ ಜೀವಿಗಳ ಜೊತೆಗೆ ಸಹಬಾಳ್ವೆಯನ್ನು ನಡೆಸುವ ನಮ್ಮ ಬಯಕೆ.

ಅನಂತರದ ದಿನಗಳಲ್ಲಿ ಪ್ರಕಟವಾದ ಹಲವು ಸಂಶೋಧನಾ ಪ್ರಬಂಧಗಳು ಮನುಷ್ಯರಲ್ಲಿ ನಿಸರ್ಗಪ್ರೇಮ ಎನ್ನುವುದು ಆಳವಾಗಿ ಬೇರೂರಿದೆ ಎಂದು ತಿಳಿಸಿವೆ. ಉದಾಹರಣೆಗೆ, ಖಾಯಿಲೆ ಅಥವಾ ಶಸ್ತ್ರಕ್ರಿಯೆಯಿಂದ ಚೇತರಿಸಿಕೊಳ್ಳುತ್ತಿರುವವರಲ್ಲಿ, ಪ್ರಕೃತಿಯ ದೃಶ್ಯಗಳನ್ನು ನೋಡುವ ಅಥವಾ ಕಾಣಬಲ್ಲಂತಹವರು ಶೀಘ್ರವಾಗಿ ಚೇತರಿಸಿಕೊಳ್ಳಬಲ್ಲರು, ಮಾನಸಿಕ ಒತ್ತಡಗಳನ್ನು ಸಹಿಸಿಕೊಳ್ಳಬಲ್ಲರು. ದೀರ್ಘ ಕಾಲ ಗಮನ ಹರಿಸಬೇಕಾದ ಕಷ್ಟದ ಕೆಲಸಗಳನ್ನು ಇಂತಹವರು, ನಿಸರ್ಗದ ಒಡನಾಟ ಇಲ್ಲದವರಿಗಿಂತಲೂ ಸಮರ್ಪಕವಾಗಿ ಮಾಡಬಲ್ಲರು.

ಆದರೆ, ಈ ಬಯೋಫೀಲಿಯಾ ತರ್ಕಕ್ಕೂ ಮಿತಿಯಿದೆ. ಉದಾಹರಣೆಗೆ, ಮನುಷ್ಯರು ಪರಿಸರವನ್ನು ರಕ್ಷಿಸುವುದಕ್ಕಿಂತಲೂ ನಾಶ ಮಾಡಿರುವುದೇ ಹೆಚ್ಚು.. ಜಾಗತಿಕವಾಗಿ ಕಾಣುವ ಅಗಣ್ಯ ಪರಿಸರ ಸಮಸ್ಯೆಗಳೇ ಇದಕ್ಕೆ ಪುರಾವೆ.

ಗುಜರಾತಿನ ಭರೂಚ್ ಬಳಿ ಕಬೀರವಾಡ ಎಂದು ಹೆಸರಾದ ಆಲದ ಮರ ಬಹುಶಃ ಪ್ರಪಂಚದಲ್ಲಿಯೇ ಅತಿ ಹಳೆಯ ಆಲವಿರಬೇಕು. ಇಲ್ಲಿಯ ಜನರು ಹೇಳುವ ಕಥೆಯ ಪ್ರಕಾರ, ಸಂತ ಕಬೀರರು ಹಲ್ಲು ಉಜ್ಜಲು ಬಳಸಿ ನರ್ಮದಾ ನದಿಗೆ ಬಿಸಾಡಿದ ದಂತಮಜ್ಜನದ ಕಡ್ಡಿಯೊಂದು ಮೊಳೆತು ಈ ಹೆಮ್ಮರವಾಗಿದೆ.

ಮನುಷ್ಯರಿಗೆ ನಿಸರ್ಗದ ಜೊತೆಗಿನ ಆಪ್ತತೆಯೇ ಇದಕ್ಕೆ ಕಾರಣ ಎನ್ನುವ ವಾದವೊಂದಿದೆ. ಇದನ್ನು ಬಯೋಫೀಲಿಯ ಅಥವಾ ಜೀವಿಪ್ರೇಮ ಎನ್ನೋಣ. ಈ ಸಹಜ ಅನುಭಾವವೇ ನಿಸರ್ಗದ ಕೆಲವು ಅಂಶಗಳಿಗೆ ನಾವು ಹೆಚ್ಚಿನ ಪ್ರಾಮುಖ್ಯ ನೀಡುವಂತೆ ಮಾಡಿವೆಯಂತೆ.

ಮಧ್ಯಪ್ರದೇಶದ ಕಟ್ನಿ ಜಿಲ್ಲೆಯ ಸ್ಲೀಮನಾಬಾದ್ ಪಟ್ಟಣದ ಪೋಲೀಸು ಠಾಣೆಯ ಆವರಣದ ಮೂಲೆಯಲ್ಲಿ ಇರುವ ಈ ಅರಳಿ ಮರದ ಮೇಲೆ ಕ್ರಿಸ್ತಶಕ 1830-1840ರ ಅವಧಿಯಲ್ಲಿ, ಅಂದಿನ ಈಸ್ಟ್ ಇಂಡಿಯಾ ಕಂಪೆನಿಯು ಅದೆಷ್ಟೋ 'ಠಕ್ಕ'ರಿಗೆ ನೇಣು ಹಾಕಿತ್ತು. ಕ್ರಿಸ್ತಶಕ 1826 ರಿಂದ 1848ರವರೆಗಿನ ಅವಧಿಯಲ್ಲಿ 'ಠಕ್ಕ' ರೆಂಬ ಕಾರಣಕ್ಕಾಗಿ ಸುಮಾರು 4,500 ಜನರ ವಿಚಾರಣೆ ಆಗಿತ್ತು.

ಜಮ್ಮು ಮತ್ತು ಕಾಶ್ಮೀರದ ಯಾರಿಖಾ ಪಟ್ಟಣದ ಟಾಂಗ್ ಮಾರ್ಗದಲ್ಲಿರುವ ಸಿಎಸ್‌ಐಆರ್-ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇಂಟಿಗ್ರೇಟೆಡ್ ಮೆಡಿಸಿನ್ ಸಂಸ್ಥೆಯ ಪ್ರಾದೇಶಿಕ ಕಛೇರಿಯ ಆವರಣದಲ್ಲಿರುವ ಈ ಸೆಕ್ವೋಯಾ ಭಾರತದಲ್ಲಿರುವ ಏಕೈಕ ಸೆಕ್ವೋಯಾ ಮರ. ಪ್ರಾಯಶಃ ನೈರುತ್ಯ ಏಶಿಯಾದಲ್ಲಿಯೂ ಇರುವ ಒಂದೇ ಮರ.

ಅಲ್ಲದೆ ಎಲ್ಲ ಜೀವಿಗಳನ್ನೂ ಜನರು ಸಮಾನವಾಗಿ ಗೌರವಿಸುವುದಿಲ್ಲ. ಹಾವು, ಜೇಡ ಮೊದಲಾದ ಕೆಲವು ಜೀವಿಗಳು ಹಾಗೂ ದಟ್ಟವಾದ ಕಾಡು ಮನುಷ್ಯರಲ್ಲಿ ಪ್ರೀತಿಯನ್ನಲ್ಲ, ಭಯವನ್ನು ಹುಟ್ಟಿಸುತ್ತವೆ. ಜನರನ್ನು ದೂರವಿಡುತ್ತವೆ. ಅಂದರೆ ನಾವು ನಮ್ಮ ಲಾಭಕ್ಕೆ ಬೇಕಾದ ಸಂಪನ್ಮೂಲಗಳನ್ನು ಕೊಡುವುದರಿಂದ ಪರಿಸರಕ್ಕೆ ಬೆಲೆ ಕೊಡುತ್ತೇವೆಯೇ ಹೊರತು ಅದೊಂದು ಸಂರಕ್ಷಿಸಬೇಕಾದ ಸಿರಿ ಎಂದಲ್ಲ! ಸಸ್ಯಗಳು ಹಾಗೂ ಪ್ರಾಣಿಗಳ ಈ ಶೋಷಣೆಯ ಚರಿತ್ರೆ ಇಂದು, ನಿನ್ನಿನದಲ್ಲ. ಕೆಲವೊಮ್ಮೆ ಅಗಾಧ ಪ್ರಮಾಣದ ಕ್ರೌರ್ಯ ನಡೆಸಿರುವ ಚರಿತ್ರೆಯೂ ಉಂಟು. ಅದೇನೇ ಇರಲಿ.

ಜೀವಿಗಳ ಆಯುಸ್ಸು, ಪುರಾತನ ಕಾಲದ ಹವಾಮಾನ ಬದಲಾವಣೆಗಳ ಘಟನೆಗಳು ಮೊದಲಾದ ಜೈವಿಕ ಅರಿವನ್ನು ನೀಡುವ ಸಾಧನಗಳಾದ ಮರಗಳು ಜೀವಿನೆಲೆಯಾಗಿ, ನೆಲಜೀವಿಗಳಿಗೆ ಆಸರೆಯಾಗಿ, ಭೂರಚನೆಯ ಹಾಗೂ ಜೈವಿಕ ವೈವಿಧ್ಯದ ಅವಿಭಾಜ್ಯ ಅಂಗಗಳು

ಮನುಷ್ಯರು ಹಾಗೂ ನಿಸರ್ಗದ ನಡುವಣ ಸಂಬಂಧ, ಒಟ್ಟಾರೆ ಮರಗಳ ಜೊತೆಗೆ ಎನ್ನಲಾಗದು. ನಿರ್ದಿಷ್ಟವಾದ ಕೆಲವು ಮರಗಳು ಅಥವಾ ಮರಗಳ ಗುಂಪಿನ ಜೊತೆಗೆ, ಬೇರೆ, ಬೇರೆ ಕಾರಣಗಳಿಂದಾಗಿ, ವಿಶೇಷವಾದೊಂದು ಬಾಂಧವ್ಯ ಬೆಳೆದಿರುವುದೂ ಉಂಟು. ಇಂತಹ ಕೆಲವು ವಿಶಿಷ್ಟವಾದ, ಕಣ್ಮಣಿ ಮರಗಳ ಬಗ್ಗೆ ಈ ಲೇಖನ.

ಕಣ್ಮಣಿ ಮರ ಎಂದರೇನು?

ಪ್ರತಿಯೊಂದು ದೇಶದಲ್ಲಿಯೂ ವಿಶೇಷವಾದ ಕೆಲವು ಮರಗಳಿರುತ್ತವೆ. ವಿಶಿಷ್ಟವಾದ, ಗಮನಾರ್ಹವಾದ ಗುಣ ಹಾಗೂ ಮೌಲ್ಯಗಳಿರುವ ಕೆಲವು ಮರಗಳನ್ನು ಸಮುದಾಯದ ವಿಶಿಷ್ಟ ಸಂಪನ್ಮೂಲಗಳೆಂದು ಪರಿಗಣಿಸಲಾಗುತ್ತದೆ. ಇಂತಹ ಮರಗಳನ್ನು ಚಾರಿತ್ರಿಕ, ಪಾರಂಪರಿಕ, ಕಣ್ಮಣಿ, ಪ್ರಮುಖ, ಅಥವಾ ವಿಶೇಷ ಆಸಕ್ತಿಯ ಮರಗಳು ಎಂದು ಗುರುತಿಸುತ್ತೇವೆ. ಇಂತಹ ಬಿರುದನ್ನು ಗಳಿಸಲು ಮರಗಳಿಗೆ ಇರಬೇಕಾದ ಗುಣಗಳೂ ವೈವಿಧ್ಯಮಯ ಎಂದು ಈ ಹೆಸರುಗಳೇ ಸೂಚಿಸುತ್ತವೆ. ಕಣ್ಮಣಿ ಮರಗಳನ್ನು ಬೇರೆ ತೆರನಾಗಿಯೂ ವಿವರಿಸಬಹುದು. ವಿವರಣೆ ಏನೇ ಇರಲಿ, ಅರ್ಥ ಒಂದೇ. ಈ ಮರಗಳು ಎದ್ದು ತೋರುವ ಯಾವುದೋ ಗುಣದಿಂದಾಗಿ ಅಸಾಮಾನ್ಯ ಎನ್ನಿಸುತ್ತವೆ. ಬೆರಗನ್ನೂ, ಕುತೂಹಲವನ್ನೂ, ಗೌರವ ಭಾವವನ್ನೂ, ಅಚ್ಚರಿಯನ್ನೂ ಉಂಟು ಮಾಡುತ್ತವೆ. ಕೆಲವೊಮ್ಮೆ ಇಡೀ ಸಮುದಾಯಕ್ಕೆ ಮುಖ್ಯ ಎನ್ನಿಸುವುದರಿಂದ ಅವು ಪ್ರಮುಖ ಎನ್ನಿಸುತ್ತವೆ. ಇಂತಹ ಮರಗಳು ನಿಸರ್ಗದ ಜೊತೆಗೆ ನಮಗಿರುವ ದೀರ್ಘ ನಂಟಿನ ಪ್ರತೀಕಗಳು. ಈ ನಂಟನ್ನು ನಾವು ಗುರುತಿಸಬೇಕು. ಮರಗಳನ್ನು ನಾವು ಗೌರವಿಸಬೇಕು. ಮತ್ತು ನಮ್ಮ ಸಂತತಿಗಳಿಗೂ ಈ ಮರಗಳ ಸಂಗಾತ ಸಿಗುವಂತೆ ಕಾಪಿಡಬೇಕು. ಇಂತಹ ಮರಗಳನ್ನು ಕಣ್ಮಣಿ ಎಂದು ಹೆಸರಿಸಬಹುದು.

ಕಣ್ಮಣಿ ಎಂದು ಗುರುತಿಸಿದ ಮರಗಳ ನೆನಪು ನಮ್ಮ ಮನಸ್ಸಿನಲ್ಲಿ ಅಚ್ಚಳಿದಯದೆ ಹಚ್ಚ ಹಸಿರಾಗಿ ಉಳಿಯುತ್ತವೆ. ಗಿಡ್ಡ ಮರಗಳ ಕಾಡಿನಲ್ಲಿರುವ ಏಕಾಂಗಿ ದೈತ್ಯ ಮರವಿರಬಹುದು, ಕಾಡಿನ ರಕ್ಷಕ ಎನ್ನಿಸಿದೊಂದು ವೃಕ್ಷವಿರಬಹುದು. ಎಲ್ಲರ ಹರಕೆಯನ್ನೂ ಪೂರೈಸುವ ಮರವಿಬಹುದು. ಸಸ್ಯಶಾಸ್ತ್ರದ ಪ್ರಕಾರ ಅಪರೂಪವೆನ್ನಿಸಿದ ಮರವೇ ಇರಬಹುದು. ಒಟ್ಟಾರೆ ಇಂತಹ

ಕಣ್ಮಣಿಗಳು ಕಾಲ–ದೇಶವನ್ನು ಮೀರಿದ ಆಸಕ್ತಿಯನ್ನು ಉಂಟು ಮಾಡುತ್ತವೆ. ಇತಿಹಾಸಕ್ಕೆ ನಂಟಾಗುತ್ತವೆ. ಸಮುದಾಯದ ಆಸ್ತಿಯೂ ಆಗುತ್ತವೆ.

ಭಾರತದ ಚರಿತ್ರೆ, ಇಲ್ಲಿನ ಸಂಸ್ಕೃತಿಯ ಸಿರಿ, ವೈವಿಧ್ಯಮಯವಾದ ವಾತಾವರಣದಿಂದಾಗಿ, ಹಲವು ವಿಶಿಷ್ಟ ಮರಗಳು ಇಲ್ಲಿ ಬೆಳೆದು ನಿಂತಿವೆ. ಕಣ್ಮಣಿ ಮರಗಳು ಎಂದ ಕೂಡಲೇ ಮೊದಲು ನೆನಪಾಗುವುದು ಬುದ್ಧಗಯಾದ ಬೋಧಿವೃಕ್ಷ, ಕೊಲ್ಕತಾದ ದೈತ್ಯ ಆಲ, ಉತ್ತರಾಖಂಡದ ಜೋಶಿಮಠದಲ್ಲಿರುವ ಪುರಾತನ ಹಿಪ್ಪುನೇರಳೆಯ ಮರ, ಕೇರಳದ ಪರಂಬಿಕುಳಂ ಕಾಡುಗಳಲ್ಲಿರುವ ಕನ್ನಿಮರನ್ ತೇಗ ವೃಕ್ಷಗಳು ಹಾಗೂ ಅಮೃತಸರದ ಸ್ವರ್ಣದೇವಾಲಯದಲ್ಲಿರುವ ಪುರಾತನ ಬೇರ್ ಮರಗಳು. ಇವುಗಳಲ್ಲಿ ಕೆಲವು ಎಲ್ಲೆಡೆಯಿಂದಲೂ. ಪ್ರವಾಸಿಗಳನ್ನು ಸೆಳೆಯುಷ್ಟು ಸುಪ್ರಸಿದ್ಧ. ಇನ್ನು ಕೆಲವು ಕೇವಲ ಆಯಾ ಪ್ರಾಂತ್ಯದಲ್ಲಿ ಮಾತ್ರ ಪ್ರಸಿದ್ಧ.

ಭಾರತದಲ್ಲಿ ಸುಪ್ರಸಿದ್ಧವಾದ, ಅಲ್ಪ ಪ್ರಸಿದ್ಧವಾದ ಹಾಗೂ ನಮಗಾರಿಗೂ ಗೊತ್ತೇ ಇಲ್ಲದ ಕಣ್ಮಣಿ ಮರಗಳನ್ನು ಗುರುತಿಸಿ, ವಿಜ್ಞಾನ, ಜನತೆ, ಸಂಸ್ಕೃತಿ ಹಾಗೂ ಚರಿತ್ರೆಗೆ ಇರುವ ಅವುಗಳ ನಂಟಿನ ಬಗ್ಗೆ ಈ ಲೇಖನ ಚುಟುಕಾಗಿ ತಿಳಿಸಲಿದೆ. ಇಂತಹ ನೂರಾರು ಮರಗಳ ಕಥೆಗಳು ಇವೆ. ಇನ್ನೂ ಇರಬಹುದು.

ಕಣ್ಮಣಿಗಳು ಏಕೆ ಮುಖ್ಯವಾಗುತ್ತವೆ?

ಪರಿಸರ, ಆರ್ಥಿಕ ಹಾಗೂ ಸಾಂಸ್ಕೃತಿಕವಾಗಿ ಮರಗಳು ಬಹಳ ಮುಖ್ಯ. ಇವು ಹವಾಗುಣ ಬದಲಾವಣೆಯನ್ನು ತಡೆಯುತ್ತವೆ, ಮಲಿನ ಗಾಳಿಯನ್ನು ಶುಚಿಗೊಳಿಸುತ್ತವೆ, ಊದಾತೀತ ಕಿರಣಗಳಿಂದ ನಮ್ಮನ್ನು ರಕ್ಷಿಸುತ್ತವೆ, ನಗರ–ಪಟ್ಟಣಗಳನ್ನು ತಣ್ಣಗಿರಿಸುತ್ತವೆ, ನೆರಳು ಕೊಡುತ್ತವೆ, ನೀರು ಮತ್ತು ಶಕ್ತಿಯನ್ನು ಉಳಿತಾಯ ಮಾಡಲು ನೆರವಾಗುತ್ತವೆ, ಮಾಲಿನ್ಯವನ್ನು ಕಡಿಮೆ ಮಾಡುತ್ತವೆ, ಮಣ್ಣಿನ ಸವಕಳಿಯನ್ನು ತಡೆಯುತ್ತವೆ, ಮರಮುಟ್ಟು, ಆಹಾರ, ಔಷಧ ಮೊದಲಾದ ಉಪಯುಕ್ತ ಉತ್ಪನ್ನಗಳ ಮೂಲವೂ ಆಗಿವೆ. ಜೊತೆಗೇ ವನ್ಯಜೀವಿಗಳಿಗೆ ಆಶ್ರಯ ಮತ್ತು ನೆರಳನ್ನು ನೀಡುತ್ತವೆ. ಇವು ನೋಡಲು ಸುಂದರವಷ್ಟೆ ಅಲ್ಲ, ಹೂವು, ಹಣ್ಣುಗಳನ್ನು ತಳೆದಾಗ, ಋತುಗಳನ್ನು ತಿಳಿಸುವ ಸೂಚಿಗಳೂ ಆಗುತ್ತವೆ. ಆಸ್ತಿಯ ಬೆಲೆಯನ್ನು ಹೆಚ್ಚಿಸುವುದಲ್ಲದೆ, ಇನ್ನೂ ಹಲವು ಉಪಯೋಗಗಳಿವೆ.

ಜೀವಿಗಳ ಆಯುಸ್ಸು, ಪುರಾತನ ಕಾಲದ ಹವಾಮಾನ ಬದಲಾವಣೆಗಳ ಘಟನೆಗಳು ಮೊದಲಾದ ಜೈವಿಕ ಅರಿವನ್ನು ನೀಡುವ ಸಾಧನಗಳಾದ ಮರಗಳು ಜೀವಿನೆಲೆಯಾಗಿ, ನೆಲಜೀವಿಗಳಿಗೆ ಆಸರೆಯಾಗಿ, ಭೂರಚನೆಯ

ಚೆದುರಿದ ರಾಯ ಸಿರಿ ನಲ್ಲೂರು ಹುಣಿಸೆ ತೋಪು

ಬೆಂಗಳೂರು ಬಳಿಯ ದೇವನಹಳ್ಳಿ ತಾಲೂಕಿನ ಗ್ರಾಮವೊಂದರ ಅಂಚಿನಲ್ಲಿ ಉತ್ತಮವಾಗಿ ಸಂರಕ್ಷಿಸಿದ ಹುಣಿಸೆ ತೋಪೊಂದಿದೆ. ಊರಜನರು ಅಮರಾತಿ ತೋಪು ಎಂದು ಕರೆಯುವ ನಲ್ಲೂರಿನ ಈ ಹುಣಿಸೆ ತೋಪು ಸುಮಾರು 21.06 ಎಕರೆ ಹರಡಿಕೊಂಡಿದ್ದು, ಮುನ್ನೂರು ಹುಣಿಸೆಮರಗಳಿಗೆ ನೆಲೆಯಾಗಿದೆ. ಈ ಮರಗಳಲ್ಲಿ ಕೆಲವು ನೂರಾರು ವರ್ಷ ವಯಸ್ಸಾದಂಥವು. ಈ ಪ್ರಾಂತ್ಯದಲ್ಲಿ ಚೋಳರ ಸಾಮ್ರಾಜ್ಯವಿದ್ದ ಕಾಲದಲ್ಲಿ ಅಂದರೆ ಕ್ರಿಸ್ತಶಕ ಹದಿಮೂರನೆಯ ಶತಮಾನದಲ್ಲಿ ಈ ತೋಪು ಹುಟ್ಟಿತೆನ್ನಲಾಗಿದೆ. ತೋಪಿನ ನಡುವೆ ಇರುವ, ಆದರೆ ಈಗ ಪೂಜೆ, ಪುನಸ್ಕಾರಗಳಿಲ್ಲದೆ ಪಾಳುಬಿದ್ದ ಗೋಪಾಲಸ್ವಾಮಿ ಮಂದಿರ, ಈ ನೆಲೆ ಎಷ್ಟು ಪುರಾತನ ಎನ್ನುವುದಕ್ಕೆ ಪುರಾವೆ.

ನಡುನಡುವೆ ಪೊದೆಗಳು ಬೆಳೆದು ಕಾಡಾದ ಹುಣಿಸೆ ತೋಪು ಇದೆ. ಇಲ್ಲಿರುವ ಮುನ್ನೂರು ಮರಗಳಲ್ಲಿ ಹದಿನೆಂಟು ಮರಗಳು ಬಹಳ ವಯಸ್ಸಾದಂಥವು. ಉಳಿದವು ಮಧ್ಯಮ ವಯಸ್ಸಿನವು ಇಲ್ಲವೇ ಇತ್ತೀಚೆಗೆ ಬೆಳೆದಂಥವು. ತೊಗಟೆಯ ಕಾರ್ಬನ್ ಡೇಟಿಂಗ್ ಪರೀಕ್ಷೆ ತೋಪಿನಲ್ಲಿರುವ ಒಂದು ಮರ 400 ವರ್ಷಗಳಷ್ಟು ಹಳೆಯದು ಎಂದು ಸೂಚಿಸಿದೆ. ಇದರ ಅರ್ಧದಷ್ಟು ವಯಸ್ಸಾದ ಇನ್ನೂ ಹಲವು ಮರಗಳು ತೋಪಿನಲ್ಲಿವೆ.. ತೋಪಿನಲ್ಲಿರುವ ಈ ಹಳೆಯ ಮರಗಳು ಬೆರಗು ಮೂಡಿಸುತ್ತವೆ.

ತೊಗಟೆಯ ಕಾರ್ಬನ್ ಡೇಟಿಂಗ್ ಪರೀಕ್ಷೆ ತೋಪಿನಲ್ಲಿರುವ ಒಂದು ಮರ 400 ವರ್ಷಗಳಷ್ಟು ಹಳೆಯದು ಎಂದು ಸೂಚಿಸಿದೆ. ಇದರ ಅರ್ಧದಷ್ಟು ವಯಸ್ಸಾದ ಇನ್ನೂ ಹಲವು ಮರಗಳು ತೋಪಿನಲ್ಲಿವೆ.. ತೋಪಿನಲ್ಲಿರುವ ಈ ಹಳೆಯ ಮರಗಳು ಬೆರಗು ಮೂಡಿಸುತ್ತವೆ.

ಕೆಲವದರ ಸುತ್ತಳತೆ ಎಂಟರಿಂದ ಒಂಭತ್ತು ಮೀಟರಿನಷ್ಟಿದೆ. ನಯವಾದ ಕಾಂಡಗಳೂ ಇವೆ. ಒರಟಾದಂಥವೂ ಇವೆ. ಕೆಲವದರಲ್ಲಿ ಸುಕ್ಕು ಬಂದಂತೆ ಆಳವಾದ ಗೀರುಗಳು ಮೂಡಿವೆ. ಇನ್ನು ಕೆಲವದರ ಕಾಂಡಗಳು ಹಿಂಡಿದ ಬಟ್ಟೆಯಂತೆ ಸುರುಳಿಯಾಗಿವೆ. ಬಹುತೇಕ ಕಾಂಡಗಳ ನಡುಭಾಗದಲ್ಲಿನ ಅಂಗಾಂಶಗಳು ನಶಿಸಿ ಹೋಗಿರುವುದರಿಂದ,. ವಿವಿಧ ಗಾತ್ರ ಹಾಗೂ ಆಕಾರದ ಪೊಟರೆಗಳು ಹುಟ್ಟಿ, ಪೊಳ್ಳಾಗಿವೆ. ಇಂತಹ ಸ್ವರೂಪ ಹುಣಿಸೆಮರಗಳಲ್ಲಿ ಸಾಮಾನ್ಯವಷ್ಟೆ. ವಿಶೇಷವೆಂದರೆ ಹಲವಾರು ಹಳೆಯ

ಮರಗಳ ಪೊಳ್ಳುಗಳೊಳಗಡೆಯಿಂದ ಬಿಳಲು ಬೇರುಗಳು ಹುಟ್ಟಿರುವುದು. ಬಹುತೇಕ ಬಿಳಲುಗಳು ನೆಲ ಮುಟ್ಟುವುದಕ್ಕೂ ಮುನ್ನ ವಿವಿಧ ಉದ್ದದವುಗಳಾಗಿ ನಿಂತಿವೆ. ಆದರೆ ಕೆಲವು ನೆಲಮುಟ್ಟಿ ತಾಯಿ ಕಾಂಡಕ್ಕೆ ಆಸರೆಯಾಗಿ ನಿಂತಿರುವುದನ್ನೂ ಕಾಣಬಹುದು. ಬೇರಾವ ಹುಣಿಸೆಯಲ್ಲಿಯೂ ಕಾಣದ ಮತ್ತೊಂದು ವಿಶೇಷ ಎಂದರೆ ಕೆಲವು ಬಿಳಲುಗಳು, ಮೂಲಕಾಂಡದೊಳಗೆ ನೆಟ್ಟು, ಅಲ್ಲಿಯೇ ಮೊಳೆತು ಗಿಡವಾಗಿ, ಹೂ ಹಣ್ಣುಗಳನ್ನು ತಳೆದಿರುವುದನ್ನೂ ಕಾಣಬಹುದು. ಸಾಧಾರಣವಾಗಿ ಏಪ್ರಿಲ್, ಮೇ ತಿಂಗಳಿನಲ್ಲಿ ಮರಗಳು ಹೂತಳೆದು ಫಲ ಕೊಡುತ್ತಿರುವುದನ್ನು ಕಾಣಬಹುದು. (ಹುಣಿಸೆ ಮುಪ್ಪಾದರೂ, ಹುಳಿ ಮುಪ್ಪೇ!) ಹುಣಿಸೆ ತೋಪಿನ ಫಲವನ್ನೆಲ್ಲ ಅರಣ್ಯ ಇಲಾಖೆ ಹರಾಜು ಹಾಕುತ್ತದೆ.

ಹುಣಿಸೆಯ ಬೆಳವಣಿಗೆ ಬಹಳ ನಿಧಾನವೇ. ಆದರೆ ಬಾಳಿಕೆ ದೀರ್ಘ. ಕೆಲವು ಸ್ಥಾನೀಕ ದಂತಕಥೆಗಳು ಈ ತೋಪಿನ ವಯಸ್ಸನ್ನು 800ರಿಂದ 900 ವರ್ಷ ಹಳೆಯದೆನ್ನುತ್ತವೆ. ಒಂದು ಕಥೆಯ ಪ್ರಕಾರ ಬಹಳ ಹಿಂದೆ ನಲ್ಲೂರು ಕೋಟೆಯಿಂದ ಸುತ್ತುವರೆದ ಒಂದು ಪುಟ್ಟ ರಾಜ್ಯವಾಗಿತ್ತು. ರಾಜದಂಪತಿಗಳಿಗೆ ಸುಂದರಿ ಮಗಳೊಬ್ಬಳಿದ್ದಳು. ಅವಳ ಸೌಂದರ್ಯಕ್ಕೆ ಮಾರುಹೋದ ನೆರೆರಾಜ್ಯವಾದ ದಾಳಿಕೋಟೆಯ ರಾಜಕುಮಾರ ರಾಜಕುಮಾರಿಯ ಕೈ ಹಿಡಿಯಲು ಬಯಸಿದ್ದ. ನಲ್ಲೂರಿನ ರಾಜ ಇದು ಸರಿಯಾದ ಜೋಡಿಯಲ್ಲ ಎಂದು ಒಪ್ಪಲಿಲ್ಲ. ಇದರಿಂದ ಕೋಪಗೊಂಡ ದಾಳಿಕೋಟೆಯ ರಾಜಕುಮಾರ ಸೇನೆಯೊಂದಿಗೆ ನಲ್ಲೂರಿಗೆ ಮುತ್ತಿಗೆ ಹಾಕಿದ. ಇತ್ತ ರಾಜನಿಗೆ ಅರಿವಾಗದೆಯೇ ರಾಜಕುಮಾರಿ ಆ ರಾಜಕುಮಾರನನ್ನು ಪ್ರೇಮಿಸಿದ್ದಳು. ಗುಟ್ಟಾಗಿ ನಲ್ಲೂರಿನ ಕೋಟೆಯೊಳಗೆ ಬರುವ ಸುರಂಗದ ಹಾದಿಯ ಬಗ್ಗೆ ತಿಳಿಸಿದಳು. ಅದರ ಮೂಲಕ ದಾಳಿ ಮಾಡಿದ ರಾಜಕುಮಾರ ಯುದ್ಧವನ್ನು ಗೆದ್ದ. ಯುದ್ಧದಲ್ಲಿ ಸೋತ ರಾಜ ಪಲಾಯನ ಮಾಡುವ ಮುನ್ನ, ತನ್ನೆಲ್ಲ ಒಡವೆ, ವಸ್ತುಗಳನ್ನೂ ಹುಣಿಸೆ ಬೀಜಗಳ ಜೊತೆಗೆ ಸೇರಿಸಿ, ರಾಜ್ಯದೆಲ್ಲೆಡೆ ಹೂತು ಬಿಟ್ಟಿದ್ದ. ಅನಂತರ ಅದನ್ನು ಅಗೆದು ತೆಗೆದುಕೊಳ್ಳುವ ಯೋಚನೆ ಮಾಡಿದ್ದ. ನಾವೀಗ ಕಾಣುವ ಹುಣಿಸೆ ತೋಪು ಈ ಬೀಜಗಳಿಂದ ಹುಟ್ಟಿದ್ದು ಎನ್ನುತ್ತದೆ ಕಥೆ.

ಶತಮಾನಗಳ ಕಾಲ ಮಳೆ, ಬಿಸಿಲನ್ನು ಎದುರಿಸಿರುವ ಈ ಚಾರಿತ್ರಿಕ ತೋಪು ಈಗ ಅವಗಣನೆಗೊಳಗಾದ ಸ್ಥಿತಿಯಲ್ಲಿದೆ. ಇದನ್ನೊಂದು ಪಾರಂಪರಿಕ ತಾಣವೆಂದು ಘೋಷಿಸಿವುದರ ಹೊರತಾಗಿ ಕರ್ನಾಟಕ ಅರಣ್ಯ ಇಲಾಖೆಯು ತೋಪಿನ ರಕ್ಷಣೆಗೆ ಹೆಚ್ಚಿನದೇನನ್ನೂ ಮಾಡಿದಂತಿಲ್ಲ. ತೋಪನ್ನು ಸುತ್ತುವರೆದ ಬೇಲಿ ಕೂಡ ಅರೆಬರೆಯಾಗಿದ್ದು, ನೆರೆಹೊರೆಯ ಹಳ್ಳಿಗಳ ಜನರಿಗೆ ಉರುವಲು ಆಯಲು, ದನಗಳನ್ನು ಮೇಯಿಸಲು ಅನುಕೂಲವಾಗಿದೆ. ಆಗಿಂದಾಗ್ಗೆ ಇಲ್ಲಿನ ಸ್ಥಳೀಯ ಮಾಧ್ಯಮಗಳಲ್ಲಿ ಕಾಣಿಸುವ ಎಚ್ಚರಿಕೆಯ ಮಾತುಗಳು ಯಾರ ಕಿವಿಗೂ ಬಿದ್ದಂತೆ ಇಲ್ಲ.

1919ನೇ ಇಸವಿಯಲ್ಲಿ ಗುರುದೇವ ರವೀಂದ್ರನಾಥ ಠಾಗೋರರು ಬೆಂಗಳೂರಿಗೆ ಮೊತ್ತ ಮೊದಲು ಭೇಟಿ ಇತ್ತ ಸಮಯದಲ್ಲಿ ಅವರನ್ನು ಸುಪ್ರಸಿದ್ಧ ಲಾಲ್ಬಾಗ್ನಲ್ಲಿರುವ ಎಂಟು ಅತ್ತಿ ಮರಗಳ ನೆರಳಲ್ಲಿ ಸನ್ಮಾನಿಸಲಾಗಿತ್ತು. ಫೈಕಸ್ ಬೆಂಜಮಿನಾ ಅಥವಾ ಅಳುವ ಅಂಜೂರ ಎಂದೂ ಹೇಳುವ ಇವುಗಳಲ್ಲಿ ಇದೊಂದೇ ಮರ ಉಳಿದಿತ್ತು. ಕಳೆದ ವರ್ಷದ ಗಾಳಿ, ಮಳೆಗೆ ಸಿಲುಕಿ ಅದುವೂ ಧರೆಗೊರಗಿತು.

ಹಾಗೂ ಜೈವಿಕ ವೈವಿಧ್ಯದ ಅವಿಭಾಜ್ಯ ಅಂಗಗಳು. ವಾಯುಮಂಡಲದಲ್ಲಿ ಹೆಚ್ಚುವರಿ ಕಾರ್ಬನ್ ಡಯಾಕ್ಸೈಡು ಕೂಡಿಕೊಳ್ಳದಂತೆ ಮಾಡುವ ಅಮೂಲ್ಯ ಕಾರ್ಬನ್ ಸಿಂಕುಗಳು. ವಿವಿಧ ಪರಿಸರನೆಲೆಗಳನ್ನು ಒಂದು ಗೂಡಿಸುವ ಜೀವಿಗಳು. ಜೀವಿಗಳ ಹಾಗೂ ನಮ್ಮ ಆರೋಗ್ಯಕ್ಕೆ ಮರಗಳ ಕೊಡುಗೆ ಅಪಾರ. ಅಗಣಿತ.

ಕೀಟಗಳ ಹಾಗೂ ಇತರೆ ಅಕಶೇರುಕ ಜೀವಿಗಳ ಬೇಟೆಗಾರರಿಗೆ ಆಶ್ರಯ ನೀಡುವ ಮರಗಳು ಅದರಲ್ಲಿಯೂ ವಿಶೇಷವಾಗಿ ಹಳೆಯ ಮರಗಳು

ಜೈವಿಕ ಕೀಟನಿಯಂತ್ರಣದಲ್ಲಿ ಪ್ರಮುಖ ಪಾತ್ರಧಾರಿಗಳು. ದೊಡ್ಡಗಾತ್ರದ ಕಾಂಡಗಳಿರುವ ಹಳೆಯ ಮರಗಳು ಸಣ್ಣ ಮರಗಳಿಗೆ ಹೋಲಿಸಿದರೆ, ಅಗಾಧ ಪ್ರಮಾಣದ ಕಾರ್ಬನ್ ಡಯಾಕ್ಸೈಡನ್ನು ಹೀರಿಕೊಳ್ಳಬಲ್ಲವು. ಮರಗಳ ಈ ಗುಣವೇ ಹವಾಮಾನ ನಿಯಂತ್ರಣದಲ್ಲಿ ಅವುಗಳ ಪಾತ್ರವೆಷ್ಟು ಪ್ರಮುಖವೆಂದು ಹೇಳುತ್ತದೆ. ಹಳೆಯ ಮರಗಳು ಪಾರಂಪರಿಕವಾಗಿ ಮುಖ್ಯವಷ್ಟೆ ಅಲ್ಲ, ಅವು ಪುರಾತನ ಕಾಲದಲ್ಲಿದ್ದ ಹವಾಗುಣಗಳನ್ನೂ ಪ್ರಭಾವಿಸಿದ್ದವಷ್ಟೆ. ಹೀಗಾಗಿ ಇವು ಪರಿಸರದ ಚರಿತ್ರೆಯ ಜೀವಂತ ದಾಖಲೆಗಳೂ ಹೌದು.

ಎಲ್ಲ ಮರಗಳ ಗುಂಪುಗಳೂ ಮುಖ್ಯವೇ ಆದರೂ, ಹಳೆಯ ಮರಗಳು ವಿಶೇಷತಃ ಬಹಳ ಮುಖ್ಯ. ಅಮೆರಿಕದ ಕೆಲಿಫೋರ್ನಿಯಾದಲ್ಲಿರುವ ಮೆಥುಸೆಲಾ ಎಂದು ಹೆಸರುವಾಸಿಯಾದ 4,850 ವರ್ಷ ಪುರಾತನ ಬ್ರಿಸಲ್ ಕೋನ್ ಮರ ಹಾಗೂ ಚಿಲಿಯಲ್ಲಿರುವ 3,600 ವರ್ಷ ಹಳೆಯ ಅಲರ್ಸಿ ಮರ ಶತಮಾನಗಳಷ್ಟು ದೀರ್ಘ ಅಯುಸ್ಸಿಗೆ ಉತ್ತಮ ಉದಾಹರಣೆಗಳು. ಅಷ್ಟೇ ಅಲ್ಲ. ಇಂದಿರುವ ಮರಗಳನ್ನು ನಾವೇಕೆ ಸಂರಕ್ಷಿಸಿ, ಉಳಿಸಿಕೊಳ್ಳಬೇಕು. ಹೊಸ ಮರಗಳನ್ನು ಬೆಳೆಸಬೇಕು ಎನ್ನುವುದಕ್ಕೆ ಪ್ರಬಲ ಪ್ರೇರಕಗಳು ಕೂಡ.

ನೋಟ ಹಾಗೂ ಸೌಂದರ್ಯಗಳ ಖನಿಯಷ್ಟೆ ಅಲ್ಲದೆ, ಈ ಕಣ್ಮಣಿ ಮರಗಳು ನಮ್ಮ ಚಾರಿತ್ರಿಕ, ಪಾರಂಪರಿಕ ಆಸ್ತಿಗಳೂ ಆಗಿವೆ. ಸ್ಥಳೀಯ ಸಂಪ್ರದಾಯಗಳತ್ತ ಗಮನ ಸೆಳೆಯುವ ವಸ್ತುಗಳಾಗಿವೆ. ಅವುಗಳ ಇರವೇ ಅಲ್ಲಿನ ಸಮುದಾಯ ಹಾಗೂ ಸ್ಥಳದ ಜೊತೆಗಿನ ದೀರ್ಘ ಒಡನಾಟಕ್ಕೆ, ದಂತಕಥೆಗಳಿಗೆ, ಘಟನೆಗಳಿಗೆ, ಪುರಾಣಕ್ಕೆ ಸಾಕ್ಷಿ. ಯುಗಯುಗಾದಿಗಳು ಬಂದು ಹೋಗುತ್ತವೆ. ನದಿಗಳು ಉಕ್ಕಿ ಹರಿಯುತ್ತವೆ. ರೋಗರುಜಿನಗಳು ಇಡೀ ಸಮುದಾಯವನ್ನೇ ನಾಶ ಮಾಡಿಬಿಡುತ್ತವೆ. ಕಾಲ ಉರುಳುತ್ತಲೇ ಇರುತ್ತದೆ. ಆದರೆ ಮರಗಳು ಮಾತ್ರ ಇನ್ನಷ್ಟು ಜೀವಗಳಿಗೆ ಹುಟ್ಟನ್ನು ನೀಡಿ, ಹಲವಾರು ತಲೆಮಾರುಗಳವರೆಗೂ ಅಮರವಾಗಿ ಉಳಿಯುತ್ತವೆ. ಅವುಗಳ ಸುದೀರ್ಘ ಬದುಕೇ ಮನುಷ್ಯರು ಮರಗಳನ್ನು ಹಲವು ಪುರಾತನ ಘಟನೆಗಳಿಗೆ ಸಾಕ್ಷಿ ಎಂದು ಕಲ್ಪಿಸಿಕೊಳ್ಳುವಂತೆ ಮಾಡಿದೆ. ಹೊಸ ಯುಗದ ಆಗಮನ, ಸಾಮುದಾಯಿಕ ಪಲ್ಲಟಗಳು, ಪೌರಾಣಿಕ ಪ್ರೇಮಕಥೆಗಳು, ವಾಣಿಜ್ಯದ ಒಪ್ಪಂದಗಳು, ಕಪ್ಪುಕಲೆ ಎನ್ನಿಸುವ ಘಟನೆಗಳು, ಕ್ರೂರ ಕ್ಷಣಗಳೆಲ್ಲವನ್ನೂ ಇಂತಹ ಮರಗಳು ಕಂಡಿರುತ್ತವೆ.

ಸುಪ್ರಸಿದ್ಧವೆನ್ನಿಸುವ, ಕುಖ್ಯಾತ ಎನ್ನಿಸುವ ಘಟನೆಗಳು ನಿರ್ದಿಷ್ಟ ಮರ ಅಥವಾ ಕಾಡುಗಳಲ್ಲಿ ನಡೆದ ಬಗ್ಗೆ ಕೇಳಿದ್ದೇವೆ. ಸುಪ್ರಸಿದ್ಧ ರಾಬಿನ್ಹುಡ್ ಕಥೆಯನ್ನೇ ನೆನಪಿಸಿಕೊಳ್ಳಿ. ಕಾಲದ ಹರಿವಿನಲ್ಲಿ ಆತ ಯಾರೆಂದು ಮರೆತೇ ಹೋಗಿದೆ. ಆದರೆ ಅವನ ನಂಟು ಇದ್ದ ಕಾಡಿನ ನೆನಪು ಮಾತ್ರ ಅಳಿದಿಲ್ಲ. ತಿರುವನಂತಪುರದ ರಾಜ ಮಾರ್ತಾಂಡ ವರ್ಮನನ್ನು (1706–1758) ಶತ್ರುಗಳು ಬೆನ್ನು ಹತ್ತಿದ್ದಾಗ, ಹಲಸಿನ ಮರವೊಂದರ ಪೊಟರೆಯಲ್ಲಿ ಅಡಗಿ ಕುಳಿತುಕೊಳ್ಳಲು ಕುರಿಗಾಹಿ ಹುಡುಗನೊಬ್ಬ ನೆರವು ನೀಡಿದ್ದನೆಂಬ ಕಥೆ ಇದೆ. ಬದುಕುಳಿದ ರಾಜ ಸ್ವತಃ ಕೃಷ್ಣನೇ ಹುಡುಗನ ಅವತಾರದಲ್ಲಿ ಬಂದು

ಲಕ್ನೋ ಪಟ್ಟಣದ ಸಮೀಪದಲ್ಲಿರುವ ಕಿಂಟೂರಿನಲ್ಲಿರುವ ಬೃಹತ್ ಬಾಓಬಾಬ್ ಮರ. ಇದನ್ನು ಪುರಾಣದ ಪಾರಿಜಾತ ಎಂದು ಭಾವಿಸಲಾಗಿದೆ. ಇದು 5000 ವರ್ಷಗಳಷ್ಟು ಹಳೆಯದೆನ್ನುವ ಪ್ರತೀತಿ ಇದ್ದರೂ ವೈಜ್ಞಾನಿಕ ರೇಡಿಯೊ ಕಾರ್ಬನ್ ಪರೀಕ್ಷೆಗಳು ಅದು ಸುಮಾರು 800 ವರ್ಷ ವಯಸ್ಸಿನದ್ದು ಎಂದು ತಿಳಿಸಿವೆ.

ಹೊಸಕೋಟೆ ತಾಲೂಕಿನ ರಾಮಗೋವಿಂದಪುರದ ಬಳಿ ಇರುವ ಆಲದ ಮರದಲ್ಲಿ ಇರುವ 630 ಹೆಜ್ಜೇನು (ಎಪಿಸ್ ಡಾರ್ಸಾಟ)ಗಳ ಗೂಡುಗಳು ಒಂದೇ ಮರದಲ್ಲಿರುವ ಜೇನುಗೂಡುಗಳ ಸಂಖ್ಯೆಯಲ್ಲಿ ವಿಶ್ವದಾಖಲೆ ಸ್ಥಾಪಿಸಿವೆ. ಕೆಲವೊಂದು ಋತುವಿನಲ್ಲಿ ಈ ಮರದಲ್ಲಿ ಏನಿಲ್ಲವೆಂದರೂ ನಾಲ್ಕೂವರೆಯಿಂದ ಆರೂಕಾಲು ಕೋಟಿ ಜೇನ್ನೊಣಗಳು ವಾಸವಿರುತ್ತವೆ!

ಬದುಕಿದ್ದಾಗಲೂ ಅಮೋಘ. ಸತ್ತ ಮೇಲೂ ಬೆರಗು.

ತನ್ನನ್ನು ರಕ್ಷಿಸಿದನೆಂದು ಭಾವಿಸಿ, ಅಲ್ಲಿ ದೇವಾಲಯವೊಂದನ್ನು ಕಟ್ಟಿ, ಕೃಷ್ಣನ ಜೊತೆಗೆ ಆ ಮರವನ್ನೂ ಪೂಜಿಸುತ್ತಿದ್ದ. ಮಲಯಾಳದಲ್ಲಿ ಅಮ್ಮಚ್ಚಿಪ್ಲಾವು ಅಥವಾ ಅಜ್ಜಿಹಲಸು ಎನ್ನುವ ಈ ಮರ, 1970ನೇ ಇಸವಿಯವರೆಗೂ ಫಲ ಬಿಡುತ್ತಿತ್ತು. ಈಗ ಅದರ ಬೊಡ್ಡೆಯೊಂದನ್ನು ತಿರುವನಂತಪುರ ಸಮೀಪದಲ್ಲಿರುವ ದೇವಾಲಯವೊಂದರಲ್ಲಿ ಸಂರಕ್ಷಿಸಿ ಇಡಲಾಗಿದೆ.

ವಿಶೇಷವಾದ ಕೆಲವು ಮರಗಳನ್ನು ಬುದ್ಧಿವಂತ ಜೀವಿಗಳೆಂದೋ, ದೇವರ ನೆಲೆಯೆಂದೋ ಭಕ್ತಿ, ಗೌರವದಿಂದ ಪೂಜಿಸುವುದು ನಮಗೆ ಅಚ್ಚರಿಯ ವಿಷಯವೇನಲ್ಲ. ಕಾಲ, ದೇಶ, ಸಂಸ್ಕೃತಿಗಳನ್ನೂ ಮೀರಿದ ಮರಪೂಜೆಗಳು ಬಹುದೈವಗಳಲ್ಲಿ ವಿಶ್ವಾಸವಿಡುವ ಸಂಸ್ಕೃತಿಗಳಲ್ಲಿ ಸಾಮಾನ್ಯ. ಹಾಗಿದ್ದೂ, ಸಂರಕ್ಷಣಾ ಕ್ರಮ ಹಾಗೂ ನೀತಿಗಳನ್ನು ರೂಪಿಸುವಾಗ ಮರಗಳ ಇಂತಹ ಸಾಮಾಜಿಕ ಹಾಗೂ ಜೀವ–ಸಾಂಸ್ಕೃತಿಕ ಮೌಲ್ಯಗಳನ್ನು ಪರಿಗಣಿಸುವುದೇ ಇಲ್ಲ.

ಜೀವಿವೈವಿಧ್ಯಕ್ಕೆ ಇದು ವಿಷಮ ಕಾಲ. ದಶಲಕ್ಷಕ್ಕೂ ಹೆಚ್ಚು ಸಸ್ಯ ಹಾಗೂ ಪ್ರಾಣಿ ಜೀವಿಗಳು ಅಳಿವಿನಂಚಿನಲ್ಲಿ ಇವೆ ಎಂದು ಅಂದಾಜಿಸಲಾಗಿದೆ. ಇಂಗ್ಲೆಂಡಿನ ಬಟಾನಿಕ್ ಗಾರ್ಡನ್ಸ್ ಕನ್ಸರ್ವೇಶನ್ ಇಂಟರ್ನ್ಯಾಶನಲ್ ಸಂಸ್ಥೆಯು ಪ್ರಪಂಚದ ವಿವಿಧೆಡೆಗಳಲ್ಲಿರುವ ಮರಗಳ ಸ್ಥಿತಿಗತಿಗಳ ಬಗ್ಗೆ ಸಿದ್ಧಪಡಿಸಿರುವ ವರದಿಯು 60000 ಮರ ಪ್ರಭೇದಗಳಲ್ಲಿ, ಸುಮಾರು 17510 ಪ್ರಭೇದಗಳು, ಅಂದರೆ ಸರಿಸುಮಾರು ಮೂರನೇ ಒಂದು ಭಾಗದಷ್ಟು ಮರಗಳು, ಅಳಿವಿನ ಅಂಚಿನಲ್ಲಿವೆ ಎಂದು ಎಚ್ಚರಿಸಿದೆ. ಇದು ಅಳಿವಿನ ಅಂಚಿನಲ್ಲಿವೆ ಎಂದು ಅಂದಾಜಿಸಲಾದ ಸ್ತನಿಗಳು, ಕಪ್ಪೆಗಳಂತಹ ಉಭಯಜೀವಿಗಳು ಹಾಗೂ ಉರಗಗಳ ಪ್ರಭೇದಗಳೆಲ್ಲದರ ದುಪ್ಪಟ್ಟು ಸಂಖ್ಯೆ. ಪ್ರಪಂಚದ ಹಲವೆಡೆಗಳಲ್ಲಿ ದೊಡ್ಡ, ಪುರಾತನ ಮರಗಳ ಅಳಿವಿನ ಬಗ್ಗೆ ಕಾಳಜಿ ಹೆಚ್ಚುತ್ತಿದೆ. ಮೇಯುವುದು ವ್ಯಾಪಕವಾಗಿರುವ ಕೆಲಿಫೋರ್ನಿಯಾ, ಕೋಸ್ಟಾರಿಕಾ, ಸ್ಪೇನ್ ಹಾಗೂ ಉಳಿದೆಡೆಗಳಲ್ಲಿ ದೊಡ್ಡ, ಹಳೆಯ ಮರಗಳ ಸಂಖ್ಯೆ ಕ್ಷೀಣಿಸುತ್ತಿದ್ದು, ಮುಂದಿನ ಶತಮಾನದೊಳಗೆ ಇವು ಕಣ್ಮರೆಯಾಗಬಹುದೆಂದು ಗಣಿಸಲಾಗಿದೆ.

ಮೇಯುವುದು ವ್ಯಾಪಕವಾಗಿರುವ ಕೆಲಿಫೋರ್ನಿಯಾ, ಕೋಸ್ಟಾರಿಕಾ, ಸ್ಪೇನ್ ಹಾಗೂ ಉಳಿದೆಡೆಗಳಲ್ಲಿ ದೊಡ್ಡ, ಹಳೆಯ ಮರಗಳ ಸಂಖ್ಯೆ ಕ್ಷೀಣಿಸುತ್ತಿದ್ದು, ಮುಂದಿನ ಶತಮಾನದೊಳಗೆ ಇವು ಕಣ್ಮರೆಯಾಗಬಹುದೆಂದು ಗಣಿಸಲಾಗಿದೆ.

ಇತ್ತೀಚೆಗೆ ನೇಚರ್ ಪತ್ರಿಕೆಯಲ್ಲಿ ಪ್ರಕಟವಾದ ಶೋಧಪ್ರಬಂಧವೊಂದು ಆಸ್ಟ್ರೇಲಿಯಾದ ಉತ್ತರ ಭಾಗದಲ್ಲಿರುವ ಹಳೆಯ ಉಷ್ಣವಲಯದ ಕಾಡುಗಳಲ್ಲಿ ಮರಣಿಸುತ್ತಿರುವ ಮರಗಳ ಪ್ರಮಾಣ 1980ರಲ್ಲಿದ್ದುದರ ದುಪ್ಪಟ್ಟಾಗಿದೆ ಎನ್ನುತ್ತದೆ. ಸಂಶೋಧಕರ ಪ್ರಕಾರ ಹವಾಮಾನ ಬದಲಾವಣೆ, ಅದರಲ್ಲಿಯೂ ವಿಶೇಷವಾಗಿ ವಾಯುಮಂಡಲದಲ್ಲಿನ ತೇವಾಂಶದ ಒತ್ತಡ, ಅಥವಾ ಗಾಳಿಯ ಒಣಗಿಸುವ ಸಾಮರ್ಥ್ಯ ಕುಗ್ಗಿದ್ದು ಇದಕ್ಕೆ ಕಾರಣ. ಬಹುಶಃ ಇದು ಅಲ್ಲಿನ ಹವಾಮಾನದ ಉಷ್ಣತೆ ಹೆಚ್ಚಿದ್ದರಿಂದ ಆಗಿರಬಹುದೆನ್ನುವುದು ಊಹೆ. ಕಳೆದ ನಲವತ್ತೊಂಭತ್ತು ವರ್ಷಗಳಿಂದಲೂ ಉತ್ತರ ಆಸ್ಟ್ರೇಲಿಯಾದ ಕ್ವೀನ್ಸ್ಲ್ಯಾಂಡಿನಲ್ಲಿರುವ ಇಪ್ಪತ್ತನಾಲ್ಕು ಪ್ರಾಂತ್ಯಗಳಲ್ಲಿ ಮರಣಿಸುತ್ತಿರುವ ಮರಗಳ ಸಂಖ್ಯೆಯ ಬಗ್ಗೆ ಇಟ್ಟಿದ್ದ ಅಪೂರ್ವ ದಾಖಲೆಯ ಫಲವಾಗಿ ಈ ಶೋಧ ಸಾಧ್ಯವಾಗಿದೆ. ಉದ್ದೇಶ ಪೂರ್ವಕವಾಗಿ ಕಡಿಯುವುದಷ್ಟೆ ಅಲ್ಲದೆ, ಮರಣದ ಪ್ರಮಾಣ ಹೆಚ್ಚಿದ್ದರಿಂದ, ಈಗಿರುವ ಮರಗಳ ಜೊತೆಗೆ ಹೊಸದಾಗಿ ಮೊಳೆಯುವ ಮರಗಳ ಸಂಖ್ಯೆ ಕಡಿಮೆಯಾಗಿದ್ದರಿಂದ, ಕಾಳ್ಗಿಚ್ಚು, ನಗರೀಕರಣ, ಕೃಷಿ ವಿಸ್ತರಣೆ ಮೊದಲಾದವುಗಳು ಒಟ್ಟಾಗಿ ಇಲ್ಲವೇ ಪ್ರತ್ಯೇಕವಾಗಿ ಈ ಸ್ಥಿತಿಗೆ ಕಾರಣವಾಗಬಹುದು. ಉಷ್ಣವಲಯದಲ್ಲಿ ಇದು ಇನ್ನೂ ಎದ್ದು ಕಾಣುತ್ತದೆ. ಆನೆ, ಸಿಂಹ, ಹುಲಿ, ತಿಮಿಂಗಲ, ಡಾಲ್ಫಿನ್ನುಗಳಂತಹ ಆಕರ್ಷಕ ಪ್ರಾಣಿಗಳ ಸಂಖ್ಯೆ ಪ್ರಪಂಚದೆಲ್ಲೆಡೆ ಕಡಿಮೆಯಾಗಿರುವಂತೆಯೇ, ದೊಡ್ಡ ಹಳೆಯ ಮರಗಳ ಸಂಖ್ಯೆಯೂ ಪ್ರಪಂಚದ ಹಲವು ತಾಣಗಳಲ್ಲಿ ಕಡಿಮೆಯಾಗುತ್ತಿದೆ ಎಂದು ಅಧ್ಯಯನಗಳು ಸೂಚಿಸಿವೆ. ಅವುಗಳಿಗೆ ಬಂದೊದಗಿದ ಅಪಾಯಗಳೇನು, ಅವುಗಳನ್ನು ಸಂರಕ್ಷಿಸುವ ಉಪಾಯಗಳೇನು ಎಂಬುದರ ಬಗ್ಗೆ ಸಂಶೋಧನೆಗಳ ಅಗತ್ಯವಿದೆ.

ಡಾ. ಎಸ್. ನಟೇಶ್, ಭಾರತ ಸರಕಾರದ ಜೈವಿಕ ತಂತ್ರಜ್ಞಾನ ಇಲಾಖೆಯಲ್ಲಿ ಹಿರಿಯ ಸಲಹೆಗಾರರಾಗಿ



ಧಾರಾವಾಹಿ

ಇಸವಿ 2889

ಭಾಗ -3

ಜೂಲ್ಸ್ ವರ್ನೆ ಮತ್ತು ಮೈಖೇಲ್ ವರ್ನೆ

ಪ್ರಪಂಚದ ಅತಿ ಪ್ರಬಲ ವಾರ್ತಾಪತ್ರಿಕೆಯ ಒಡೆಯನಾದ ಮಿ. ಸ್ಮಿತ್ ತನ್ನ ದೈನಂದಿನ ಚಟುವಟಿಕೆಯಲ್ಲಿ ತೊಡಗಿದ್ದಾನೆ. ಲೇಖಕರಿಗೆ ಸಲಹೆ ನೀಡಿದ ಆತ ಈಗ ಪತ್ರಿಕೆಯ ಬೇರೆ ವಿಭಾಗಗಳ ಸುತ್ತು ಹೊಡೆಯುತ್ತಿದ್ದಾನೆ. ಖಗೋಳ ವಿಭಾಗದ ಜನ ಗುರುಗ್ರಹದಿಂದ ಯಾವುದೇ ಸುದ್ದಿಯಿಲ್ಲ ಎಂದಿದ್ದನ್ನು ಕೇಳಿ, ಚರ್ಚೆ ನಡೆಸುತ್ತಿದ್ದಾನೆ.

ಅಲ್ಲ. ಏನು ಹೇಳ್ತಿದ್ದೀರಿ? ಗುರುಗ್ರಹದಿಂದ ಉತ್ತರವೇ ಇಲ್ಲವೇ? ಯಾವಾಗಲೂ ಉತ್ತರ ಬರುತ್ತಿರಲಿಲ್ಲವೋ ಹೇಗೆ? ಅಲ್ಲ ಕೂಲಿ. ಇಪ್ಪತ್ತು ವರ್ಷಗಳಿಂದ ನೀನು ಈ ಸಮಸ್ಯೆಯ ಕುರಿತು ಕೆಲಸ ಮಾಡುತ್ತಿದ್ದೀ. ಹಾಗಿದ್ದೂ.."

"ನಿಜ. ನಮ್ಮ ದ್ಯುತಿವಿಜ್ಞಾನ ದೋಷಪೂರ್ಣವಾಗಿದೆ. ಮತ್ತೆ ನಮ್ಮ ಒಂದೂಮುಕ್ಕಾಲು ಮೈಲಿ ಅಗಲದ ಟೆಲಿಸ್ಕೋಪುಗಳು?" ಆ ಮನುಷ್ಯ ಉತ್ತರಿಸಲು ಆರಂಭಿಸಿದ್ದ.

"ಕೇಳಿದೆಯಾ, ಗೆಳೆಯ! ದ್ಯುತಿ ವಿಜ್ಞಾನ ದೋಷಪೂರ್ಣವಂತೆ! ದ್ಯುತಿ ವಿಜ್ಞಾನವೇ ನಮ್ಮ ವಿಶೇಷ ಬಲವಲ್ಲವೇ?" ಎಂದು ಪಕ್ಕದಲ್ಲಿದ್ದ ಇನ್ನೊಬ್ಬನನ್ನು ಕೇಳಿದ ಸ್ಮಿತ್, ಕೂಲಿಯ ಜೊತೆ ಮಾತು ಮುಂದುವರೆಸಿದ. "ಗುರುಗ್ರಹವನ್ನು ಬಿಡಿ. ಚಂದ್ರನಿಂದ ಫಲಿತಾಂಶಗಳು ಬರುತ್ತಿಲ್ಲವೇ?"

"ಅಲ್ಲಿಯ ಸ್ಥಿತಿಯೇನೂ ಬೇರೆ ಇಲ್ಲ."

"ಇದಕ್ಕೂ ನೀನು ದ್ಯುತಿವಿಜ್ಞಾನವನ್ನೇ ದೂಷಿಸಬೇಡ. ಚಂದ್ರ ಮಂಗಳನಿಗಿಂತಲೂ ಕಡಿಮೆ ದೂರದಲ್ಲಿದೆ. ಹಾಗಿದ್ದೂ ನಾವು ಮಂಗಳನ ಜೊತೆಗೆ ನಾವು ಸಂಪರ್ಕ ಸಾಧಿಸಿದ್ದಾಗಿದೆ. ನಮ್ಮ ಬಳಿ ಟೆಲಿಸ್ಕೋಪುಗಳಿಲ್ಲ ಎನ್ನುವ ಕಾರಣವನ್ನು ಹೇಳಬೇಡ."

"ಟೆಲಿಸ್ಕೋಪಾ? ಕಾರಣ ಅದಲ್ಲ. ಅಲ್ಲಿನ ನಿವಾಸಿಗಳು."

"ಹೌದು. ಹೌದು." ಎಂದು ಪಿಯರ್ ದನಿಗೂಡಿಸಿದ.

"ಅಂದರೆ ಚಂದ್ರನಲ್ಲಿ ನಿವಾಸಿಗಳೇ ಇಲ್ಲ ಅಂತ ಖಚಿತವಾಯಿತೋ?" ಸ್ಮಿತ್ ಪ್ರಶ್ನಿಸಿದ.

"ಹಾಂ. ನಮಗೆ ಕಾಣುವ ಬದಿಯಲ್ಲಿಯಂತೂ ಇದ್ದ ಹಾಗಿಲ್ಲ. ಅದರ ಇನ್ನೊಂದು ಬದಿಯಲ್ಲಿ ಏನೋ? ಯಾರಿಗೆ ಗೊತ್ತು?" ಎಂದ ಕೂಲಿ.

"ಆಹಾ. ಆ ಇನ್ನೊಂದು ಬದಿ! ಹಾಗಿದ್ದರೆ ಅದರ ಬಗ್ಗೆಯೂ ಏನಾದರೂ ಮಾಡಬಹುದಾ ಸ್ವಲ್ಪ ಯೋಚಿಸಬೇಕು," ಎಂದ ಸ್ಮಿತ್.

"ಏನಾದರೂ ಮಾಡುವುದು ಅಂದರೆ?"

“ಅದೇ. ಚಂದ್ರನನ್ನೇ ತಿರುಗಿಸುವುದು.”

“ಆಹಾ. ಎಂಥ ಯೋಚನೆ!” ಎಂದು ಆ ಇಬ್ಬರೂ ಉದ್ಗರಿಸಿದರು. ಈ ಕಾರ್ಯವನ್ನು ಸಾಧಿಸುವುದರಲ್ಲಿ ಯಶಸ್ಸು ಖಂಡಿತ ಎನ್ನುವ ವಿಶ್ವಾಸ ಅವರ ನುಡಿಯಿತ್ತು.

ಒಂದು ಕ್ಷಣ ಸುಮ್ಮನಿದ್ದ ಮಿ. ಸ್ಮಿತ್, ಮತ್ತೆ ಕೇಳಿದ. “ಹಾಗಿದ್ದರೆ ಇವತ್ತು ವಿಶೇಷವಾದ ಸುದ್ದಿಯೇನೂ ಇಲ್ಲವಾ?”

“ಇದೆಯಲ್ಲಾ!” ಎಂದ ಕೂಲಿ. “ಒಲಿಂಪಸಿನ ಗುಣಗಳ ನಿಷ್ಕರ್ಷೆಯಾಗಿದೆ. ನೆಪ್ಚೂನಿನಿಂದ ಆಚೆಗೆ ಇರುವ ಆ ದೈತ್ಯಗ್ರಹವು ಸೂರ್ಯನಿಂದ ಅಂದಾಜು 11,400,799,742 ಮೈಲುಗಳ ದೂರದಲ್ಲಿ ಸುತ್ತುತ್ತಿದೆ. ಅದರ ಬೃಹತ್ ಕಕ್ಷೆಯಲ್ಲಿ ಸುತ್ತಲು ಅದಕ್ಕೆ 1311 ವರ್ಷ, 294 ದಿನ, 12 ಗಂಟೆ, 43 ನಿಮಿಷ, 9 ಸೆಕೆಂಡುಗಳು ತಗುಲುತ್ತವೆ.”

“ಇದನ್ನು ನೀವು ಮೊದಲೇ ಏಕೆ ಹೇಳಲಿಲ್ಲ,” ಎಂದು ಮಿ. ಸ್ಮಿತ್ ಕೂಗಾಡಿದ. “ತಕ್ಷಣವೇ ವರದಿಗಾರರಿಗೆ ಇದನ್ನು ತಿಳಿಸಿ. ಖಗೋಳಕ್ಕೆ ಸಂಬಂಧಿಸಿದ ಇಂತಹ ಪ್ರಶ್ನೆಗಳ ಬಗ್ಗೆ ಜನತೆಗೆ ಎಷ್ಟೊಂದು ಕುತೂಹಲವಿರುತ್ತದೆ ಅಂತ ನಿಮಗೆ ಗೊತ್ತಿಲ್ಲವೇ? ಇಂದಿನ ಸಂಚಿಕೆಯಲ್ಲಿ ಈ ಸುದ್ದಿ ಇರಲೇ ಬೇಕು.”

ಈ ಮಾತನ್ನು ಕೇಳಿ ಅವರಿಬ್ಬರೂ ತಲೆಯಾಡಿಸಿದ ನಂತರ ಮಿ. ಸ್ಮಿತ್ ಮುಂದಿನ ಹಾಲ್ಗೆ ತೆರಳಿದ. ಅದು ಸುಮಾರು 3200 ಅಡಿಗೂ ಎತ್ತರವಾದ ಮೊಗಸಾಲೆ, ಕೇವಲ ಆಕಾಶಜಾಹೀರಾತಿಗೆ ಮೀಸಲಾಗಿತ್ತು. ಮೋಡಗಳಿಂದ ಪ್ರತಿಫಲಿಸುವ ಆ ಬೃಹತ್ ಜಾಹೀರಾತುಗಳನ್ನು ಎಲ್ಲರೂ ನೋಡಿದ್ದೇವಲ್ಲ. ಅವು ಎಷ್ಟು ದೊಡ್ಡವು ಎಂದರೆ ಇಡೀ ನಗರವೇ ಅಲ್ಲ, ಕೆಲವೊಮ್ಮೆ ಇಡೀ ದೇಶಕ್ಕೇ ಅದು ಕಾಣುತ್ತಿರುತ್ತದೆ. ಇದು ಕೂಡ ಮಿಸ್ಟರ್ ಫ್ರಿಟ್ಜ್ ನೆಪೋಲಿಯನ್ ಸ್ಮಿತ್ತನ ಐಡಿಯಾವೇ. ದಿ ಅರ್ಥ್ ಕ್ರಾನಿಕಲ್ ಕಟ್ಟಡದಲ್ಲಿರುವ ಸಾವಿರ ಪ್ರೊಜೆಕ್ಟರುಗಳು ಇಂತಹ ದೈತ್ಯ ಜಾಹೀರಾತುಗಳನ್ನು ಮೋಡಗಳ ಮೇಲೆ ಅವಿರತವಾಗಿ ಪ್ರದರ್ಶಿಸುತ್ತಿರುತ್ತವೆ.

ಇಂದು ಮಿ. ಸ್ಮಿತ್ ಈ ಆಕಾಶಜಾಹೀರಾತು ವಿಭಾಗವನ್ನು ಪ್ರವೇಶಿಸಿದಾಗ, ನಿಶ್ಚಲವಾದ ಪ್ರೊಜೆಕ್ಟರುಗಳ ಮುಂದೆ ಅದರ ಆಪರೇಟರುಗಳು ಕೈಕಟ್ಟಿಕೊಂಡು ಕುಳಿತಿದ್ದುದನ್ನು ಕಂಡ. ಅದಕ್ಕೆ ಕಾರಣವೇನೆಂದು ವಿಚಾರಿಸಿದ. ಆತ ಪ್ರಶ್ನಿಸಿದ ವ್ಯಕ್ತಿ ಉತ್ತರಿಸುವ ಬದಲಾಗಿ, ಆಕಾಶದ ಕಡೆಗೆ ಬೆರಳೆತ್ತಿ ತೋರಿದ. ಆಕಾಶ ನಿಚ್ಚಳವಾಗಿತ್ತು. ಅಚ್ಚ ನೀಲಿಯಾಗಿತ್ತು. “ಆಹ್ ಮೋಡವೇ ಇಲ್ಲದ ಆಕಾಶ. ಒಳ್ಳೆಯದಲ್ಲ ನಿಜ, ಆದರೆ ಏನು ಮಾಡೋಣ? ಮಳೆ ಬರುವಂತೆ ಮಾಡೋಣವೋ? ಅದರಿಂದೇನು ಪ್ರಯೋಜನ? ನಮಗೆ ಬೇಕಿರುವುದು ಮೋಡ. ಮಳೆಯಲ್ಲವಲ್ಲ.” ಎಂದು ಉತ್ತರವಾಗಿ ಮಿ. ಸ್ಮಿತ್ ಗೊಣಗಿದ. ಅನಂತರ ಮುಖ್ಯ ಇಂಜಿನಿಯರ್ ಕಡೆಗೆ ತಿರುಗಿ ಹೇಳಿದ. “ಹೋಗಿ, ಪವನವಿಜ್ಞಾನ ವಿಭಾಗದ ವಿಜ್ಞಾನಿ ಮಿಸ್ಟರ್ ಸ್ಯಾಮ್ಯುಯೆಲ್ ಮಾರ್ಕ್ ಬಳಿ ಹೋಗಿ, ಕೃತಕವಾಗಿ ಮೋಡಗಳ ಬಗ್ಗೆ ಶ್ರದ್ಧೆಯಿಂದ ಕೆಲಸ ಆರಂಭಿಸಬೇಕೆಂದು ನಾನು ಹೇಳಿದೆ ಎಂದು ತಿಳಿಸು. ನಿಚ್ಚಳವಾದ ಆಕಾಶ ವರಕೊಡುತ್ತದೆಂದು ನಿರಂತರವಾಗಿ ಕಾಯುತ್ತಾ ಕುಳಿತುಕೊಳ್ಳುವುದು ನಮ್ಮಿಂದ ಆಗದ ಕೆಲಸ!” ಎಂದ.

ಅಲ್ಲಿಗೆ ಮಿ. ಸ್ಮಿತ್ ತನ್ನ

ಅಲ್ಲಿಗೆ ಮಿ. ಸ್ಮಿತ್ ತನ್ನ ದೈನಂದಿನ ಪತ್ರಿಕಾ ವಿಭಾಗಗಳ ಭೇಟಿ ಕಾರ್ಯಕ್ರಮವನ್ನು ಮುಗಿಸಿಯಾಗಿತ್ತು. ಜಾಹೀರಾತು ವಿಭಾಗದ ಸಭಾಂಗಣದಿಂದ ಆತ ತನ್ನ ಕಛೇರಿಯ ಸಂದರ್ಶಕರ ಕೊಠಡಿಯನ್ನು ಪ್ರವೇಶಿಸಿದ. ಅಲ್ಲಿ ಅಮೆರಿಕ ಸರಕಾರ ಅಂಗೀಕರಿಸಿದ್ದ ವಿವಿಧ ರಾಷ್ಟ್ರಗಳ ರಾಯಭಾರಿಗಳು ಅವನಿಗಾಗಿ ಕಾಯುತ್ತಿದ್ದರು.

ಉತ್ತರದ ಭಾಗವನ್ನು ಸ್ಲಾವ್ ರವರಿಗೆ ಹಾಗೂ ದಕ್ಷಿಣ ಭಾಗ ಲ್ಯಾಟಿನ್ ಭಾಷಿಗರಿಗೆ ಎಂದಿರಾ? ನಡುವೆ ರೈನ್ ಪ್ರಾಂತ್ಯ ಇರುವುದು ನಮ್ಮಿಬ್ಬರಿಗೂ ಅನುಕೂಲಿಯಾಗಿಯೇ ಇದೆ. ಕೇವಲ ಫ್ರೆಂಚ್ ವಿರುದ್ಧವಷ್ಟೆ ಅಲ್ಲ.

ದೈನಂದಿನ ಪತ್ರಿಕಾ ವಿಭಾಗಗಳ ಭೇಟಿ ಕಾರ್ಯಕ್ರಮವನ್ನು ಮುಗಿಸಿಯಾಗಿತ್ತು. ಜಾಹೀರಾತು ವಿಭಾಗದ ಸಭಾಂಗಣದಿಂದ ಆತ ತನ್ನ ಕಛೇರಿಯ ಸಂದರ್ಶಕರ ಕೊಠಡಿಯನ್ನು ಪ್ರವೇಶಿಸಿದ. ಅಲ್ಲಿ ಅಮೆರಿಕ ಸರಕಾರ ಅಂಗೀಕರಿಸಿದ್ದ ವಿವಿಧ ರಾಷ್ಟ್ರಗಳ ರಾಯಭಾರಿಗಳು ಅವನಿಗಾಗಿ ಕಾಯುತ್ತಿದ್ದರು. ಈ ಪ್ರಬಲ ಸಂಪಾದಕನ ಜೊತೆಗೆ ಒಂದೆರಡು ಮಾತಾಡಲು ಹಾತೊರೆದಿದ್ದರು. ಆತ ಪ್ರವೇಶಿಸುವಾಗ ಅಲ್ಲೊಂದು ಚರ್ಚೆ ನಡೆದಿತ್ತು. ಫ್ರೆಂಚ್ ರಾಯಭಾರಿಯು ರಶ್ಯಾದ ರಾಯಭಾರಿಗೆ ಹೇಳುತ್ತಿದ್ದ. “ಮಾನ್ಯರೇ ಕ್ಷಮಿಸಿ. ಯುರೋಪಿನ ನಕ್ಷೆಯಲ್ಲಿ ಬದಲಾವಣೆ ಬೇಕೆಂದು ನನಗೆ ಅನಿಸುತ್ತಿಲ್ಲ. ಉತ್ತರದ ಭಾಗವನ್ನು ಸ್ಲಾವ್ ರವರಿಗೆ ಹಾಗೂ ದಕ್ಷಿಣ ಭಾಗ ಲ್ಯಾಟಿನ್ ಭಾಷಿಗರಿಗೆ ಎಂದಿರಾ? ನಡುವೆ ರೈನ್ ಪ್ರಾಂತ್ಯ ಇರುವುದು ನಮ್ಮಿಬ್ಬರಿಗೂ ಅನುಕೂಲಿಯಾಗಿಯೇ ಇದೆ. ಕೇವಲ ಫ್ರೆಂಚ್ ವಿರುದ್ಧವಷ್ಟೆ ಅಲ್ಲ. ನಮ್ಮ ಸುಪರ್ದಿನಲ್ಲಿರುವ ರೋಮ್ (ಇಟಲಿ) ಹಾಗೂ ಮಾದ್ರಿದ್ (ಸ್ಪೇನ್) ಮತ್ತು ಸಂತ ಪೀಟರನ ರಾಜ್ಯವಾದ ಜೆರುಸಲೇಮಿನ ವಿರುದ್ಧದ ಯಾವ ಕ್ರಮವನ್ನೂ ಫ್ರಾನ್ಸ್ ಖಡಾಖಂಡಿತವಾಗಿ ಖಂಡಿಸುತ್ತದೆ. ಅವೆಲ್ಲದರ ರಕ್ಷಣೆ ನಮ್ಮದು.”

“ಸರಿಯಾಗಿ ಹೇಳಿದಿರಿ,” ಎಂದ ಮಿ. ಸ್ಮಿತ್, ರಶ್ಯಾದ ರಾಯಭಾರಿಯ ಕಡೆಗೆ ತಿರುಗಿ, “ರೈನ್ ನದಿ ತೀರದಿಂದ ಕಾರಕೋರಮ್ ಪರ್ವತಗಳ ಉನ್ನತ ಶಿಖರಗಳವರೆಗೂ ವ್ಯಾಪಿಸಿದ, ಕರಾವಳಿಯ ಅಂಚಿಗೆ ಮೆಡಿಟರೇನಿಯನ್, ಹಿಂದೂ ಸಾಗರ ಹಾಗೂ ಅಟ್ಲಾಂಟಿಕ್ ಸಾಗರಗಳು ಹೆಪ್ಪುಗಟ್ಟಿ, ಪ್ರಪಂಚದಲ್ಲಿಯೇ ಅತ್ಯಂತ ವಿಶಾಲವಾದ ಸಾಮ್ರಾಜ್ಯವಿದ್ದರೂ ನೀವು ರಶ್ಯನ್ನರಿಗೆ ತೃಪ್ತಿಯಿಲ್ಲವಲ್ಲ?

ಇನ್ನು ಈ ಬೆದರಿಕೆಯಿಂದ ಪ್ರಯೋಜನವಿದೆಯೇ? ಅರವತ್ತು ಮೈಲು ದೂರದಲ್ಲಿರುವವರನ್ನೂ ಉಸಿರುಗಟ್ಟಿಸುವ ಕ್ಷಿಪಣಿಗಳು, ಕ್ಷಣಮಾತ್ರದಲ್ಲಿ ತೊಂಭತ್ತು ಮೈಲಿ ದೂರದಲ್ಲಿರುವ ಜನರನ್ನೆಲ್ಲ ಹೊಸಕಿ ಹಾಕುವ ವಿದ್ಯುತ್ ಕಿಡಿ, ಮೊದಲಾದ ಹೊಸ ಅಸ್ತ್ರಗಳ ಆವಿಷ್ಕಾರವಾಗಿವೆ ಎನ್ನುವ ಕಾರಣಕ್ಕೇ ಯುದ್ಧ ಆಗಬೇಕೇ? ಹಾಂ. ರಣೋತ್ಸಾಹದಲ್ಲಿ ಒಬ್ಬರಿನ್ನೊಬ್ಬರ ಮೇಲೆ ಪ್ರಯೋಗಿಸಿ, ಕೆಲವೇ ದಿನಗಳಲ್ಲಿ ದೈತ್ಯಾನುದೈತ್ಯ ಸೇನೆಯನ್ನೂ ನಾಶ ಮಾಡುವ ಪ್ಲೇಗು, ಕಾಲರಾ, ಹಳದಿಜ್ವರ ಸೋಂಕುಗಳೂ ಇವೆ ಎನ್ನುವುದನ್ನು ಮರೆಯಬೇಡಿ.”

1896ರಲ್ಲಿ ಮೊತ್ತಮೊದಲು ಫ್ರೆಂಚ್ ಭಾಷೆಯಲ್ಲಿ ಪ್ರಕಟವಾದ ಈ ದೀರ್ಘಕಥೆಯ ಕನ್ನಡ ಅನುವಾದ: ಕೊಳ್ಳೇಗಾಲ ಶರ್ಮ.

ಮೂಲ: ಜೂಲ್ಸ್ ವರ್ನೆ, 2889, ಅನುವಾದ: ಕೊಳ್ಳೇಗಾಲ ಶರ್ಮ

ಹಕ್ಕಿಯ ಗೂಡು

■ ಅರ್ಲಿ ಬರ್ಡ್ (early-bird.in)

ಬೂದು ಕವುಜಗ

Grey Francolin

ಕುರುಚಲು ಕಾಡು, ತೆರೆದ ಕೃಷಿ ಭೂಮಿ ಮತ್ತು ಹುಲ್ಲುಗಾವಲಿನಲ್ಲಿ ನಡೆದಾಡುವಾಗ, ನಮ್ಮ ಪಾದದ ಹತ್ತಿರದಿಂದ ಹಾರಿ ಬೆಚ್ಚಿಬೀಳಿಸುವ ಈ ಹಕ್ಕಿಗಳನ್ನು ನೀವು ಕಂಡಿರಬಹುದು. ಇವು, ಹೆಚ್ಚಾಗಿ ನೆಲದಮೇಲೆಯೇ ಜೀವಿಸುವ ಗೌಜಲಕ್ಕಿಗಳು. ಬೂದು ಕವುಜಗವು, ಗೌಜಲಕ್ಕಿಗಳ ಗುಂಪಿಗೆ ಸೇರುವ ದೊಡ್ಡ ಪಕ್ಷಿ ಪ್ರಭೇದ. ಬೂದು ಮಿಶ್ರಿತ ಕಂದು ಬಣ್ಣದ ಮಚ್ಚೆಯುಳ್ಳ ಗರಿಗಳಿರುವ ಈ ಗುಂಡಗಿನ ಹಕ್ಕಿ ಸಾಮಾನ್ಯವಾಗಿ ಸಣ್ಣ ಗುಂಪುಗಳಲ್ಲಿ ಓಡಾಡುತ್ತದೆ. ಇದು ನೆಲದ ಮೇಲೆ ಓಡಾಡುತ್ತಾ ಸದಾ ಆಹಾರವನ್ನು ಹುಡುಕುವ ನಡವಳಿಕೆಯಿಂದಾಗಿಯೇ ಹೆಸರುವಾಸಿಯಾಗಿದೆ.

ಬೂದು ಗವುಜಗದ ಗರಿಗಳ ಬಣ್ಣವು ಸುತ್ತಮುತ್ತಲಿನ ಪ್ರದೇಶಗಳನ್ನು ಹೋಲುವುದರಿಂದ ಪರಭಕ್ಷಕಗಳಿಂದ ಮರೆಮಾಚಿಕೊಳ್ಳಲು ಬಹಳ ಸಹಕಾರಿಯಾಗಿದೆ. ಗಾಬರಿಯಾದಾಗ ತ್ವರಿತವಾಗಿ ಅಡಗಿಕೊಳ್ಳುತ್ತದೆ ಅಥವಾ ನಿಂತಲ್ಲೇ ಅಲ್ಲಾಡದೆ ನಿಂತು ಬಿಡುತ್ತದೆ. ಕೆಲವೊಮ್ಮೆ ನೆಲಕ್ಕೆ ಸಮೀಪವಾಗಿ ಬಾಗಿ ತನ್ನ ದೇಹದ ಬಣ್ಣದಿಂದಲೇ ಪರಭಕ್ಷಕರಿಂದ ಮರೆಮಾಚಿಕೊಳ್ಳುತ್ತದೆ. ಬೆನ್ನಟ್ಟಿದರೆ ಹತ್ತಿರದ ಯಾವುದಾದರೂ ಪ್ರದೇಶದಲ್ಲಿ ಆಶ್ರಯ ಪಡೆಯಲು, ತ್ವರಿತವಾಗಿ ರೆಕ್ಕೆ ಬಡಿಯುತ್ತಾ ಹಾರುತ್ತದೆ.

ಇದರ ಕಾ–ಟೀ–ಟರ್, ಕಾ–ಟೀ–ಟರ್ ಎಂಬ ಎತ್ತರದ ಸ್ವರದ ಕರೆ ತೆರೆದ ಪ್ರದೇಶಗಳಲ್ಲಿ ಬಹಳ ದೂರದವರೆಗೂ ಕೇಳಿಸುತ್ತದೆ. ಈ ಜೋರಾದ ಕೂಗು ಸಾಮಾನ್ಯವಾಗಿ ಬೆಳಗಿನ ಜಾವದಲ್ಲಿ ಕೇಳಿಬರುತ್ತದೆ.

ಆವಾಸ : ಈಶಾನ್ಯ ರಾಜ್ಯಗಳನ್ನು ಹೊರತುಪಡಿಸಿ ಭಾರತದಾದ್ಯಂತ ಬಯಲು ಪ್ರದೇಶಗಳಲ್ಲಿ ವ್ಯಾಪಕವಾಗಿ ಕಾಣಬಹುದು.

ಆಹಾರ : ಇದು ಬೀಜಗಳು, ಧಾನ್ಯಗಳು, ಗೆದ್ದಲು ಮತ್ತು ಜೀರುಂಡೆಗಳಂತಹ ಕೀಟಗಳನ್ನು ತಿನ್ನುತ್ತವೆ.

ಸಂತಾನೋತ್ಪತ್ತಿ : ಮಳೆಗಾಲವು ಇವುಗಳ ಸಂತಾನೋತ್ಪತ್ತಿಗೆ ಸೂಕ್ತವಾಗಿದ್ದು, ನೆಲದ ಮೇಲೆ ಅಥವಾ ಕೆಲವೊಮ್ಮೆ ಗೋಡೆ ಮತ್ತು ಬಂಡೆಗಳಲ್ಲಿ ನೆಲದ ಮಟ್ಟಕ್ಕಿಂತ ಮೇಲೆ ಗೂಡುಗಳನ್ನು ಮಾಡಿ ಮೊಟ್ಟೆಗಳನ್ನು ಇಡುತ್ತದೆ.

ಒಮ್ಮೆ ಮೊಟ್ಟೆಯೊಡೆದು ಹೊರಬಂದ ನಂತರ, ಮರಿಗಳು ಹಾರಲು ಸಿದ್ಧವಾಗುವವರೆಗೂ ಗಂಡು ಮತ್ತು ಹೆಣ್ಣು ಹಕ್ಕಿಗಳೆರಡೂ ಇವುಗಳನ್ನು ಪೋಷಿಸುತ್ತವೆ.

ವಿಶೇಷ ಸಂಗತಿ : ಗಂಡು ಹಕ್ಕಿಯು ತನ್ನ ಕಾಲುಗಳಲ್ಲಿರುವ ಕೊಂಬಿನಂಥ ಮುಳ್ಳುಗಳಿಂದ ಬೇರೊಂದು ಗಂಡಿನೊಂದಿಗೆ ಹೋರಾಡುತ್ತದೆ. ಹೆಣ್ಣು ಹಕ್ಕಿಗಳಿಗೆ ಈ ರೀತಿಯ ಮುಳ್ಳುಗಳು ಇರುವುದಿಲ್ಲ.

ಕೀಟ ನಿಯಂತ್ರಣ ಮತ್ತು ಬೀಜ ಪ್ರಸರಣದಲ್ಲಿ ಈ ಹಕ್ಕಿ ಪ್ರಮುಖ ಪಾತ್ರ ವಹಿಸುವುದರಿಂದ ಪರಿಸರದ ಸಮತೋಲನವನ್ನು ಕಾಪಾಡುತ್ತವೆ. ಹುಲ್ಲುಗಾವಲುಗಳು ಕಣ್ಮರೆಯಾಗುತ್ತಿರುವುದರಿಂದ, ಅದರ ಹೊಂದಿಕೊಳ್ಳುವಿಕೆಯ ಸ್ವಭಾವದ ಹೊರತಾಗಿಯೂ, ಬೂದು ಕವುಜಗವು ತನ್ನ ಆವಾಸಸ್ಥಾನವನ್ನು ಕಳೆದುಕೊಳ್ಳುವ ಪರಿಸ್ಥಿತಿ ಎದುರಾಗಿದೆ.

ಚಿತ್ರಗಳು: ಕಲ್ಯಾಣ್ ವರ್ಮಾ, ಗರಿಮಾ ಭಾಟಿಯಾ

ಸುಸ್ಥಿರ ಜೇನುಕೃಷಿ

ಪರಾಗಸ್ಪರ್ಶಕ್ಕೆ ಅತ್ಯಂತ ಅವಶ್ಯಕವಾದ ಜೇನು ಸುಸ್ಥಿರ ಕೃಷಿಗೂ ನೆರವಾಗಬಲ್ಲುದು

▶▶ ಚರಣ್ ಕುಮಾರ್

ಭಾರತ ಕೃಷಿ ಪ್ರಧಾನ ರಾಷ್ಟ್ರ. ಅದರಂತೆಯೇ ಕರ್ನಾಟಕವೂ ಕೂಡ ವೈವಿಧ್ಯಮಯವಾದ ಕೃಷಿಯನ್ನು ತನ್ನ ಮಡಿಲಲ್ಲಿರಿಸಿಕೊಂಡು, ಪೋಷಿಸಿಕೊಂಡು ಬಂದಿದೆ. ತೋಟಗಾರಿಕೆ, ಹೈನುಗಾರಿಕೆ, ರೇಷ್ಮೆ ಕೃಷಿ, ಅರಣ್ಯ ಕೃಷಿ, ಮೀನುಗಾರಿಕೆ, ನಕೋಳಿ, ಕುರಿ,ಮೇಕೆ , ಮೊಲ ಹಂದಿ ಅಣಬೆ ಕೃಷಿ, ಎರೆಹುಳು ಸಾಕಾಣಿಕೆ ಮೊದಲಾದ ಹಲವು ಪ್ರಕಾರಗಳಲ್ಲಿ ಜೇನು ಸಾಕಾಣಿಕೆ ವಿಶೇಷವಾದದ್ದು. ಬಯಲುಸೀಮೆಗಳಲ್ಲಿ ಜೇನುನೊಣಗಳನ್ನು ಪೆಟ್ಟಿಗೆಗಳಲ್ಲಿ ಸಾಕಾಣಿಕೆ ಮಾಡಬಹುದು ಎಂದರೆ ನಗುತ್ತಾರೆ. ಜೇನುನೊಣಗಳ ಕುರಿತು ಹೆಚ್ಚಿನ ಮಾಹಿತಿ ಇಲ್ಲದ ಜನಸಮೂಹಗಳಲ್ಲಿ ಜೇನುಕೃಷಿ ಕುರಿತು ಮಾತನಾಡಿದರೆ ಇದು ಸಹಜವಾದ ಪ್ರತಿಕ್ರಿಯೆ. ಮೈ ಊದಿಕೊಳ್ಳುವಂತೆ ಕಚ್ಚುವ ಜೇನುನೊಣಗಳ ಸನಿಹ ಸುಳಿಯುವುದೇ ಒಂದು ದೊಡ್ಡ ಹರಸಾಹಸ, ಇನ್ನು ಅವುಗಳನ್ನು ಸಾಕವುದುಂಟೇ?!. ಆದರೆ ಜೇನುನೊಣಗಳ ಕುರಿತು ಎಲ್ಲಾ ವರ್ಗದ ಜನಗಳಿಗೂ ತಿಳಿಸುವ ಅಗತ್ಯಇಂದು ಇದೆ. ಏಕೆಂದರೆ, ಎಲ್ಲಾ ಕೃಷಿ ಬೆಳೆಗಳ ಇಳುವರಿ ಜೇನುನೊಣಗಳ ಪರಾಗಸ್ಪರ್ಷವನ್ನು ಅವಲಂಬಿಸಿರುತ್ತದೆ.

ಮೊದಲಿಗೆ ಅರಿಯಬೇಕಾದದ್ದು ಜೇನುನೊಣಗಳು ಕಚ್ಚುವುದಿಲ್ಲ ಬದಲಾಗಿ ಚುಚ್ಚುತ್ತವೆ. ಹಾಗೆ ಚುಚ್ಚಿದ ಕಲವೇ ನಿಮಿಷಗಳಲ್ಲಿ ಚುಚ್ಚಿದ ಜೇನು ನೊಣಗಳು ಸಾವನ್ನಪ್ಪುತ್ತವೆ. ಜೇನುನೊಣಗಳಿಂದ ಚುಚ್ಚಿಸಿಕೊಂಡರೆ ಒಂದು ಜೀವಿಯ ಸಾವಿಗೆ ಕಾರಣೀಭೂತರಾದಂತಾಗುತ್ತದೆ. ಆದ್ದರಿಂದ ಆದಷ್ಟು ಜೇನುನೊಣಗಳು ನಮಗೆ ಚುಚ್ಚದಂತೆ ನೋಡಿಕೊಳ್ಳಬೇಕು. ಜೇ

ಜೇನುನೊಣಗಳ ಬಗ್ಗೆ ಕೆಲವೊಂದಷ್ಟು ಆಶ್ಚರ್ಯಕರ ಸಂಗತಿಗಳನ್ನು ಇವೆ. . ಎಲ್ಲಾ ಜೇನು ಪ್ರಭೇದಗಳ ಗೂಡಿನಲ್ಲಿ ಸಾವಿರಾರು ಜೇನುನೊಣಗಳಿರುತ್ತವೆ. ಅವೆಲ್ಲವೂ ಕೂಡ ಬಹುತೇಕ ಹೆಣ್ಣು ನೊಣಗಳು. ಆದರೆ, ಮೊಟ್ಟೆ ಇಡುವ ಸಾಮರ್ಥ್ಯ ಇರುವುದು ಮಾತ್ರ ಒಂದೇ ಒಂದು ನೊಣಕ್ಕೆ. ಅದೇ ರಾಣಿ

ಸಂಗ್ರಹಿಸುವುದು, ಸಂಗ್ರಹಿಸಿದ ಮಕರಂದವನ್ನು ಜೇನುತುಪ್ಪವಾಗಿ ಪರಿವರ್ತಿಸುವುದು, ಗೂಡನ್ನು ಸ್ವಚ್ಚಗೊಳಿಸಿವುದು, ತಮ್ಮ ದೇಹದಿಂದ ಮೇಣವನ್ನು ಉತ್ಪಾದಿಸುವುದು, ಆ ಮೇಣದಿಂದ ಮರಿಗಳ ಕೋಶಗಳನ್ನು ತಯಾರಿಸುವುದು, ಸರಿಯಾದ ಸಮಯಕ್ಕೆ ಕುಟುಂಬವನ್ನು ಪಾಲುಮಾಡಲು ಗಂಡು ನೊಣಗಳ ಕೋಶ, ನಂತರ ಹೊಸ ರಾಣಿ ಕೋಶ ತಾಯಾರಿಸುವುದು ಮತ್ತು ರಾಜಶಾಹಿ ರಸ ವನ್ನು ತಯಾರಿಸುವುದು ಆಗಿರುತ್ತವೆ. ರಾಜಶಾಹಿ ಕೆಲಸಗಾರ ನೊಣಗಳು ಉತ್ಪಾದಿಸುವ ವಿಶೇಷ ಆಹಾರ, ಇದನ್ನು ರಾಣಿಗೆ ಉಣಬಡಿಸುತ್ತವೆ

ರಾಣಿಯು ತನ್ನ ಮೊಟ್ಟೆಗಳೊಂದಿಗೆ ವೀರ್ಯವನ್ನು ಸೇರಿಸದೇ ಮೊಟ್ಟೆ ಇಟ್ಟರೆ ಅವುಗಳು ಗಂಡು ನೊಣಗಳಾಗಿ ಹುಟ್ಟುತ್ತವೆ. ಗಂಡು ನೊಣಗಳ ಕೆಲಸ ರಾಣಿ ನೊಣದೊಂದಿಗೆ ಸಮ್ಮಿಲನ ಹೊಂದುವುದು ಮಾತ್ರ. ಸಮ್ಮಿಲನ ಎಂದರೆ ಗೂಡಿನೊಳಗೆ ಆಗುವುದಲ್ಲ. ಇನ್ನೊಂದು ಬಲಿಷ್ಠ ಗಂಡು ನೊಣಕ್ಕೆ ಅವಕಾಶ. ಹೀಗೆ ರಾಣಿಯು ತನ್ನ ದೇಹದ ವೀರ್ಯ ಚೀಲವು ತುಂಬುವವರೆಗೂ ಅನೇಕ ಗಂಡು ನೊಣಗಳೊಂದಿಗೆ ಕೂಡುತ್ತದೆ. ಅನಂತರ ಗೂಡು ಸೇರಿಕೊಂಡು, ಮೊಟ್ಟೆ ಇಡಲು ಆರಂಭಿಸಿದರ ಇನ್ನು ಮತ್ತೆ ಹೊರಗಡೆ ಹೋಗುವ ಮಾತಿಲ್ಲ.

ಹಾಗಾದರೆ ಎಲ್ಲಾ ಗಂಡು ನೊಣಗಳಿಗೂ ಸಮ್ಮಿಲನದ ಅವಕಾಶ ದೊರೆಯುವುದೇ?. ಗಂಡುಗಳು ನೂರಾರು ಸಂಖ್ಯೆಯಲ್ಲಿ ಇರುತ್ತವೆ. ರಾಣಿ ಇರುವ ಗೂಡಿನಿಂದ ಅಲ್ಲದೇ ಸುತ್ತಮುತ್ತಲಿನ ಬೇರೆ ಗೂಡುಗಳಿಂದಲೂ ಸಹ ಬಂದಿರುತ್ತವೆ. ಒಂದು ರಾಣಿಯ ಜೊತೆ ಸಮ್ಮಿಲನದ ಅವಕಾಶ ದೊರೆಯದಿದ್ದರೆ ಮತ್ತೊಂದು ಗೂಡಿನ ರಾಣಿಗಾಗಿ ಕಾಯುತ್ತಾ ಕೂರುತ್ತವೆ. ಒಟ್ಟಿನಲ್ಲಿ ಗೂಡಿನಲ್ಲಿ ಕೆಲಸಗಾರ ನೊಣಗಳು ಕೂಡಿಟ್ಟಿರುವ

ಉತ್ತರದ ಭಾಗವನ್ನು ಸ್ಲಾವ್ ರವರಿಗೆ ಹಾಗೂ ದಕ್ಷಿಣ ಭಾಗ ಲ್ಯಾಟಿನ್ ಭಾಷಿಗರಿಗೆ ಎಂದಿರಾ? ನಡುವೆ ರೈನ್ ಪ್ರಾಂತ್ಯ ಇರುವುದು ನಮ್ಮಿಬ್ಬರಿಗೂ ಅನುಕೂಲಿಯಾಗಿಯೇ ಇದೆ. ಕೇವಲ ಫ್ರೆಂಚ್ ವಿರುದ್ಧವಷ್ಟೆ ಅಲ್ಲ.

ಜೇನು ನೊಣ.

ರಾಣಿ ಜೇನು ನೊಣವುಸುಮಾರು ಮೂರು ವರ್ಷಗಳ ವರೆಗೆ) ಕಾಲಾವಧಿಯಲ್ಲಿ ಪ್ರತಿದಿನವೂ ಕೂಡ ಮೊಟ್ಟೆ ಇಡಬಲ್ಲುದು.. ಬದುಕಿನಲ್ಲಿ ಒಂದೇ ಒಂದು ಬಾರಿ ಗಂಡು ನೊಣಗಳೊಡನೆ ಸಮ್ಮಿಲನವಾದರೂ, ಜಿವನಪೂರ್ತಿ ಸಾಕಾಗುವಷ್ಟು ವೀರ್ಯವನ್ನು ಸಂಗ್ರಹಿಸಿ ಇಟ್ಟುಕೊಂಡಿರುತ್ತದೆ. . ಮೊಟ್ಟೆ ಇಡುವಾಗ ಸಂಗ್ರಹಿಸಿಟ್ಟುಕೊಂಡ ವೀರ್ಯವನ್ನು ಬೆರೆಸಿದ್ದರೆ ಅದು ಹೆಣ್ಣು ನೊಣವಾಗಿ ಹುಟ್ಟುತ್ತವೆ. ಅವುಗಳೇ ಕೆಲಸಗಾರ ನೊಣಗಳು. ಸಾವಿರಾರು ಸಂಖ್ಯೆಗಳಿಂದ ಲಕ್ಷಗಳ ವರೆಗೆ ಈ ಕೆಲಸಗಾರ ನೊಣಗಳು ಇರುತ್ತವೆ. ಇವುಗಳ ಕೆಲಸ ಸೈನಿಕ ನೊಣಗಳಾಗಿ ಗೂಡಿನ ರಕ್ಷಣೆ ಮಾಡುವುದು, ದಾದಿ ನೊಣಗಳಾಗಿ ಆಗ ತಾನೆ ಹುಟ್ಟಿರುವ ನೊಣಗಳನ್ನು ಪೋಷಿಸುವುದು, ರಾಣಿ ನೊಣದ ಸೇವೆ ಮಾಡುವುದು, ಹೊರಗಡೆ ಹೋಗಿ ಮಕರಂದ ಮತ್ತು ಪರಾಗವನ್ನು

ಮೊದಲು ರಾಣಿಯು ಹೊರಗಡೆ ಬಂದು, ತನ್ನ ದೇಹದಿಂದ ಸುವಾಸನೆಭರಿತವಾದ ವಾಸನೆಯನ್ನು ಸೂಸಿ ಹೋಗುತ್ತಾಳೆ. ಆಂಗ್ಲ ಭಾಷೆಯಲ್ಲಿ ಈ ವಾಸನೆಗೆ ಫೆರಮೋನ್ ಎಂದು ಕರೆಯಲಾಗುತ್ತದೆ.. ಆಗ ಗಂಡು ನೊಣಗಳ ಕೆಲಸ ಆರಂಭವಾಗುತ್ತದೆ. ಸುತ್ತ ಮುತ್ತ ಇರುವ ಎಲ್ಲಾ ಗೂಡುಗಳಿಂದಲೂ ಗಂಡು ನೊಣಗಳು ಹಾರಿ ಬಂದು ಫೆರಮೋನ್ ವಾಸನೆ ಇರುವ ಜಾಗದಲ್ಲಿ ಒಟ್ಟಾಗುತ್ತವೆ. ಗಂಡು ನೊಣಗಳು ಒಂದೆಡೆ ಸೇರಿರುವುದನ್ನು ಖಚಿತಪಡಿಸಿಕೊಂಡ ನಂತರ ಅಲ್ಲಿಗೆ ರಾಣಿಯ ಆಗಮನವಾಗುತ್ತದೆ.. ಗಂಡು ನೊಣಗಳ ಕಾಳಗ ಆರಂಭವಾಗುತ್ತದೆ. ಕಾಳಗದಲ್ಲಿ ಗೆದ್ದ. ಶಕ್ತಿವಂತ ಗಂಡು ನೊಣಕ್ಕೆ ರಾಣಿ ನೊಣದೊಂದಿಗೆ ಸಮ್ಮಿಲನವಾಗುವ ಅವಕಾಶ ದೊರೆಯುತ್ತದೆ.

ಒಮ್ಮೆ ಸಮ್ಮಿಲನವಾದ ಕೂಡಲೆ ಗಂಡು ನೊಣವು ಸಾವನ್ನಪ್ಪುತ್ತದೆ. ನಂತರ

ಆಹಾರವನ್ನು ಚೆನ್ನಾಗಿ ತಿಂದುಕೊಂಡು ರಾಣಿ ಎಲ್ಲಿ ಸಿಗುತ್ತದೆ ಎಂಬ ಯೋಚನೆ ಬಿಟ್ಟರೆ, ಗಂಡು ನೊಣಗಳಿಗೆ ಬೇರೆ ಕೆಲಸ ಇರುವುದಿಲ್ಲ.

ಗೂಡಿನಲ್ಲಿ ಹೊಸ ರಾಣಿಯ ಉಗಮ ಆಗುವುದು ವರ್ಷದ ಒಂದೇ ಸಮಯದಲ್ಲಿ ಸಾಮಾನ್ಯವಾಗಿ ಸೆಪ್ಟಂಬರ್ ತಿಂಗಳಲ್ಲಿ ಆರಂಭಗೊಳ್ಳುತ್ತದೆ. ರಾಣಿಯ ಗಮನಕ್ಕೂ ಮುಂಚೆಯೇ ಗಂಡು ನೊಣಗಳು ಗೂಡಿನಲ್ಲಿ ಜನಿಸಿರುತ್ತವೆ., ಸಮ್ಮಿಲನದ ಅವಕಾಶ ಸಿಗದೆ ಬದುಕುಳಿದ ಗಂಡುನೊಣಗಳ ರೆಕ್ಕೆಗಳನ್ನು ಕತ್ತರಿಸಿ, ಕೆಲಸಗಾರ ನೊಣಗಳು ಗೂಡಿನಿಂದ ಹೊರಗೆ ಹಾಕುತ್ತವೆ. ಹೊರಗಡೆ ಕಾದು ಕುಳಿತ ಇರುವೆಗಳಿಗೆ ಹೀಗೆ ಆಹಾರವಾಗುವ ಮೂಲಕ ಆ ವರ್ಷದ ಗಂಡುನೊಣಗಳ ಇತಿಹಾಸ ಮುಗಿಯುತ್ತದೆ.

ಕರ್ನಾಟಕದಲ್ಲಿ ಅನೇಕ ಬಗೆಯ ಜೇನುನೊಣಗಳಿವೆ. ಅವುಗಳಲ್ಲಿ ಪ್ರಧಾನವಾದದ್ದು ಹೆಜ್ಜೇನು (ಎಪಿಸ್

ಡಾರ್ಸಟ), ಹೆಜ್ಜೇನಿಗೆ ದೊಡ್ಡ ಜೇನಿ, ಹಿರಿಜೇನು, ಮಲೆ ಜೇನು ಮುಂತಾದ ಹೆಸರುಗಳೂ ಇವೆ. ಇದು ಜೇನುನೊಣಗಳಲ್ಲಿಯೇ ಅತಿ ದೊಡ್ಡ ಗಾತ್ರದ ಜೇನು. ಎತ್ತರದ ಮರದ ಕೊಂಬೆಗಳಲ್ಲಿ, ದೊಡ್ಡ–ದೊಡ್ಡ ಕಟ್ಟಡಗಳಲ್ಲಿ, ಎತ್ತರವಾದ ನೀರಿನ ಟ್ಯಾಂಕುಗಳಲ್ಲಿ, ಟವರ್ ಕಂಬಗಳಲ್ಲಿ ಒಂದೇ ಎರಿಯ ಗೂಡುಗಳನ್ನು ನಿರ್ಮಿಸುತ್ತವೆ. . ಆ ಎರಿಯಲ್ಲಿ ಮೇಲ್ಭಾಗದಲ್ಲಿ ಜೇನುತುಪ್ಪ, ಮಧ್ಯಭಾಗದಲ್ಲಿ ಸಸ್ಯಮೂಲಗಳ ಪರಾಗ ಸಂಗ್ರಹಿಸಿ, ಕೆಳಭಾಗದಲ್ಲಿ ಸಂಸಾರ ಎಂದರೆ ಮೊಟ್ಟೆ ಮತ್ತು ಮರಿಗಳನ್ನು ಬೆಳೆಸುತ್ತವೆ.

ಒಂದು ಗೂಡಿಗೆ ಒಂದೇ ರಾಣಿ. ಸರಿಯಾದ ಸಮಯದಲ್ಲಿ ಜೇನಿನ ಕೊಯ್ಲು ಮಾಡಿದರೆ ಸುಮಾರು 20 ಕಿಲೋ ವರೆಗೆ ಜೇನುತುಪ್ಪ ದೊರೆಯುತ್ತದೆ. ಕೊಡಗಿನ ಜೇನುಕುರುಬರು, ಎರವರು, ಉತ್ತರ ಕನ್ನಡದ ಕುಣಬಿಗಳು, ಸಿದ್ದಿಗಳು, ಚಾಮರಾಜನಗರದ ಸೋಲಿಗರು ಮುಂತಾದ ಗಿರಿಜನರ ಆಹಾರ ಮತ್ತು ಆದಾಯದ ಮೂಲವಾಗಿದೆ ಈ ಹೆಜ್ಜೇನು. ಈ ಜೇನನ್ನು ಸಾಕಾಣಿಕೆ ಮಾಡಲು ಬರುವುದಿಲ್ಲ.

ಮತ್ತೊಂದು ಪ್ರಮುಖ ಪ್ರಭೇದ ಕೋಲುಜೇನು (ಎಪಿಸ್ ಫ್ಲೋರಿಯ). ಕಿರು ಜೇನು, ಕೋಲುಜೇನು, ಪುಲ್ಲಿಜೇನು, ಕಡ್ಡಿ ಜೇನು ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಈ ಜೇನು ಗಿಡಗಳ ಕಂಟಿಗಳಲ್ಲಿ ಹೆಜ್ಜೇನಿನಂತೆಯೇ ಒಂದೇ ಒಂದು ಎರಿಯನ್ನು ಕಟ್ಟುತ್ತದೆ. ಆದರೆ ಜೇನುತುಪ್ಪದ ಇಳುವರಿ ಭಾರೀ ಕಡಿಮೆ. ಅರ್ಧ ಕಿಲೋದಿಂದ ಒಂದು ಕಿಲೋವರೆಗೆ ಜೇನುತುಪ್ಪದ ಸಂಗ್ರಹಣೆ ಮಾಡುತ್ತದೆ. ಕೋಲುಜೇನು ಕೂಡ ಸಾಕಾಣಿಕೆಗೆ ಯೋಗ್ಯವಲ್ಲದ ಜೇನು ಪ್ರಭೇದ.

ಹೆಜ್ಜೇನು ಮತ್ತು ಕೋಲುಜೇನುಗಳು ಬೆಳಕುಪ್ರಿಯ. ಇನ್ನೊಂದು ಕತ್ತಲುಪ್ರಿಯ ಜೇನು ಪ್ರಭೇದವಿದೆ. ಅದುವೇ ತುಡುವೆ ಜೇನು ಅಥವಾ ತುಡುಜೇನು (ಎಪಿಸ್ ಸೆರಾನ). ಈ ಜೇನು ಪ್ರಭೇದವು ಮರದ ಪೊಟರೆಗಳಲ್ಲಿ, ಹುತ್ತದ ಒಳಭಾಗದಲ್ಲಿ , ಕಲ್ಲು ಕೋರೆಗಳ ಒಳಗೆ ಮುಂತಾದ ಕತ್ತಲು ಪ್ರದೇಶಗಳಲ್ಲಿ ಗೂಡು ಕಟ್ಟುತ್ತದೆ. ಕೋಲುಜೇನು ಮತ್ತು ಹೆಜ್ಜೇನು ಒಂದೇ ಒಂದು ಎರಿಯನ್ನು ಕಟ್ಟಿ ಕುಟುಂಬ ರಚನೆ ಮಾಡಿದರೆ, ತುಡುವೆ ಜೇನು ಅನೇಕ ಎರಿಗಳನ್ನು ಒಂದರ ಪಕ್ಕದಲ್ಲಿ ಮತ್ತೊಂದರಂತೆ ರಚನೆ ಮಾಡುತ್ತಾ ಹೋಗುತ್ತವೆ. ರಾಣಿ ನೊಣವು ಈ ಎಲ್ಲಾಎರಿಗಳಲ್ಲೂ ಓಡಾಡಿಕೊಂಡು ಮೊಟ್ಟೆ ಇಡುತ್ತದೆ. ಈ ಜೇನು ಪ್ರಭೇದವು ಸಾಕಾಣಿಕೆಗೆ ಯೋಗ್ಯವಾಗಿದ್ದು, ಪೆಟ್ಟಿಗೆಯಲ್ಲಿ ಸಾಕಬಹುದು. . ಒಂದು ಪೆಟ್ಟಿಗೆಯಲ್ಲಿ ಸರಾಸರಿ ಮೂರು ಕಿಲೋದಿಂದ ಹನ್ನೆರಡು ಕಿಲೋ ವರೆಗೆ ಜೇನುತುಪ್ಪವನ್ನು ಕೊಯ್ಲು ಮಾಡುತ್ತಾರೆ. ಹೆಚ್ಚಾಗಿ ಮಲೆನಾಡು ಭಾಗ ಮತ್ತು ಕರಾವಳಿ ಭಾಗಗಳಲ್ಲಿ ಇದರ ಸಾಕಾಣಿಕೆ ಸಾಗುತ್ತದೆ.

ಇವೆಲ್ಲವೂ ಮುಳ್ಳುಗಳಿಂದ ಚುಚ್ಚುವ ಜೇನು ಪ್ರಭೇದಗಳು ತ ಇವಲ್ಲದೆ ಎಲೆ ಮರೆಯ ಕಾಯಿಯಂತೆ ಚುಚ್ಚದ ಜೇನು ಒಂದು ಇದೆ. ಅದುವೇ ನಸುರು ಜೇನು (ಟೆಟ್ರಾಗೋನುಲ ಇರಿಡಿಪೆನ್ನಿಸ್). ರಾಳ ಜೇನು, ಮೂಲಿ ಜೇಣು, ಮೊಜಂಟಿ ಜೇನು, ಮುಜಂಟಿ ಜೇನು, ಸೊಳ್ಳೆ ಜೇನು, ಮಿಸ್ರಿ ಜೇನು, ನಸ್ರಿ ಜೇನು ಮುಂತಾದ ಹೆಸರುಗಳಿಂದ ಕರೆಯಲ್ಪಡುವ ಈ ಜೇನು ಪ್ರಭೇದವನ್ನು ಸಾಕುವ ವಿಧಾನ ಕೇವಲ ಮಲೆನಾಡಿಗರ ಮತ್ತು ಕರಾವಳಿ ಹಾಗೂ ಗಿರಿಜನ ಮೂಲನಿವಾಸಿಗಳಿಗೆ ಮಾತ್ರ ಗೊತ್ತಿರುತ್ತದೆ. ಇವುಗಳೂ ಕೂಡ ಕತ್ತಲುಪ್ರಿಯ ಜೇನು ಪ್ರಭೇದಗಳಾಗಿದ್ದು ಬಿದಿರಿನ ಬೊಂಬುಗಳಲ್ಲಿ, ಗೋಡೆಯ ಬಿರುಕುಗಳಲ್ಲಿ, ಮರದ ಪೊಟರೆಗಳಲ್ಲಿ, ವಿದ್ಯುತ್ ಪೆಟ್ಟಿಗೆಗಳ ಳಭಾಗಗಳಲ್ಲಿ ಇವುಗಳು ತಮ್ಮ ಗೂಡುಗಳನ್ನು ನಿರ್ಮಿಸುತ್ತವೆ. ಈ ಜೇನು ಪ್ರಭೇದವು ಒಂದರ ಮೇಲೊಂದು, ಗುಂಪು ಗುಂಪಾಗಿ ಜೋಳದ ಕಾಳುಗಳಂತಹ ಕೋಶಗಳನ್ನು ನಿರ್ಮಿಸಿ ಅದರಲ್ಲಿ ಮೊಟ್ಟೆ ಮರಿಗಳ ಸಾಕಾಣಿಕೆ

ಉತ್ತರದ ಭಾಗವನ್ನು ಸ್ಲಾವ್ ರವರಿಗೆ ಹಾಗೂ ದಕ್ಷಿಣ ಭಾಗ ಲ್ಯಾಟಿನ್ ಭಾಷಿಗರಿಗೆ ಎಂದಿರಾ? ನಡುವೆ ರೈನ್ ಪ್ರಾಂತ್ಯ ಇರುವುದು ನಮ್ಮಿಬ್ಬರಿಗೂ ಅನುಕೂಲಿಯಾಗಿಯೇ ಇದೆ. ಕೇವಲ ಫ್ರೆಂಚ್ ವಿರುದ್ಧವಷ್ಟೆ ಅಲ್ಲ.

ಮಾಡುತ್ತವೆ. ಹಾಗೆಯೇ ಗುಂಪು ಗುಂಪಾಗಿ ಕಡಲೆ ಕಾಳುಗಳಂತಹ ಕೋಶಗಳನ್ನು ನಿರ್ಮಿಸಿ ಅವುಗಳನ್ನು ಪರಾಗ ಮತ್ತು ಜೇನುತುಪ್ಪವನ್ನು ಸಂಗ್ರಹಣೆ ಮಾಡುತ್ತವೆ. ಆದ್ದರಿಂದ ಇವುಗಳನ್ನು ಬಿದಿರಿನ ಬೊಂಬುಗಳಲ್ಲಿ, ಮಡಿಕೆಗಳಲ್ಲಿ, ಮರದ ಹಳೆಯ ಪೆಟ್ಟಿಗೆಗಳಲ್ಲಿ, ಪ್ಲಾಸ್ಟಿಕ್ ಪೈಪುಗಳಲ್ಲಿ, ಅಡಿಕೆ ಮರದ ಬೊಂಬುಗಳಲ್ಲಿ ಸಾಕಾಣಿಕೆ ಮಾಡುತ್ತಾರೆ. ಚುಚ್ಚದೇ ಇರುವ ಕಾರಣ ಮನೆಯಲ್ಲಿ ಮಹಿಳೆಯರು, ವೃದ್ದರು, ವಿದ್ಯಾರ್ಥಿಗಳು ಎಲ್ಲರೂ ಸಾಕಾಣಿಕೆ ಮಾಡಬಹುದು. ಈ ಜೇನಿನ ಜೇನುತುಪ್ಪಕ್ಕೆ ಒಳ್ಳೆಯ ಔಷಧೀಯ ಗುಣ ಇದೆ ಎಂದ ಕಾರಣಕ್ಕೆ, ಜೇನುತುಪ್ಪದ ಬೆಲೆಯೂ ಹೆಚ್ಚು.

ಉತ್ತರದ ಭಾಗವನ್ನು ಸ್ಲಾವ್ ರವರಿಗೆ ಹಾಗೂ ದಕ್ಷಿಣ ಭಾಗ ಲ್ಯಾಟಿನ್ ಭಾಷಿಗರಿಗೆ ಎಂದಿರಾ? ನಡುವೆ ರೈನ್ ಪ್ರಾಂತ್ಯ ಇರುವುದು ನಮ್ಮಿಬ್ಬರಿಗೂ ಅನುಕೂಲಿಯಾಗಿಯೇ ಇದೆ. ಕೇವಲ ಫ್ರೆಂಚ್ ವಿರುದ್ಧವಷ್ಟೆ ಅಲ್ಲ.

ಆದರೆ, ಈ ಪ್ರಭೇದಗಳ ಜೇನುತುಪ್ಪದ ಇರುವರಿ ಕಡಿಮೆ.. ಕರ್ನಾಟಕದಲ್ಲಿ ವರ್ಷಕ್ಕೆ ಸರಾಸರಿ 350 ಗ್ರಾಂ ನಿಂದ 650 ವರೆಗೆ ಜೇನುತುಪ್ಪವನ್ನು ನೀಡುತ್ತವೆ. ಈ ಇಳುವರಿಯ ಪ್ರಮಾಣವು ಪ್ರದೇಶದಿಂದ ಪ್ರದೇಶಕ್ಕೆ ಬೇರೆಯಾಗಿದೆ. .ಏಕೆಂದರೆ, ಉತ್ತರ ಕನ್ನಡ ಜಿಲ್ಲೆಯ ಜೋಯಿಡಾದಲ್ಲಿ ಒಂದು ವರ್ಷಕ್ಕೆ ಒಂದು ಕಿಲೋಗಿಂತಲೂ ಹೆಚ್ಚಿನ ಜೇನುತುಪ್ಪವನ್ನು ತೆಗೆದ ಜೇನುಕೃಷಿಕರು ಇದ್ದಾರೆ.

ಗಾದರೆ ಈ ಜೇನುಕೃಷಿಯನ್ನು ನಾವು ಸಮಗ್ರವಾಗಿ ಬಳಸಿಕೊಂಡಿದ್ದೇವೆಯೇ? ಎಂಬ ಪ್ರಶ್ನೆಗೆ ಉತ್ತರ ಇಲ್ಲ. ಜೇನುಕೃಷಿಯಲ್ಲಿ ತೊಡಗುವುದಕ್ಕೂ ಮೊದಲು ಅನೇಕ ವಿಷಯಗಳನ್ನು ತಿಳಿದುಕೊಳ್ಳುವುದು ಅತ್ಯಾವಶ್ಯಕ. ಜೇನುಕೃಷಿ ಆರಂಬಿಸುವವ್ಯಕ್ತಿಯು ಮೊದಲು ಮಾಡಬೇಕಾದದ್ದು ಜೇನು ನೊಣಗಳಿಂದ ಚುಚ್ಚಿಸಿಕೊಳ್ಳುವುದನ್ನು ಕಲಿಯಬೇಕು. ಅನೇಕ ಯುವ ಜನರು ಹಿಂದೆ ಸರಿಯುತ್ತಿರುವುದು ಇದೇ ಕಾರಣಕ್ಕೆ. ಕೆಲವು ಆಯಕಟ್ಟಿನ ಜಾಗಗಳಾದ ಕೆನ್ನೆ, ಮೂಗು, ಕಿವಿ ಮತ್ತು ಕಣ್ಣಿನ ಮೇಲೆ ಜೇನುನೊಣ ಚುಚ್ಚಿದಾಗ ಒಂದು ದಿನ ಪೂರ್ತಿ ನೋವು ಮತ್ತು ಊತವಿರುತ್ತದೆ. ಚುಚ್ಚಿಸಿಕೊಳ್ಳುವುದನ್ನು ಕರಗತ ಮಾಡಿಕೊಂಡರೆ ಮತ್ತು ಚುಚ್ಚುವುದರಿಂದ ಹೇಗೆ ತಪ್ಪಿಸಿಕೊಳ್ಳಬಹುದು ಎಂಬುದನ್ನು ತಿಳಿದುಕೊಂಡರೆ ಒಂದು ಹಂತದ ಜೇನು ಸಾಕಾಣಿಕೆ ಕಲಿತಂತೆ. ಇತ್ತೀಚೆಗೆ ತುಡುವೆ ಜೇನು ಸಾಕಾಣಿಕೆ ಸರ್ಕಾರದ ಮಟ್ಟದಲ್ಲಿಯೂ ಅನೇಕ ಸವಲತ್ತು ಮತ್ತು ಸೌಲಭ್ಯಗಳನ್ನು ಒದಗಿಸಲಾಗಿದೆ. ತೋಟಗಾರಿಕೆ ಇಲಾಖೆಯಿಂದ ರಿಯಾಯಿತಿಯಲ್ಲಿ ಜೇನುಪೆಟ್ಟಿಗೆ ಮತ್ತು ಜೇನು ಕುಟುಂಬ ನೀಡಿ ತರಬೇತಿಯನ್ನು ಸಹ ನೀಡಲಾಗುತ್ತಿದೆ. ಕಾಡಂಚಿನ ಜನಗಳಿಗೆ ದೊರೆಯುತ್ತಿರುವ ಈ ಸವಲತ್ತುಗಳನ್ನು ನಮ್ಮ ರೈತಾಪಿವರ್ಗ ಸದುಪಯೋಗಪಡಿಸಿಕೊಳ್ಳಬೇಕು.

ಜೇನುಕೃಷಿ ಮಲೆನಾಡು ಮತ್ತು ಕರಾವಳಿ ಭಾಗಗಳಿಗೆ ಅಷ್ಟೇ ಎಂಬ ಮನೋಭಾವನೆ ಕರ್ನಾಟಕದ ಬಯಲುಸೀಮೆಯ ಅನೇಕ ಜನರಲ್ಲಿ ಹಾಸುಹೊಕ್ಕಾಗಿಬಿಟ್ಟಿದೆ. ಬಯಲುಸೀಮೆಯ ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದ ಬಿರುಬಿಸಿಲಿನ ಕೊಪ್ಪಳ ಜಿಲ್ಲೆಯಲ್ಲಿಯೂ ಅನೇಕ ಪ್ರಗತಿಪರ ಜೇನುಕೃಷಿಕರು ಇದ್ದಾರೆ.. ಮನೆಯಲ್ಲಿ ಖಾಲಿ ಜೇನುಪೆಟ್ಟಿಗೆ ಇದ್ದರೆ, ಆ ಜೇನುಪೆಟ್ಟಿಗೆಗೆ ಕಾಡಿನಿಂದ ತುಡುವೆ ಜೇನು ಒಕ್ಕಲನ್ನು ತುಂಬಿಸುವುದು ತುಂಬಾ ಸರಳ. ಕೆಲವರು ಹುತ್ತ, ಮರದ ಪೊಟರೆ ಇತ್ಯಾದಿ ನೈಸರ್ಗಿಕ ಜಾಗಗಳಲ್ಲಿ ಗೂಡುಗಳನ್ನು ಹುಡುಕಿ ನೇರವಾಗಿ ಪೆಟ್ಟಿಗೆಗ ತುಂಬಿಸುತ್ತಾರೆ. ಇನ್ನೂ ಸುಲಭದ ಮಾರ್ಗ ಎಂದರೆ, ಮಣ್ಣಿನ ಮಡಿಕೆಯೊಳಗೆ ಕರಗಿಸಿದ ಜೇನುಮೇಣವನ್ನು ಮೆತ್ತುವುದು, ಜೇನುಮೇಣ ಇಲ್ಲದಿದ್ದಲ್ಲಿ ಬೆಲ್ಲದ ಪಾಕ ಸವರಿ ತಲೆಕೆಳಗಾಗಿ ಮಗುಚಿ ಪೊದೆಗಳ ಒಳಗೆ ಇಡುತ್ತಾರೆ. ಹೀಗೆ ಇಡುವಾಗ ಮಡಿಕೆಯ ಮಧ್ಯಭಾಗದಲ್ಲಿ ಜೇನುನೊಣ ನುಸುಳುವಷ್ಟು ಎರಡು ಅಥವಾ ಮೂರು ಚಿಕ್ಕ ರಂದ್ರಗಳನ್ನು ಕೊರೆಯುತ್ತಾರೆ. ಸುಮಾರು ಒಂದು ತಿಂಗಳಾಗುವಷ್ಟರಲ್ಲಿ ಯಾವುದಾದರೂ ಒಂದು ಮಡಿಕೆಗೆ ಅಥವಾ ಎಲ್ಲಾ ಮಡಿಕೆಗಳಿಗೂ ನೈಸರ್ಗಿಕವಾಗಿ ಪಾಲಾಗಿ ಬರುವ ತುಡುವೆ ಜೇನು ಒಕ್ಕಲು ಬಂದು ನೆಲೆಸಿರುತ್ತವೆ. ಆ

ಮಡಿಕೆಯಲ್ಲಿ ನೆಲಸಿರುವುದು ಖಚಿತವಾದ ನಂತರ ಬೇಕಾದ ಸ್ಥಳಕ್ಕೆ ಮಡಿಕೆಯನ್ನು ಒಯ್ಯಬಹುದು. ಕೆಲವರು ಮಡಿಕೆಯಲ್ಲೇ ಸಾಕಾಣಿಕೆ ಮುಂದುವರೆಸಬಹುದು ಅಥವಾ ಒಕ್ಕಲನ್ನು ಮರದ ಪೆಟ್ಟಿಗೆಗಳಿಗೆ ವರ್ಗಾಯಿಸಬಹುದು.. ಮಲೆನಾಡಿನ ಅನೇಕ ಜೇನು ಕೃಷಿಕರು ಈ ರೀತಿಯಲ್ಲೇ ಪ್ರತಿ ವರ್ಷ ನೂರಾರು ತುಡುವೆ ಜೇನು ಕುಟುಂಬಗಳನ್ನು ಪಡೆಯುತ್ತಾರೆ.

ನ್ನು ಜೇನುಕೃಷಿ ಎಂದ ಕೂಡಲೇ ಜೇನುತುಪ್ಪವನ್ನು ಸಂಗ್ರಹಿಸಿ,ಮಾರಾಟ ಮಾಡಿಯೇ ಸಂಪಾದನೆ ಮಾಡಬೇಕು ಎಂಬುದೂ ತಪ್ಪು ಗ್ರಹಿಕ. . ಜೇನು ಒಕ್ಕಲು (ಜೇನು ಕುಟುಂಬ) ಗಳನ್ನು ಮಾರಾಟ ಮಾಡಿ ಹೆಚ್ಚಿನ ಸಂಪಾದನೆ ಮಾಡಿದವರೂ ಇದ್ದಾರೆ. . ಜೇನುಕೃಷಿಯಲ್ಲಿ ಅನೇಕ ಜೇನು ಉತ್ಪನ್ನಗಳು ಇವೆ ಎಂದಾಯ್ತು. ಅವುಗಳೆಂದರೆ, ಜೇನುತುಪ್ಪ, ಜೇನು ಮೇಣ, ಪರಾಗ, ರಾಜಶಾಹಿ ರಸ, ಜೇನು ವಿಷ ಮತ್ತು ಜೇನು ಒಕ್ಕಲು. ಒಳ್ಳೆಯ ಜೇನು ತುಪ್ಪಕ್ಕಂತೂ ಯಾವಾಗಲೂ ಮಾರುಕಟ್ಟೆಯ ಕೊರತೆ ಇರುವುದೇ ಇಲ್ಲ.. ವರ್ಷದ ಕೊನೆಯಲ್ಲಿ ಜೇನು ಮೇಣವನ್ನು ತಯಾರಿಸಿ ಮಾರಾಟ ಮಾಡಬಹುದು. ಸೂರ್ಯಕಾಂತಿಯಂತಹ ಬೆಳೆ ಇದ್ದರೆ ಹೆಚ್ಚಿನ ಪ್ರಮಾಣದ ಪರಾಗವನ್ನು ಸಂಗ್ರಹಿಸಿ ಮಾರಾಟ ಮಾಡಬಹುದು. ರಾಜಶಾಹಿ ರಸ, ಇದು ಕೆಲಸಗಾರ ನೊಣಗಳು ಉತ್ಪಾದನೆ ಮಾಡಿ ರಾಣಿ ಜೇನುನೊಣಕ್ಕೆ ಉಣಬಡಿಸುತ್ತವೆ. ಇದೊಂದು ವಿಶೇಷ ಆಹಾರ. ರಾಜಶಾಹಿ ರಸವನ್ನು ಸೇವಿಸಿದರೆ ವಯಸ್ಸು ಆಗದೆ ಸೌಂದರ್ಯವು ಹಾಗೆಯೇ ಇರುತ್ತದೆ.ನ್ನುವ ನಂಬಿಕೆ ಇದೆ. ಆದ್ದರಿಂದಲೇ ದೊಡ್ಡ–ದೊಡ್ಡ ಸಿನೆಮಾ ತಾರೆಯರು ತಮ್ಮ ಸೌಂದರ್ಯವನ್ನು ಯಥಾವತ್ತಾಗಿ ಕಾಪಾಡಿಕೊಳ್ಳಲು ರಾಜಶಾಹಿ ರಸವನ್ನು ಸೇವಿಸುತ್ತಾರೆ. ಕೇರಳದಲ್ಲಿ ಈಗಾಗಲೇ ಇದರ ತ್ಪಾದನೆಯೂ ಕೂಡ ನಡೆಯುತ್ತಿದೆ.

ಕರ್ನಾಟಕದಲ್ಲಿ ಜೇನು ಸಾಕಾಣಿಕೆಗೆ ಒಲವು ತೋರಿಸುತ್ತುವವರೆಲ್ಲರಿಗೂ ಜೇನು ಒಕ್ಕಲುಗಳನ್ನು ಪೂರೈಸಲು ಸಾಧ್ಯವಾಗದೆ ಪಕ್ಕದ ಕೇರಳ ರಾಜ್ಯದಿಂದ ತರಿಸಿ ವಿತರಣೆ ಮಾಡಲಾಗುತ್ತಿದೆ. ಜೇನು ಕುಟುಂಬಗಳನ್ನು ಪಾಲುಮಾಡುವ ವಿಧಾನವನ್ನು ತಿಳಿದುಕೊಂಡರೆ, ಜೇನು ಕುಟುಂಬಗಳನ್ನು ಮಾರಾಟದಿಂದಲೇ ಹೆಚ್ಚಿನ ಹಣ ಸಂಪಾದನೆ ಮಾಡಬಹುದು. ತುಡುವೆಯ ಜೇನಿನ ಜೊತೆಯಲ್ಲೇ ಸಣ್ಣ ಪ್ರಮಾಣದಲ್ಲಿ ಚುಚ್ಚದ ಜೇನುನ ಸಾಕಾಣಿಕೆಯನ್ನೂ ಕೂಡ ಮಾಡಬಹುದು.

ಸ್ಥಳಾಂತರ ಜೇನುಕೃಷಿ ಉದ್ಯೋಗಾವಕಾಶ ಒದಗಿಸಬಲ್ಲ ಮತ್ತೊಂದು ವಿಧಾನ. ಸ್ಥಳಾಂತರ ಜೇನುಕೃಷಿ ಎಂದರೆ ಜೇನು ನೊಣಗಳಿಗೆ ಎಲ್ಲಿ ಆಹಾರ ದೊರೆಯುತ್ತದೆಯೋ ಅಲ್ಲಿಗೆ, ಜೇನುಪೆಟ್ಟಿಗೆಗಳನ್ನು ಸ್ಥಳಾಂತರಿಸುವುದು. ಉದಾಹರಣೆಗೆ ಮುಂಗಾರಿನಲ್ಲಿ ಬಯಲುಸೀಮೆಯ ಸೂರ್ಯಕಾಂತಿ ಹೊಲಗಳಲ್ಲಿ ಇಟ್ಟು ಹಿಂಗಾರಿನಲ್ಲಿ ಮಲೆನಾಡಿನ ಕಾಫಿ ತೋಟಗಳಲ್ಲಿಡಬಹುದು. ಹಾಗೆಯೇ ಕರಾವಳಿ ಭಾಗದ ರಬ್ಬರ್ ತೋಟಗಳಲ್ಲಿಯೂ ಜೇನು ಪೆಟ್ಟಿಗೆಗಳನ್ನು ಇರಿಸಬಹುದು.. . ಚುಚ್ಚದ ಜೇನನ್ನು ತಾರಸೀ ತೋಟದಲ್ಲಿ ಸಾಕಬಹುದು. ತುಡುವೆ ಮತ್ತು ಚುಚ್ಚದ ಜೇನು ಎರಡನ್ನೂ ಕೂಡ ಬೆಂಗಳೂರಿನಂತಹ ನಗರಗಳಲ್ಲಿ ಸಾಕಬಹುದು. ಬೆಂಗಳೂರಿನಲ್ಲಿ ಇರುವ ಗಿಡಮರಗಳು, ತಾರಸೀ ತೋಟಗಳು, ಸಸ್ಯ ಉದ್ಯಾನವನಗಳು ಮತ್ತು ವರ್ಷವಿಡೀ ಇರುವ ಕಬ್ಬಿನ ರಸ, ಹಣ್ಣಿನ ರಸದ ಅಂಗಡಿಗಳು ಇವಕ್ಕೆ ಆಹಾರ ಒದಗಿಸಬಲ್ಲವು. ಈಗಾಗಲೇ ಬೆಂಗಳೂರು ನಗರದಲ್ಲಿ ತುಡುವೆ ಜೇನು ಮತ್ತು ಚುಚ್ಚದ ಜೇನು ಸಾಕಾಣಿಕೆ ಮಾಡಿ ಯಶಸ್ಸನ್ನು ಕಂಡಿರುವ ಅನೇಕ ಜನರು ಇದ್ದಾರೆ. ಇತ್ತೀಚೆಗೆ ಮದುವೆ ಇನ್ನಿತರ ಶುಭ ಸಮಾರಂಭಗಳಲ್ಲಿ ಚುಚ್ಚದ ಜೇನು ಗೂಡು ಮತ್ತು ಒಕ್ಕಲುಗಳನ್ನು ಉಡುಗೊರೆಯಾಗಿ ನೀಡುತ್ತಿದ್ದಾರೆ. ಇದು ಚುಚ್ಚದ ಜೇನು ಸಂರಕ್ಷಣೆಗೆ ಉತ್ತಮ ಮಾರ್ಗವಾಗಬಲ್ಲದು.

ನಾವು ಉಷ್ಣವಲಯದಲ್ಲಿ ಇರುವ ಕಾರಣ ಕೃಷಿಯಲ್ಲಿ ಪರಾಗಸ್ಪರ್ಶವು ಬಹುತೇಕ ಕೀಟಗಳನ್ನೇ ಅವಲಂಬಿಸಿರುತ್ತದೆ. ಅದರಲ್ಲಿಯೂ ಜೇನು ನೊಣಗಳ ಪಾತ್ರ ದೊಡ್ಡದಿದೆ ಎಂಬ ವಿಷಯವನ್ನು ರೈತಾಪಿವರ್ಗಕ್ಕೆ ತಿಳಿಯಪಡಿಸುವುದು ಮಹತ್ವವಾಗಿದೆ. ರೈತರಿಗೆ ಇದು ನೇರವಾಗಿ ತಿಳಿಯುವುದಿಲ್ಲ. ಉದಾಹರಣೆಗೆ ಸೂರ್ಯಕಾಂತಿ ಹೊಲದಲ್ಲಿ ಜೇನು ಪೆಟ್ಟಿಗೆ ಇಟ್ಟು ಪರಾಗಸ್ಪರ್ಷ ಮಾಡಿಸಿದರೆ ಇಳುವರಿಯಲ್ಲಿ ಅಂತಹ ವ್ಯತ್ಯಾಸ ಕಂಡುಬರುವುದಿಲ್ಲ. ಆದರೆ ಸೂರ್ಯಕಾಂತಿ ಬೀಜಗಳ ತೂಕದಲ್ಲಿ ಉತ್ತಮ ಬೆಳವಣಿಗೆ ಕಂಡುಬರುತ್ತದೆ. ಇದು ಪ್ರಮುಖ ತೋಟಗಾರಿಕಾ ಬೆಳೆಗಳಾದಅಡಿಕೆ, ತೆಂಗು, ಕಾಫಿ, ಏಲಕ್ಕಿ ಇನ್ನೂ ಮುಂತಾದ ಬೆಳೆಗಳಿಗೆ ಅನ್ವಯವಾಗುತ್ತದೆ. ಒಮ್ಮೆ ರೈತಾಪಿವರ್ಗ ಇದನ್ನು ತಿಳಿದುಕೊಂಡರೆ ನಂತರ ತಾವಾಗಿಯೇ ಜೇನುಸಾಕಾಣಿಕೆಯನ್ನು ಮುಂದುವರೆಸುತ್ತಾರೆ. ನಮಗೆ ಜೇನು ತುಪ್ಪದ ಅವಶ್ಯಕತೆ ಇಲ್ಲ, ಪರಾಗಸ್ಪರ್ಷವೇ ಸಾಕು ಎನ್ನುವವರಿಗೆ ಚುಚ್ಚದ ಜೇನು ಹೇಳಿ ಮಾಡಿಸಿದ್ದು. ಹೀಗೆ ಕೃಷಿಯಲ್ಲಿ ಜೇನು ಕುಟುಂಬಗಳನ್ನೂ ಒಂದು ಅಂಗವಾಗಿ ಪರಿಗಣಿಸಿ ಸಾಕಾಣಿಕೆ ಮಾಡುತ್ತಾ ಸಮಗ್ರ ಕೃಷಿ ನಡೆಸಿದರೆ "ಮುಂದಿನ ಪೀಳಿಗೆಗಾಗಿ ಸುಸ್ಥಿರ ಕೃಷಿ" ಎಂಬ ಗುರಿಯನ್ನು ಸಾಧಿಸಲು ಸಾಕಾರವಾಗುತ್ತದೆ.

ಶ್ರೀ ಚರಣ್ ಕುಮಾರ್ ಅರಣ್ಯ ವಿಜ್ಞಾನಿಗಳು. ನ್ಯಾಶನಲ್ ಕಂಸರ್ವೇಶನ್ ಫಂಡ್ ವತಿಯಿಂದ ಆಗಾಗ್ಗೆ ಪರಿಸರ ಕುರಿತ ಲೇಖನಗಳನ್ನು ಪ್ರಕಟಿಸುತ್ತಾರೆ. ಕೃಪೆ: ಎನ್ಸಿಎಫ್: ಲೇಖಕರ ವಿಳಾಸ: ಚೀಲನಹಳ್ಳಿ, ಅರಸೀಕೆರೆ ತಾ. ಹಾಸನ.



ಪಿರಮಿಡ್ ಎತ್ತರವನ್ನು ಅಳೆದ ಕಥೆ

▸▸ ವಿ. ಶಿವಶಂಕರ ಶಾಸ್ತ್ರಿ

ಥೇಲೀಸ್ ಗ್ರೀಸಿನ ಮಿಲೇಟಸ್ ಪಟ್ಟಣದಲ್ಲಿದ್ದ. ಇವನಿದ್ದ ಕಾಲ ಕ್ರಿ. ಪೂ . 625 . ಇವನಿಗೆ ಗ್ರೀಸಿನ ಮೊದಲ ತತ್ವಜ್ಞಾನಿ, ಮೊದಲ ಗಣಿತಜ್ಞ, ಮೊದಲ ವಿಜ್ಞಾನಿ ಎಂಬ ಬಿರುದುಗಳಿವೆ.

ಅಲ್ಲದೆ ಇವನನ್ನು ಗ್ರೀಸಿನ ಸಪ್ತ ಮೇಧಾವಿಗಳಲ್ಲಿ ಒಬ್ಬನೆಂದು ಪರಿಗಣಿಸುತ್ತಾರೆ. ಇವನಿಗೆ ಬಾಲ್ಯದಿಂದಲೂ ಓದುಬರಹ ಬರುತ್ತಿತ್ತಂತೆ, ಇವನ ಸಾಕ್ಷರತೆಯನ್ನು ಗಮನಿಸಿ ಇವನಿದ್ದ ಮಿಲೇಟಸ್ ಪಟ್ಟಣದ ಪಂಚಾಯ್ತಿಯವರು ಇವನಿಗೆ ಬಾಲ್ಯದಲ್ಲಿಯೇ ಗುಮಾಸ್ತೆಯ ಕೆಲಸವಹಿಸಿದ್ದರು. ಪಟ್ಟಣದ ಆಯ ವ್ಯಯಗಳು, ಎಷ್ಟು ಜನ ಹುಟ್ಟಿದರು, ಯಾರು ಸತ್ತರು, ಊರುಬಿಟ್ಟು ಎಷ್ಟು ಮಂದಿ ಹೊರಗೆ ಹೋಗಿದ್ದಾರೆ, ಮಳೆ ಬಂದ ದಿನಗಳು, ಇಂತಹುದರ ಅಂಕಿ ಅಂಶಗಳನ್ನು ದಾಖಲಿಸಿಡುವ ಕೆಲಸ ವಹಿಸಿದ್ದರು.



ಥೇಲೀಸ್

ಥೇಲೀಸ್ ಬಹಳ ಬುದ್ಧಿವಂತ. ತಾನು ಬರೆಯುತ್ತಿದ್ದ ದಾಖಲೆಗಳನ್ನು ನೋಡುತ್ತಿದ್ದಾಗ ಅವನಿಗೆ 7 ವರ್ಷಕ್ಕೊಮ್ಮೆ ಮಳೆ ಬರುವುದು ಒಂದು ತಿಂಗಳು ಮುಂದೆ ಹೋಗುತ್ತದೆ ಎಂಬ ಅಂಶ ತಿಳಿಯಿತು. ಅಂತಹುದು ಅದೇ ವರ್ಷ ಆಗುವುದೆಂದು ಲೆಕ್ಕ ಹಾಕಿದ. ಮಳೆ ಬರಲಿಲ್ಲ. ಜನರು ಹಾಹಾಕಾರ ಮಾಡತೊಡಗಿದರು. ಅವರ ಕೈಯಲ್ಲಿ ಹಣವಿರಲಿಲ್ಲ. ಅದೇ ತಿಂಗಳು ಒಲಂಪಿಕ್ ಜಾತ್ರೆಗೆ ಹೋಗಬೇಕಾಗಿತ್ತು. ಮಳೆ ಬರದಿದ್ದರೆ ಅವರು ಬೆಳೆಯುವ ಆಲಿವ್ ಬೀಜಗಳಿಂದ ಎಣ್ಣೆ ತೆಗೆದು ಗಾಣವಾಡಿ, ಹಣ ಸಂಪಾದಿಸಬೇಕಿತ್ತು.

ಆಲಿವ್ ಬೀಜಗಳು

ಅವರು ಥೇಲೀಸ್‌ನ ಬಳಿ ಬಂದರು. ಅವನು ನಿಮ್ಮ ಬಳಿ ಇರುವ ಎಣ್ಣೆಯ ಗಾಣಗಳನ್ನು ಮಾರಿದರೆ ನಾನು ಕೊಂಡು ಹಣ ಕೊಡುತ್ತೇನೆ ಎಂದ.

ಜನರು ಗಾಣಗಳನ್ನು ಮಾರಿ ಹಣಪಡೆದು ಒಲಂಪಿಕ್ ಜಾತ್ರೆಗೆ ಖುಷಿಯಾಗಿ ಹೋದರು.

ಎಣ್ಣೆಯ ಗಾಣ

ತಿಂಗಳನಂತರ ಮಳೆ ಬಂದಿತು. ಆಲಿವ್ ಬೀಜಗಳು ಚೆನ್ನಾಗಿ ಒಣಗಿದ್ದವು. ಮಳೆ ಬಂದದ್ದರಿಂದ ಅವುಗಳು ಬೇಗನೆ ಕೊಳೆಯಬಹುದಿತ್ತು. ಆದ್ದರಿಂದ ಬೇಗ ಗಾಣ ವಾಡಿ ಎಣ್ಣೆ ತೆಗೆಯ ಬೇಕಿತ್ತು. ಮರದ ಗಾಣ ಮಾಡಿಕೊಳ್ಳಲು ಜನರ ಬಳಿ ಸಮಯವಿರಲಿಲ್ಲ. ಅವರು ಮತ್ತೆ ಥೇಲೀಸನ ಬಳಿ ಬಂದರು. ಅವನು ನನಗೆ ಎಣ್ಣೆ ಕೊಟ್ಟರೆ ಗಾಣ ಕೊಡುವೆ ಎಂದ. ಜನರು ಒಪ್ಪಿ ಗಾಣ ತೆಗೆದುಕೊಂಡು ಹೋದರು.

ಥೇಲೀಸಿನ ಬಳಿ ಎಣ್ಣೆ ಉದ್ದನೆಯ ಜಾಡಿ, ಆಂಫೋರಾಗಳಲ್ಲಿ ಸಂಗ್ರಹ ವಾಗತೊಡಗಿತು. ಎಣ್ಣೆ ಕೊಳ್ಳುವವರು ದೂರದ ಅಲೆಕ್ಸಾಂಡ್ರಿಯಾದಲ್ಲಿ ಇದ್ದಾರೆಂದು, ಅಲ್ಲಿ ಬಹಳ ಲಾಭ ಬರುವುದೆಂದೂ ಯಾತ್ರಿಕರು ಹೇಳಿದರು.

ಅಲೆಕ್ಸಾಂಡ್ರಿಯಾಗೆ ಹೋಗಬೇಕಾದರೆ ಕತ್ತೆಗಳ ಮೇಲೆ ಆಂಫೋರಾಗಳನ್ನು ಇಟ್ಟುಕೊಂಡು ಸಮುದ್ರ ತೀರಕ್ಕೆ ಹೋಗಬೇಕಿತ್ತು. ಅಲ್ಲಿಂದ ಈ ಜಾಡಿಗಳನ್ನು ಇಡುವ ದೋಣಿ ಹುಡುಕಿ


ಅಲೆಕ್ಸಾಂಡ್ರಿಯಾದ ಬೀದಿ

ಅಲೆಕ್ಸಾಂಡ್ರಿಯಾಗೆ ಸಾಗಬೇಕಿತ್ತು.

ಥೇಲೀಸ್ ಹಾಗೇ ಮಾಡಿದ. ಅಲೆಕ್ಸಾಂಡ್ರಿಯಾ ಸೇರಿಕೊಂಡ. ಅವನಿಗೆ ಆಶ್ಚರ್ಯವಾಯಿತು.

ಅವನು ಅಷ್ಟು ದೊಡ್ಡ ಪಟ್ಟಣವನ್ನು ನೋಡಿಯೇ ಇರಲಿಲ್ಲ. ಎಲ್ಲಿ ನೋಡಿದರೂ ಜನ. ಜಗತ್ತಿನ ಎಲ್ಲಾ ಕಡೆಯಿಂದ ಬಂದಿದ್ದರು .ಎಣ್ಣೆ ವ್ಯಾಪಾರ ಚೆನ್ನಾಗಿ ಆಗಿ ಕೈ ತುಂಬಾ ಹಣ ಬಂದಿತು. ಥೇಲೀಸ್ ಊರು ನೋಡಲು ಹೊರಟ.

ಅಂದಿಗೆ ಜಗತ್ತಿನ ಏಳು ಅದ್ಭುತಗಳಲ್ಲಿ ಒಂದೆನಿಸಿದ ಅಲೆಕ್ಸಾಂಡ್ರಿಯಾದ ಸಮುದ್ರ ದೀಪದ ಕಂಬ ನೋಡಿದ. ಇದು 300 ಅಡಿ ಎತ್ತರವಿದ್ದು ಅದರ ತುದಿಯಲ್ಲಿ ಕಟ್ಟಿಗೆ ಉರಿಸಿ ಬೆಳಕು ದೂರದ ಹಡಗುಗಳಿಗೆ ಕಾಣುವಂತೆ ಮಾಡುತ್ತಿದ್ದರು. ಅಬ್ಬಾ ಎಷ್ಟು ಎತ್ತರದ ಕಟ್ಟಡ ಕಟ್ಟಿದ್ದಾರೆ ಎಂದು ಕೊಂಡ ಥೇಲೀಸ್. ದೂರದ ಥೀಬ್ಸ್ ನಲ್ಲಿ ಇದಕ್ಕಿಂತಲೂ ಎತ್ತರದ ಪಿರಮಿಡ್ ಗಳಿವೆ ಎಂದರು ಜನ.

ಥೇಲೀಸ್ ದೋಣಿ ಹತ್ತಿ 700 ಮೈಲಿ

ಗೀಝಾ ಪಿರಮಿಡ್

ದೂರದ ಥೀಬ್ಸ್ ಗೆ ನೈಲ್ ನದಿಯಲ್ಲಿ ಪ್ರಯಾಣ ಮಾಡಿದ. ಅವನು ಅಲ್ಲಿನ ಗೀಝಾ ಪಿರಮಿಡ್ ನೋಡಿ ದಂಗು ಬಡಿದು ಹೋದ. ಎಷ್ಟು ಭಾರಿ ಕಲ್ಲುಗಳನ್ನು ಜೋಡಿಸಿದ್ದಾರೆ ಎಂದು ಆಶ್ಚರ್ಯ ಪಟ್ಟ.

ಇದರ ಎತ್ತರ ಎಷ್ಟು ಎಂದು ಅಲ್ಲಿದ್ದವರನ್ನು ಕೇಳಿದ. ನಮಗೆ ಗೊತ್ತಿಲ್ಲ. ಎಂದರು ಅವರು. ಅದನ್ನು ತಿಳಿಸುವ ಬುದ್ಧಿವಂತರೆಲ್ಲ ಅಲೆಕ್ಸಾಂಡ್ರಿಯಾದಲ್ಲಿ ಇದ್ದಾರೆ ಎಂದು ಹೇಳಿದರು. ಥೇಲೀಸ್ ಏನೂ ತೋಚದೆ ನಿಂತ.

ಅಲ್ಲಿ ಕುರಿ ಕಾಯುತ್ತಿದ್ದರು. ಅವರು ಬೆಳಿಗ್ಗೆ ಸೂರ್ಯ ಹುಟ್ಟಿದಾಗ ಪಿರಮಿಡ್ ನ ನೆರಳಿಗೆ ಕುರಿ ಹಿಂಡನ್ನು ಕರೆದುಕೊಂಡು ಹೋಗುತ್ತಿದ್ದರು. ಸೂರ್ಯ ಚಲಿಸಿದಂತೆ ಪಿರಮಿಡ್ ನ ನೆರಳು ಚಲಿಸುತ್ತಿತ್ತು. ಕುರಿ ಹಿಂಡು ನೆರಳಿನೊಂದಿಗೆ ನಡೆಯುತ್ತಿತ್ತು. ಇದನ್ನು ಥೇಲೀಸ್ ಗಮನಿಸಿದ. ತನ್ನ

ಕುರಿಗಾಹಿಗಳು

ಊರುಗೋಲನ್ನು ಮರಳಿನಲ್ಲಿ ಹೂತು ಒಂದೇ ಕಡೆ ನಿಂತು ಮೂರು ನಾಲ್ಕು ದಿನ ಇದನ್ನು ಗಮನಿಸಿದ.

ಸೂರ್ಯ ಚಲಿಸುತ್ತಿದ್ದಾಗ ತನ್ನ ಊರುಗೋಲಿನ ನೆರಳು ಕೂಡ ಚಲಿಸುತ್ತಿತ್ತು. ಯಾವಾಗಲೋ ಒಮ್ಮೆ ಊರುಗೋಲಿನ ಎತ್ತರ ಅದು ಮೂಡಿಸುವ ನೆರಳಿಗೆ ಸಮನಾಗಿ ಇರುತ್ತಿತ್ತು.

ನನ್ನ ಊರುಗೋಲಿನ ನೆರಳಿಗೆ ಹೀಗಾಗಬೇಕಾದರೆ ಎತ್ತರದ ಪಿರಮಿಡ್ ಗೂ ಇದೇ ರೀತಿ ಇರಲೇಬೇಕಲ್ಲವೇ ಎಂದು ಥೇಲೀಸ್ ತರ್ಕಿಸಿದ. ತಕ್ಷಣವೇ ಅದೇ ಸಮಯ ನೋಡಿ ಹೆಜ್ಜೆಯಿಂದ ಎಣಿಕೆ ಹಾಕಿದ. ಪಿರಮಿಡ್ಡಿನ ಎತ್ತರ ಕಂಡುಕೊಂಡ. ಇದರಿಂದಲೇ ಥೇಲೀಸ್ ಜಗತ್ ಪ್ರಸಿದ್ಧನಾದ. ಪಿರಮಿಡ್ ಏರದೆಯೇ, ನೆರಳು ನೋಡಿಯೇ ಎತ್ತರವನ್ನು ಅಳೆದ ಬುದ್ಧಿವಂತನೆಂದು ಪ್ರಸಿದ್ಧಿಯಾದ. ಸೂರ್ಯ 45^0 ಕೋನದಲ್ಲಿದ್ದಾಗ ಹೀಗಾಗುತ್ತದೆ ನೆರಳು ವಸ್ತುವಿನ ಅರ್ಧದಷ್ಟು ಇರುತ್ತದೆ.

ಶ್ರೀ ವಿ. ಶಿವಶಂಕರ ಶಾಸ್ತ್ರಿಯವರು ನಿವೃತ್ತ ಬ್ಯಾಂಕ್ ಅಧಿಕಾರಿ. ಪ್ರವೃತ್ತಿಯಿಂದ ಹವ್ಯಾಸಿ ಗಣಿತ ಸಂವಹನ ಹಾಗೂ ಪ್ರಚಾರದಲ್ಲಿ ತೊಡಗಿಕೊಂಡಿದ್ದಾರೆ.



ನಗೆ ಕೋಶ 18

ವಿ. ಜ್ಞಾನ್

ಜೀವಸತ್ವದ ಸತ್ವಾನಾಶ

ಟೊಣಪ ಸಮ್ಮೂವಿನ ದೊಡ್ಡರೋಗ ಹಾಗೂ ಬಿಸಿಲು

ಟೊಣಪನಾದರೂ, ಸದಾ ಲವಲವಿಕೆಯಿಂದಿರುತ್ತಿದ್ದ ಸಮ್ಮೂ, ಕೆಲದಿನಗಳಿಂದ ಕೊಂಚ ವಿಚಲಿತನಾಗಿದ್ದ. ಮಾತೆತ್ತಿದ್ದರೆ ಕೈ ಎತ್ತಲು ತಯಾರಾಗುತ್ತಿದ್ದ ಸಮ್ಮೂವಿಗೆ, ಮಾತೆತ್ತಲೂ ಮೈಕೈ ನೋಯತೊಡಗಿತು. ಯಾವಾಗ ನೋಡಿದರೂ ಆಯಾಸ ಎನ್ನತೊಡಗಿದ. ತನ್ನ ನೆಚ್ಚಿನ ಹವ್ಯಾಸವಾದ ಸಂಜೆಯ ನ(ಹೊ)ಡೆದಾಟಕ್ಕೂ ಚಕ್ಕರ್ ಹಾಕಲಾರಂಭಿಸಿದ. ತನಗೆ ಏನೋ ದೊಡ್ಡ ರೋಗವಾಗಿದೆ ಎಂಬ ಮಾನಸಿಕ ಖಿನ್ನತೆಗೆ ಜಾರತೊಡಗಿದ.

ಸಮ್ಮೂವಿನಲ್ಲಾದ ಬದಲಾವಣೆ, ಪಮ್ಮೂವಿನ ಗಮನಕ್ಕೆ ಬರದೇ ಹೋಗಲಿಲ್ಲ. "ಸಣ್ಣಪುಟ್ಟದಕ್ಕೆ ದೊಡ್ಡ ಡಾಕ್ಟರ್ ಯಾಕೆ?" ಎಂದು, ಮೊದ-ಮೊದಲು ಸಮ್ಮೂ ಡಾಕ್ಟರ್ ಬಳಿಗೆ ಹೋಗುವುದನ್ನು ಪಮ್ಮುವೇ ತಪ್ಪಿಸಿದ್ದ. ಆದರೆ, ದೈಹಿಕ ಆರೋಗ್ಯ ಸುಮಾರಾಗಿದ್ದರೂ, ಮಾನಸಿಕವಾಗಿ ದಿನದಿಂದ ದಿನಕ್ಕೆ ಕುಗ್ಗುತ್ತಿದ್ದ ಸಮ್ಮೂವನ್ನು, ಪಮ್ಮೂವೇ "ಗೋವಿಂದ ಕ್ಲಿನಿಕ್"ನ ಡಾ. ವೆಂಕಪ್ಪರ ಬಳಿಗೆ ಕರೆದೊಯ್ದ.

ಡಾ. ವೆಂಕಪ್ಪ, ಒಳ್ಳೆಯ ಡಾಕ್ಟರರೇ. ತಕ್ಕಮಟ್ಟಿಗೆ, ಸರಿಯಾದ ರೋಗನಿದಾನವನ್ನೇ ಮಾಡುವವರು. ಆದರೆ, ಬಹಳ ಪರೀಕ್ಷಾ ಪ್ರವೀಣರು. ಸಾದಾ ಜ್ವರಕ್ಕೂ, ಸಾದ್ಯಂತ ರಕ್ತಪರೀಕ್ಷೆ ಮಾಡಿಸಿ, ಬೇರೇ ಯಾವುದೇ ದೊಡ್ಡ ರೋಗವಿಲ್ಲ ಎನ್ನುವುದನ್ನು ಖಚಿತಪಡಿಸಿಕೊಂಡೇ, "ಪ್ಯಾರಾ ಹೈಡ್ರಾಕ್ಸಿ ಎಸಿಟಾನಿಲೈಡ್" ಅಲಿಯಾಸ್ "ಪ್ಯಾರಾಸಿಟಮೋಲ್" ಬರೆದು ಕೊಡುವವರು. ಇಂಥವರ ಬಳಿ ಸಮ್ಮೂವಿನಂಥ ಸ್ವಯಂಘೋಷಿತ ದೊಡ್ಡರೋಗಿಗಳು ಹೋದರೆ, ಅವರಿಂದ ಒಂದೈದುಸಾವಿರವನ್ನಾದರೂ "ಗೋವಿಂದ" ಎನ್ನಿಸದಿದ್ದರೆ, "ಗೋವಿಂದ ಕ್ಲಿನಿಕ್" ಎಂಬ ಫಲಕವನ್ನೇ ಬದಲಾಯಿಸಬೇಕಾದೀತು!

ಸಮ್ಮೂವಿನ ಪ್ರವರವನ್ನು ಕೇಳಿಸಿಕೊಂಡ ಡಾಕ್ಟರರು, ಸಮ್ಮೂವನ್ನು ಮುಟ್ಟಲೂ ಇಲ್ಲ. ಬದಲಾಗಿ, "ಇದಿಷ್ಟ್ ಪರೀಕ್ಷಾ ಮಾಡಿಶ್ಕೊಂಡ್ ಬರ್ರಿ" ಎಂದು ಉದ್ದದ ಚೀಟಿಯೊಂದನ್ನು ಕೈಗಿತ್ತರು. "ಗೋವಿಂದ ಮಲ್ಟಿಪ್ಪಲ್ಟಿ ಸ್ಪೆಷಾಲಿಟಿ ಲ್ಯಾಬ್" ನಲ್ಲಿಯೇ ನಾಮ ಹಾಕಿಸಿಕೊಳ್ಳುವಂತೆ ತಾಕೀತನ್ನೂ ಮಾಡಿದರು.

ಗೋವಿಂದನ ಮಹಿಮೆ ಅರಿತಿದ್ದ ಪಮ್ಮೂ, ರಕ್ತಪರೀಕ್ಷೆಗೆಂದು ಸಮ್ಮೂವನ್ನು ಹೊರಗೆ ಕರೆದುಕೊಂಡು ಬಂದ. ಮೂರು ನಾಮ ಬೀಳುವ ಕಡೆ, ಒಂದೇ ನಾಮ ಬಿದ್ದು, ಸಮ್ಮೂವಿನ ಸಕಲ ರಕ್ತಪರೀಕ್ಷೆಗಳೂ ಮುಗಿದವು. ಯಥಾಪ್ರಕಾರ, ಎಲ್ಲ ಪರೀಕ್ಷೆಗಳಲ್ಲೂ ಬಾರ್ಡರ್ ಲೈನ್ ಮಾರ್ಕ್ಸ ಪಡೆದು ಸಮ್ಮೂ ಪಾಸಾಗಿದ್ದ. ಅಂದರೆ, ಪರೀಕ್ಷಿಸಿದ ಪರಿಮಾಣಗಳೆಲ್ಲ ಸಾಮಾನ್ಯ ಮಟ್ಟಕ್ಕಿಂತ ಸ್ವಲ್ಪ ಆಚೀಚೆ ಇದ್ದವು. ಸಮ್ಮೂವಿನ ರಕ್ತಪರೀಕ್ಷಾ ಅಂಕಪಟ್ಟಿ ಪಡೆದುಕೊಂಡ ಸಮ್ಮೂ-ಪಮ್ಮೂ ಜೋಡಿ, ಪುನಃ ವೆಂಕಪ್ಪನ ಸನ್ನಿಧಾನಕ್ಕೆ ಹೋಯಿತು.

ಪರೀಕ್ಷಾ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ವೆಂಕಪ್ಪ ಡಾಕ್ಟರರು, "ಜೀವಸತ್ವ-ಡಿ"ನ ಪ್ರಮಾಣಕ್ಕೆ ಗುಂಡು ಸುತ್ತಿದರು. ಅಲ್ಲಿ "25-ಹೈಡ್ರಾಕ್ಸಿ-ವಿಟಮಿನ್-ಡಿ ಮಟ್ಟ, 10 ನ್ಯಾನೋ ಗ್ರಾಂ/ಮಿಲಿ ಲೀಟರ್" ಎಂದು ಬರೆದಿತ್ತು. ಪಕ್ಕದಲ್ಲೇ ಸಾಮಾನ್ಯ ಮಟ್ಟ "20 ರಿಂದ 30 ನ್ಯಾನೋ ಗ್ರಾಂ/ಮಿಲಿ ಲೀಟರ್" ಎಂದೂ ಇತ್ತು. ಅಂದರೆ, ಸಮ್ಮೂವಿನ ದೇಹದಲ್ಲಿ ಡಿ-ಜೀವಸತ್ವದ ಕೊರತೆಯಾಗಿತ್ತು. ಈ ಪರಿಮಾಣವನ್ನು ಸಮ್ಮೂವಿನ ರೋಗಲಕ್ಷಣಗಳೊಂದಿಗೆ ತಾಳೆ ಹಾಕಿದ ಡಾ. ವೆಂಕಪ್ಪನವರು, "ನಂಗ ಇದ ಹಿಂಗ ಆಗೇದ ಅನ್ಸಿತ್ತು, ಆದ್ರೂ ಕನ್ಫರ್ಮ ಮಾಡ್ಕೊಳ್ಳೋಣು ಅಂತ ಪರೀಕ್ಷಾ ಮಾಡಿಶ್ಕೊಂಡ್ ಬರ್ರೀ ಅಂದಿದ್ದೆ. ಸಮ್ಮೂ ಮೈಯಾಗ್ ಡಿ-ಜೀವಸತ್ವದ ಸತ್ಯಾನಾಶ ಆಗೇದ. ಅದಕ್ ಇಂವ್ ಹಿಂಗ್ ಮಾನಸಿಕಗತ್ತೇ ಆಡಕ್ ಹತ್ಯಾನ. ಇವಂಗ್ ಬ್ಯಾರೇ ಯಾವ್ ದೊಡ್ಡ್ ರೋಗ ಬಂದಿಲ್ಲ. ಎರಡ್ ತಿಂಗ್ಳಾ ವಾರಕ್ಕೊಂದ್ರಂಗ ಈ ಕ್ಯಾಪ್ಸುಲ್ ತಗೊಂಡ್ರ, ಎಲ್ಲಾ ಬರೋಬರಾಗ್ತದ. ತಲಿ ಕೆಡಸ್ಕೊಳ್ಳೋದ ಏನಿಲ್ಲ" ಎಂದು ಗಣಕ-ಮುದ್ರಕದಿಂದ ಒಂದು ಹಾಳೆಯನ್ನು ಮುದ್ರಿಸಿ ಕೈಗಿತ್ತರು. ಕ್ಯಾಪ್ಸುಲನ್ನು ಗೋವಿಂದ ಫಾರ್ಮಸಿಯಲ್ಲೇ ಖರೀದಿಸಲು ಹೇಳಲು ಮರೆಯಲಿಲ್ಲ.

ವೆಂಕಪ್ಪನವರ ಕೋಣೆಯಿಂದ

ಹೊರಬಿದ್ದದ್ದೇ, "ಗೋವಿಂದ ಫಾರ್ಮಸಿ" ಕಡೆಗೆ ಹೊರಟಿದ್ದ ಸಮ್ಮೂವನ್ನು, ಪಮ್ಮೂ ತಡೆದ. ವೆಂಕಪ್ಪನವರು ಬರೆದಿದ್ದ ಬ್ರಾಂಡೆಡ್ ಜೀವಸತ್ವ ಖರೀದಿಸಹೊರಟರೆ, ವೆಂಕಪ್ಪನ ಸನ್ನಿಧಾನದಲ್ಲಿದ್ದೂ ಇಷ್ಟು ಹೊತ್ತಿನವರೆಗೆ ತಪ್ಪಿಸಿಕೊಂಡಿರುವ ತ್ರಿಪುಂಡ್ರ, ಇಷ್ಟರ ಮೇಲೆ ಜೋರಾಗಿಯೇ ಬೀಳುವುದನ್ನು ಪಮ್ಮೂ ಖಾತ್ರಿ ಪಡಿಸಿದ. ಬದಲಾಗಿ ಅದೇ ಕ್ಯಾಪ್ಸುಲ್, ಜನೌಷಧಿಯಲ್ಲಿ ಗುಣಮಟ್ಟದ ಖಾತ್ರಿಯೊಂದಿಗೆ, ಬ್ರಾಂಡೆಡ್ ಔಷಧಿಯ ಅರ್ಧಕ್ಕಿಂತಲೂ ಕಡಿಮೆ ಬೆಲೆಗೆ ಸಿಗುವ ಭರವಸೆ ನೀಡಿ, ಸಮ್ಮೂವನ್ನು ಗೋವಿಂದ ಕ್ಲಿನಿಕ್ ನಿಂದ ಹೊರಗೆಳೆದುಕೊಂಡು ಬಂದ.

ಜನೌಷಧಿಯ ಮಳಿಗೆಯನ್ನು ಹುಡುಕಿಕೊಂಡ ಹೊರಟ ಸಮ್ಮೂ–ಪಮ್ಮೂ ನಡುವೆ, ಜಗಳ್ಬಂದಿ ಪ್ರಾರಂಭವಾಯಿತು.

ಸಮ್ಮೂ: ಅಲ್ಲಲೇ ಪಮ್ಮೂ, ನ್ಯಾನೋ ಗ್ರಾಂ ಅಂದ್ರ ಭಾಳ ಕಮ್ಮಿ ಹೌದಿಲ್ಲ?

ಪಮ್ಮೂ: ಹೌದಪಾ, ಒಂದ ಗ್ರಾಮ್ ತಗೊಂಡು, ಅದನ್ ನೂರ್ ಕೋಟಿ ಭಾಗಾ ಮಾಡಿ, ಅದ್ರಾಗಿಂದ ಒಂದ್ ಭಾಗಾ ತಗೋಂಡ್ರ, ಅದಕ್ ಒಂದ್ ನ್ಯಾನೋ ಗ್ರಾಂ ಅಂತಾರ.

ಸಮ್ಮೂ: ಹಂಗಂದ್ರ ಈ ಡಿ–ಜೀವಸತ್ವ ನಮ್ ದೇಹದಾಗ ಭಾಳೇನ ಇರ್ಹಾಂಗಿಲ್ಲಾ ಅಂತಾತು.

ಪಮ್ಮೂ: ಜೀವಸತ್ವ ಅಂತ ಅನ್ನೋದೇ ಅಂಥಾ ಸಾವಯವ ಸಂಯುಕ್ತ ವಸ್ತುಗಳಿಗೆ. ಅವೇನ್ ದೇಹದಾಗ ಭಾಳ್ ಪ್ರಮಾಣದಲ್ಲಿ ಇರ

ಡಿ. ಜೀವಸತ್ವದ ಗುಳಿಗೆಗಳು

ಹಂಗಿಲ್ಲ. ಇಟ್ಟೇ ಇರ್ತಾವ ಖರೆ, ಆದ್ರ ದೇಹದ ಸಾಮನ್ಯ ಕ್ರಿಯೆಗಳೆಲ್ಲ ಆರಾಮಾಗಿ ಆಗ್ಬೇಕಂದ್ರ, ಅವು ಬೇಕೇ ಬೇಕ. ದೇಹದಲ್ಲಿ ಅವುಗಳ ಪ್ರಮಾಣ ಕಮ್ಮಿ ಆತಂದ್ರ, ಭಾಳ ಗಡಿಬಿಡಿ ಆಗ್ತದ. ನಿಂಗ್ ಈಗ ಆಗ್ಯೆತಲಾ ಹಂಗೇ..

ಸಮ್ಮೂ: ಅಲಾ, ಇರೋದೇ ನ್ಯಾನೋ ಗ್ರಾಂದಾಗೈತಿ. ಒಂದ್ದಷ್ ಹೆಚ್ಚು ಕಮ್ಮಿ ಆತಂದ್ರ ಏನಾಗೋದೈತಿ ಅನ್ಕೋಳಾ ಹತ್ತಿದ್ದೆ.

ಪಮ್ಮೂ: ಹುಂ... ಒಂದ್ ಸಲ್ಪ ಹೆಚ್ಚು ಕಮ್ಮಿ ಆತಂದ್ರ ಏನಾಗ್ತದ ಅನ್ನೋದನ್ ನೀನೇ ನೋಡಿಯಲಾ ಈಗ.

ಸಮ್ಮೂ: ಹೌದಪಾ. ಭಾರೀ ಡೇಂಜರ್ ಇದಾವ ಬಿಡಪಾ ಈ ಜೀವಸತ್ವಗಳು. ನಾ ಎಲ್ಲೋ ಡಾಕ್ಟರಗಳಿಗ್ ಬೇರೇ ಯಾವ್ದೇ ಗುಳ್ಗಿ ಬರಿಯಾಕ್ ಗೊತ್ತಾಗಿಲ್ಲಾಂದ್ರ ಬರೆಯೋ ಗುಳ್ಗಿಗ್ ಜೀವಸತ್ವ ಅಂತಾರ ಅನ್ಕೊಂಡಿದ್ದೆ.

ಪಮ್ಮೂ: ಅದೂ ಒಂಥರಾ ಖರೇನೇ ಅನ್ನು. ಆದ್ರೆ ನೀ ಅಂದ್ಕೊಂಡಷ್ಟ ಸರಳ ಇಲ್ಲಾ ಈ ಜೀವಸತ್ವಗಳು. ಅವು ಭಾಳ ಕಮ್ಮೀ ಪ್ರಮಾಣದಾಗ ಬೇಕಾದ್ರೂ, ದೇಹದ ಸಾಮಾನ್ಯ ಚಯಾ–ಪಚಯ ಕ್ರಿಯೆಗೆ ಅವು ಬೇಕೇ ಬೇಕು. ಇಂಥದ್ ಒಂದಲ್ಲಾ ಬರೋಬರಿ 13 ಜೀವಸತ್ವಗಳಿದಾವ.

ಸಮ್ಮೂ: ಯಾರಿಗ್ ಹೇಳ್ತಿ. ಎ, ಬಿ, ಸಿ, ಡಿ, ಈ ಮತ್ ಕೆ. ಬರೇ ಆರು ಜೀವಸತ್ವ ಹೌದಿಲ್ಲ.

ಪಮ್ಮೂ: ಜೀವಸತ್ವ–ಬಿ ಒಂದೇ ಅಲ್ಲಪಾ. ಅದ್ರಾಗ ಬಿ–1, ಬಿ–2 ಹಿಂಗ ಮತ್ ಎಂಟ್ ಥರಾ ಇದಾವ. ಇವು ಎಂಟು, ಮತ್ ನೀ ಹೇಳಿದ್ ಐದು. ಒಟ್ಟೂ ಹದಿಮೂರು.

ಸಮ್ಮೂ: ಅದ್ರಾಗ ಬಿ ಮತ್ ಸಿ ಜೀವಸತ್ವಗಳು ನೀರ್ನಾಗ ಕರ್ಗತಾವ ಹೌದಿಲ್ಲ?

ಪಮ್ಮೂ: ಅಲಾ ಬೆರಕಿ. ಎಲ್ಲಾ ತಿಳ್ಕೊಂಡಿಯಲ್ಲೋ!

ಸಮ್ಮೂ: ಹೈಸ್ಕೂಲ್ದಾಗ ಮಾಸ್ತರ ಹೇಳಿದ್ ನೆನಪಿತ್ತಪಾ. ಅವ್ರು, ಬಿ ಮತ್ ಸಿ ಜೀವಸತ್ವಾ ಮಾತ್ರ ನೀರ್ನಾಗ ಕರಗ್ತದ. ಬಿಸಿ–ನೀರು ಅಂತಾ ಅದನ್ ನೆನಪಿಟ್ಕೋಬಹುದು ಅಂತಾ ನೆನೆಗುಬ್ಬಿ ಹೇಳ್ಕೊಟ್ಟಿದ್ರು. ಹಿಂಗಾಗ ಅದೊಂದ್ ಥಟ್ಟೋತ್ನಾಗ ನೆನಪದ.

ಪಮ್ಮೂ: ಹೌದು. ಬಿ ಮತ್ ಸಿ ಜೀವಸತ್ವಗಳು ನೀರ್ನಾಗ ಆರಾಮಾಗ ಕರಗ್ತಾವ. ಉಳ್ದಿದ್ದು, ಅಂದ್ರ ಎ, ಡಿ, ಈ ಮತ್ ಕೆ ಜೀವಸತ್ವಗಳಿಗೆ ಸಲ್ಪ ಕೊಬ್ಬು ಜಾಸ್ತಿ. ನಿನ್ ಥರಾ. ಅದಕ್ಕೇ ಅವ ನೀರ್ನಾಗ ಕರ್ಗ್ಹಾಂಗಿಲ್ಲ. ಬರೇ ಕೊಬ್ಬಿನಾಗ ಕರ್ಗತಾವ.

ಸಮ್ಮೂ: ಓ...ಹೋ... ಅಡ್ಗಿ ಎಣ್ಣೆ ಪ್ಯಾಕಿಟ್ ಮ್ಯಾಲ್ ಅದ್ಕ ಬರೇ ಇವೇ ನಾಕ್ ಜೀವಸತ್ವದ ಹೆಸ್ರ ಕಾಣ್ತಾವ.

ಪಮ್ಮೂ: ಹೌದ ಮತ್ತ. ಎಣ್ಣೆ ಪ್ಯಾಕೆಟ್ ಮ್ಯಾಲ ಎ ಮತ್ ಬಿ ಜೀವಸತ್ವನೂ ಇರ್ತದ ಅಂತ ಬರದ್ರ, ಎಣ್ಣೆ ಕಂಪನಿಯವ ಬೊಗಳೆ ಬಿಡ್ತಿತಾದನಂತಾನೇ ಅರ್ಥ.

ಸಮ್ಮೂ: ಉಳ್ದಿದ ಜೀವಸತ್ವದ ಕತಿ ಇನ್ನೊಮ್ ಯಾವಾಗಾರೂ ಹೇಳೋಂತೀ. ಈಗ ಸದ್ಯ ಈ ಡಿ–ಜೀವಸತ್ವದ ಕತಿ ಏನು ಅದನ್ ಹೇಳ್ ಮೊದ್ಲು.

ಪಮ್ಮೂ: ನಾ ಹೇಳೋದೇನೈತಿ? ಡಾಕ್ಟ್ರೇ ಹೇಳ್ಯಾರಲ್ಲ. ಎರಡ್ ತಿಂಗ್ಳಾ ಕ್ಯಾಪ್ಸೂಲ್ ತಗೋಬೇಕಂತ. ತಗೋಳೋದಪಾ.

ಸಮ್ಮೂ: ಅದು ತೊಗೋಳೋದಾತಪಾ. ಆದ್ರೆ ನಿನ್ ಕೂಡ ಮಾತಾಡ್ತಿರ್ಬೇಕಾದ್ರ ನಮ್ಮ ಹೈಸ್ಕೂಲ್ ಮಾಸ್ತರ ಹೇಳಿದ್ ಇನ್ನೊಂದ್ ನೆನಪಾತು. ಸೂರ್ಯನ ಬೆಳಕ್ದಾಗ ಜೀವಸತ್ವ–ಡಿ ಇರ್ತದ. ಹಿಂಗಾಗಿ, ಸೂರ್ಯನ ಬೆಳಕಿಗ್ ನಿಂತ್ರ ನಮಗ್ ಜೀವಸತ್ವ–ಡಿ ಸಿಗ್ತದ ಅಂತಿದ್ರವ್ರು. ಅದಕ್ಕೇ ವಿಚಾರ ಮಾಡ್ಲಿಕ್ ಹತ್ತಿದ್ದೇ. ಸುಮ್ನೇ ಈ ಕ್ಯಾಪ್ಸೂಲ್ ಗೆ ರೊಕ್ಕಾ ಬಡಿಯೋದಕ್ಕಿಂತ, ದಿನಾ ಒಂದ್ ತಾಸ್ ಬಿಸ್ಲಿಗ್ ನಿಂತ್ರ ಹೆಂಗ ಅಂತ...

ಪಮ್ಮೂ: ಸೂರ್ಯನ ಬೆಳಕ್ದಾಗೇನ ಸೀದಾ ಡಿ–ಜೀವಸತ್ವ ಇರ್ಹಾಂಗಿಲ್ಲ. ಅದು ಕತಿ ಸ್ವಲ್ಪ ದೊಡ್ಡದೈತಿ. ಆಮೇಲ್ ಹೇಳ್ತೇನಿ. ಈಗ ಸದ್ಯಕ್ ಇಲ್ಲಿ ಜನೌಷಧಿದಾಗ ಆ ಕ್ಯಾಪ್ಸುಲ್ ತಗೋಳೋಣ ನಡಿ.

ತಮ್ಮ ಜಗಳ್ಬಂದಿಗೆ ತಾತ್ಕಾಲಿಕ ವಿರಾಮಕೊಟ್ಟ

ಕೋಲೆಕ್ಯಾಲ್ಸಿಫೆರಾಲ್ ಅಣುರಚನೆ.

ಜೋಡಿ, ಜೀವಸತ್ವ–ಡಿಯ ಕ್ಯಾಪ್ಸುಲ್ ಖರೀದಿಸಲು, ಅಲ್ಲೇ ಇದ್ದ ಅಂಗಡಿಗೆ ತೆರಳಿದವು.

ವಿ–ಜ್ಞಾನ್ ಹೆಸರಿನಲ್ಲಿ ಹಾಸ್ಯ ವಿಜ್ಞಾನ ಲೇಖನಗಳನ್ನು ಬರೆಯುವ ಡಾ. ವಿನಾಯಕ ಕಾಮತರು ಕಾರವಾರದ ಸರಕಾರಿ ಕಾಲೇಜಿನಲ್ಲಿ ರಸಾಯನ ವಿಜ್ಞಾನದ ಅಧ್ಯಾಪಕರು.

ಮಲಬಾರ್ ಲಾರ್ಜ್ ಸ್ಪಾಟೆಡ್ ಸಿವೆಟ್



ಮಲಬಾರ್ ದೊಡ್ಡ ಚುಕ್ಕೆಯ ಕಾಡುಬೆಕ್ಕು. ದೊಡ್ಡ ಕಾಡುಬೆಕ್ಕುಗಳೆನ್ನುವ ಜಾತಿಯ ಕಾಡುಬೆಕ್ಕು. ಕಳೆದ ಶತಮಾನದಲ್ಲಿ ಹೊನ್ನಾವರದಿಂದ ಕೊಚ್ಚಿಯವರೆಗೆ ಹರಡಿದ್ದ ಮಲಬಾರು ಕಾಡಿನಲ್ಲಿ ಸಾಮಾನ್ಯವಾಗಿ ಕಾಣಿಸುತ್ತಿದ್ದದ್ದು ಈಗ ಬಹಳ ಅಪರೂಪವಾಗಿದೆ. 1960ರಲ್ಲಿಯೇ ಇದು ನಶಿಸಿಹೋಗಿದೆ ಎಂದು ಭಾವಿಸಲಾಗಿತ್ತು. ಆದರೆ 1987ರಲ್ಲಿ ಸತ್ತ ಬೆಕ್ಕೊಂದರ ತೊಗಲು ಕೇರಳದ ನಿಲಂಬೂರಿನ ರಕ್ಷಿತಾರಣ್ಯದಲ್ಲಿ ಸಿಕ್ಕಿತ್ತು. ಕರ್ನಾಟಕದ ದಾಂಡೇಲಿ ಅರಣ್ಯ ಪ್ರದೇಶದಲ್ಲಿಯೂ ಇದು ಕಂಡಿದ್ದಾಗಿ ಹಲವು ಹೇಳುತ್ತಾರಾದರೂ, ಕಾಡಿನಲ್ಲಿ ಇದರ ಪತ್ತೆಗಾಗಿ ಮೂರು ವರ್ಷಗಳ ಕಾಲ ಇಟ್ಟಿದ್ದ ಯಾವುದೇ ಕ್ಯಾಮೆರಾದಲ್ಲಿಯೂ ಸುಳಿವು ದೊರೆಯಲಿಲ್ಲ. ಹೀಗಾಗಿ ಇದು ಇದೆಯೋ, ಇಲ್ಲವೋ ಇನ್ನೂ ಖಾತ್ರಿ ಇಲ್ಲ. ಇದರ ಸಂಗ್ರಹಿಸಿದ ಮಾದರಿಗಳಷ್ಟೆ ಈಗ ಲಭ್ಯ.

3 ಪರಿಸರಕ್ಕೊಂದು ಉಪವಾಸ!

ಆನ್ಲೈನ್ ಆಹಾರವನ್ನು ಒದಗಿಸುವ ಸೇವೆಗಳು ಬಳಸುವ ಪ್ಯಾಕೇಜಿಂಗ್ ವಸ್ತುಗಳಲ್ಲಿ ಪ್ಲಾಸ್ಟಿಕ್ಕು ವಸ್ತುಗಳೇ ಅಧಿಕ. ಇವು ಒಟ್ಟಾರೆ ಬಳಕೆಯಾಗುವ ಪ್ಯಾಕೇಜಿಂಗು ವಸ್ತುಗಳಲ್ಲಿ ಶೇಕಡ ಅರವತ್ತರಷ್ಟು ಇರುತ್ತವೆ. ನಂತರದ ಸ್ಥಾನ ಪೇಪರು ಮತ್ತು ರಟ್ಟಿನದ್ದು. ಇನ್ನು ಅಲ್ಯುಮಿನಿಯಂ ಮತ್ತು ಪರಿಸರಸ್ನೇಹಿ ಎನ್ನಿಸುವ ಪ್ಯಾಕೇಜಿಂಗುಗಳ ಪ್ರಮಾಣ ಕೇವಲ ಶೇಕಡ ಹತ್ತರಷ್ಟು ಅಷ್ಟೆ. ಇದಲ್ಲದೆ ಒಮ್ಮೆ ಬಳಸಿ ಬಿಸಾಡುವ ಸ್ಪೂನುಗಳ ಹಾವಳಿಯೂ ಇದೆ. ಇದು ಪ್ಯಾಕೇಜಿಂಗ್ ಭಾಗವಲ್ಲ. ಆಹಾರ ಪ್ಯಾಕೇಜಿಂಗ್ ತ್ಯಾಜ್ಯಗಳಲ್ಲಿ ಮುಕ್ಕಾಲು ಪಾಲು ಕೇವಲ ಪಿಜ್ಜಾ ಪ್ಯಾಕ್ ಮಾಡಲು ಬಳಸುವ ರಟ್ಟು ಹಾಗೂ ಬಿರಿಯಾನಿ, ಪಲ್ಯ ಮೊದಲಾದವು ಸೋರದಂತೆ ಬಳಸುವ ಪ್ಲಾಸ್ಟಿಕ್ಕು ಸಾಮಗ್ರಿ.

ಇತ್ತೀಚೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶದಂತೆ ಒಮ್ಮೆ ಬಳಸಿ ಬಿಸಾಡುವ ಪ್ಲಾಸ್ಟಿಕ್ಕುಗಳ ಬಳಕೆ ಕಡಿಮೆ ಮಾಡಬೇಕಾಗಿರುವುದರಿಂದ ಆನ್ಲೈನ್ ಆಹಾರ ಸೇವೆಗಳ ಕಂಪೆನಿಗಳು ಹಲವು ಕ್ರಮಗಳನ್ನು ಕೈಗೊಳ್ಳುತ್ತಿವೆ. ಉದಾಹರಣೆಗೆ ಜೊಮ್ಯಾಟೊ ಪ್ಲಾಸ್ಟಿಕ್ಕು ಡಬ್ಬಿಗಳ ಬದಲಿಗೆ ಕಬ್ಬಿನನಾರಿನಿಂದ ಮಾಡಿದ, ಬಯೋಡಿಗ್ರೇಡಬಲ್ ಮುಚ್ಚಳಗಳನ್ನು ಬಳಸುತ್ತಿರುವುದಾಗಿ ಹೇಳಿದೆ. ಇದರಿಂದ ಸುಮಾರು 12000 ಟನ್ನುಗಳಷ್ಟು ಪ್ಲಾಸ್ಟಿಕ್ ಬಳಕೆ ಕಡಿಮೆ ಆಗಿದೆಯಂತೆ. ಇನ್ನು ಸ್ವಿಗ್ಗಿ ಕಂಪೆನಿಯು ಪ್ಯಾಕೇಜಿಂಗುಗಳ ಮೇಲೆ ವಿವರಗಳನ್ನು ಮುದ್ರಿಸಲು ತಿನ್ನಲು ಯೋಗ್ಯವಾದ ಶಾಯಿಯನ್ನು ಬಳಸುತ್ತಿದೆ. ಅಲ್ಲದೆ ಕಂಪೋಸ್ಟಿಗೆ ಯೋಗ್ಯವಾದಂತಹ ಪ್ಯಾಕೇಜಿಂಗ್ ವಸ್ತುಗಳನ್ನು ಬೆಂಗಳೂರು ಮತ್ತು ಮುಂಬಯಿಯಲ್ಲಿ ಬಳಸುತ್ತಿದೆ. ಡಬ್ಬಾಟ್ರಾಪ್ ಎನ್ನುವ ಯೋಜನೆಯಡಿ, ಬೃಹತ್ ಪ್ರಮಾಣದಲ್ಲಿ ಸರಬರಾಜು ಬಯಸುವ ಗ್ರಾಹಕರಿಗೆ ಸ್ಟೀಲಿನ ಡಬ್ಬಿಗಳಲ್ಲಿ ಆಹಾರವನ್ನು ಒದಗಿಸುತ್ತಿದೆ.

ಇವೆಲ್ಲ ಕ್ರಮಗಳೂ ಸ್ವಾಗತಾರ್ಹವೇ. ಆದರೂ ಪ್ರತಿವರ್ಷವೂ ಶೇಕಡ ಮೂವತ್ತರಷ್ಟು ಪ್ರಮಾಣದಲ್ಲಿ ಹೆಚ್ಚುತ್ತಿರುವ ಗ್ರಾಹಕರಿಂದಾಗಿ ಪರಿಸರದ ಮೇಲೆ ಈ ಒತ್ತಡ ಹೆಚ್ಚುತ್ತಲೇ ಹೋಗಲಿದೆ. ಹಾಗಿದ್ದರೆ ಗ್ರಾಹಕರಾಗಿ ನಾವೇನು ಮಾಡಬಹುದು? ಒಮ್ಮೆ ಬಳಸಿ ಬಿಸಾಡಬಹುದಾದ ಪ್ಲಾಸ್ಟಿಕ್ಕನ್ನು ಬಳಸುವ ಕಂಪೆನಿಗಳಿಂದ ಆಹಾರ ಪಡೆಯುವುದನ್ನು ಕಡಿಮೆ ಮಾಡಬಹುದು. ಅವಶ್ಯಕವಲ್ಲದೇ ಇಂತಹ ಸೇವೆಗಳಿಂದ ಆಹಾರ ತರಿಸಿಕೊಳ್ಳುವುದನ್ನು ತಡೆಯಬಹುದು. ಅಥವಾ ಅತಿ ಹೆಚ್ಚು ಪ್ಯಾಕೇಜಿಂಗ್ ಬಳಸುವ ಪಿಜ್ಜಾ ಅಥವಾ ಬಿರಿಯಾನಿ, ಕರಿ ಮೊದಲಾದವುಗಳನ್ನು ಆನ್ಲೈನ್ ತರಿಸಿಕೊಳ್ಳುವುದನ್ನು ಕಡಿಮೆ ಮಾಡಬಹುದು. ಪರಿಸರದ ಬಗ್ಗೆ ಹೋರಾಡದಿದ್ದರೂ, ಒಂದು ಹೊತ್ತಿನ ಉಪವಾಸವನ್ನು ಮಾಡಿಯಾದರೂ ಕಾಳಜಿ ತೋರಿಸಬಹುದು.

ಚುಟುಕು
ಗುಟುಕು

ಬೀಜದಿಂದ ಮೊಳೆತ ಐಡಿಯಾ

ನಿತ್ಯವೂ ನಾವು ಬಳಸುವ ವೆಲ್ಕ್ರೋ ಎನ್ನುವ ಅಂಟುಪಟ್ಟಿಯ ಐಡಿಯಾ ಬಂದದ್ದು ಆಕಸ್ಮಿಕವಾಗಿ.

ಸ್ವಿಸ್ ಇಂಜಿನಿಯರ್ ಜಾರ್ಜ್ ಮೇಸ್ಟ್ರಲ್ ತಮ್ಮ ನಾಯಿಯ ತುಪ್ಪಳಕ್ಕೆ ಈ ಬೀಜ ಅಂಟಿಕೊಳ್ಳುವುದನ್ನು ಕಂಡು ಹೈರಾಣಾಗಿದ್ದರು. ಅದನ್ನು ಬಿಡಿಸುವುದೇ ಕಷ್ಟವಾಗಿತ್ತು. ಅದರ ರಚನೆಯಿಂದ ಸ್ಫೂರ್ತಿ ಪಡೆದು ವೆಲ್ಕ್ರೋ ರಚಿಸಿದರು.

ಆಕಸ್ಮಿಕ ಶೋಧ

ಮಲೇಶಿಯಾದಲ್ಲಿರುವ ಆಕಸ್ಮಿಕವಾಗಿ ಪತ್ತೆಯಾದ ಹೊಸ ಕೀಟ ಸೆಮಾಕ್ರೈಸಾ ಜೇಡ್

ಫ್ಲಿಕರಿನಲ್ಲಿ ಯಾರೋ ಹಾಕಿದ ಚಿತ್ರವನ್ನು ನೋಡಿದ ಶಾನ್ ವಿಂಟರ್ಟನ್ ಅದು ಯಾವ ಕೀಟವೆಂದು ತಿಳಿಯದಿದ್ದಾಗ ಅಧ್ಯಯನ ಕೈಗೊಂಡ. ಹೊಸ ಕೀಟ ಎಂದು ಪತ್ತೆ ಮಾಡಿದ.

ಅಲೆಗಳ ಒಲೆ

ಅಮೆರಿಕನ್ ಇಂಜಿನಿಯರ್ ಪರ್ಸಿ ಸ್ಪೆನ್ಸರ್ ಜೇಬಿನಲ್ಲಿ ಇಟ್ಟುಕೊಂಡಿದ್ದ ಚಾಕಲೇಟು ರೇಡಾರು ಬಳಿ ಹೋದಾಗ ಕರಗುತ್ತಿತ್ತು. ಚಕಿತಗೊಂಡ ಆತ ಇನ್ನಷ್ಟು ಪ್ರಯೋಗಗಳನ್ನು ಮಾಡಿ, ವೈಕ್ರೊವೇವ್ ಒಲೆಯನ್ನು ರೂಪಿಸಿದ.

ರೇಡಾರು ಯಂತ್ರ ತಯಾರಿಸುವಾಗ ಆಕಸ್ಮಿಕವಾಗಿ ಕಂಡ ಪರಿಣಾಮವೊಂದರ ಫಲವೇ ಮೈಕ್ರೊವೇವ್ ಒಲೆ

ಗಟ್ಟಿ ರಬ್ಬರು

ಬಿಸಿಯಾದಾಗ ಮೃದುವಾಗುವ ಅಂಟುವ ಛಳಿಯಲ್ಲಿ ಒಣಗಿ ಬಿರುಸಾಗಿ, ಬಿರುಕು ಬಿಡುವ ರಬ್ಬರು ಮತ್ತು ಗಂಧಕದ ಮಿಶ್ರಣ ಆಕಸ್ಮಿಕವಾಗಿ ಬೆಂಕಿಗೆ ಬಿದ್ದಾಗ ರಬ್ಬರನ್ನು ಗಟ್ಟಿಯಾಗಿಸುವ ವಿಧಾನ ಪತ್ತೆಯಾಯಿತು

ರಬ್ಬರನ್ನು ಗಟ್ಟಿಯಾಗಿಸುವ ವಲ್ಕನೈಸೇಶನ್ ಎನ್ನುವ ಕ್ರಿಯೆ ಹೀಗೆ ಆಕಸ್ಮಿಕವಾಗಿ ಪತ್ತೆಯಾಯಿತು. ಟೈರುಗಳಿಗೆ ಮೂಲವಾಯಿತು.

ಹಗುರ ಗಾಳಿ

ವಿವಿಧ ಅನಿಲಗಳ ಗುಣವನ್ನು ಪರೀಕ್ಷಿಸಲು ಅವುಗಳನ್ನು ಮೇಣದ ಬತ್ತಿಯ ಜೊತೆಗೆ ಪ್ರೀಸ್ಟ್ಲಿ ಇಡುತ್ತಿದ್ದ. ಒಂದು ಅನಿಲದ ಹೊರತಾಗಿ ಎಲ್ಲವೂ ಜ್ವಾಲೆಯನ್ನು ನಂದಿಸುತ್ತಿದ್ದವು. ಹೀಗೆ ಆಕ್ಸಿಜನ್ ಪತ್ತೆಯಾಯಿತು.

ಉರಿಯುವುದಕ್ಕೆ ಆಕ್ಸಿಜನ್ ಬೇಕು ಎಂದು ಜೋಸೆಫ್ ಪ್ರೀಸ್ಟ್ಲಿ ಎಂಬ ಬ್ರಿಟಿಷ್ ವಿಜ್ಞಾನಿ ಪತ್ತೆ ಮಾಡಿದ.

ಚುಟುಕು ಸಂದೇಶದ ಚೀಟಿ

ಸ್ಪೆನ್ಸರ್ ಸಿಲ್ವರ್ ಎಂಬಾತ ಹೊಸ ಗೋಂದನ್ನು ರೂಪಿಸಿದ್ದ. ಆದರೆ ಅದು ಅಂಟಿಕೊಂಡರೂ, ಎಳೆದೊಡನೆ ಕಿತ್ತು ಬರುತ್ತಿತ್ತು. ಅದು ಉಪಯೋಗಿಯಲ್ಲ ಅಂತ ಹಾಗೆಯೇ ಇಟ್ಟು ಬಿಟ್ಟಿದ್ದ. ಆದರೆ ಹತ್ತು ವರ್ಷಗಳ ನಂತರ ಅದನ್ನೇ ಹೀಗೆ ಬಳಸಬಹುದು ಎಂದು ಜನಪ್ರಿಯಗೊಳಿಸಿದವ ಆರ್ಟ್ ಫ್ರೈ ಎನ್ನುವ ಇನ್ನೊಬ್ಬ.

ಪುಟ್ಟ ಸಂದೇಶಗಳನ್ನು ಬರೆದು ಎಲ್ಲೆಂದರಲ್ಲಿ ಅಂಟಿಸಿ, ಬಿಡಿಸಿ ಇನ್ನೆಲ್ಲೋ ಅಂಟಿಸುವ ಸ್ಟಿಕ್ಕಿ ನೋಟ್ 3-M ಕಂಪೆನಿಯ ಸಿಬ್ಬಂದಿಗಳ ಆಕಸ್ಮಿಕ ಶೋಧ

ವ್ಯಕ್ತಿಯ ಗುರುತು

ಕೂಲಿ ಮಾಡಿದವರಲ್ಲದೆ ಇತರರಿಗೆ ವೇತನ ಪಾವತಿಸುತ್ತಿದ್ದ ಅನಕ್ಷರಸ್ತ ಮೇಸ್ತ್ರಿಯನ್ನು ಬೆದರಿಸಲು ಬ್ರಿಟಿಷ್ ಅಧಿಕಾರಿಯೊಬ್ಬ ಆತನ ಕೈಯನ್ನು ಶಾಯಿಯಲ್ಲಿ ಅದ್ದಿ ಕಾಗದದ ಮೇಲೆ ಅಚ್ಚೊತ್ತಿದ್ದ. ಇದುವೇ ಮುಂದೆ ಹೆಬ್ಬೆಟ್ಟು ಗುರುತು ಹಾಕುವ ವಿಧಾನವಾಗಿ ಮಾರ್ಪಟ್ಟಿತು

1868ರಲ್ಲಿ ಬಂಗಾಲದ ಹೂಗ್ಲಿ ಜಿಲ್ಲೆಯ ಜಿಲ್ಲಾಧಿಕಾರಿ ವಿಲಿಯಂ ಹರ್ಶೆಲ್ ಮೇಸ್ತ್ರಿಯನ್ನು ಬೆದರಿಸಲು ಒತ್ತಿದ್ದ ಅಚ್ಚು ಮುಂದೆ ವ್ಯಕ್ತಿಯ ವಿಶಿಷ್ಟ ಗುರುತು ಎನ್ನಿಸಿತು.

ರುಚಿ ತಂದ ರೋಗ

ಅರೆಬೆಂದ ಅಥವಾ ಸರಿಯಾಗಿ ದಾಸ್ತಾನಿಡದ ತಿನಿಸುಗಳಲ್ಲಿ ಕ್ಲಾಸ್ಟ್ರಿಡಿಯಂ ಬ್ಯಾಕ್ಟೀರಿಯಾ ಬೆಳೆಯುತ್ತದೆ. ಮೊದಲಿಗೆ ಇದನ್ನು ರುಚಿಕರ ಆಲೂಗೆಡ್ಡೆ ಸಾಸೇಜಿನಲ್ಲಿ ಗುರುತಿಸಿದ್ದರು.

ಜರ್ಮನ್ ಕವಿ, ವೈದ್ಯ ಜಸ್ಟಿನ್ ಕರ್ನರ್ ತನ್ನೂರಿನಲ್ಲಿ ಅತಿಯಾದ ವಿಷಾಹಾರದ ಪ್ರಭಾವ ಕಂಡು ಅಚ್ಚರಿಯಾದ. ರುಚಿಗೆ ಪ್ರಸಿದ್ಧವಾದ ಆಲೂಗೆಡ್ಡೆ ಸಾಸೇಜು ಕಾರಣವಿರಬಹುದೇ ಎಂದು ತರ್ಕಿಸಿದ.

ಅಪರಾಧ ಪತ್ತೆ

ಅಪರಾಧ ತನಿಖೆಯಲ್ಲಿ ಬೆರಳಚ್ಚು ಮೊದಲು ಬಳಕೆಯಾಗಿದ್ದು ಬ್ರೆಜಿಲ್ಲಿನಲ್ಲಿ. ತಾಯಿಯೊಬ್ಬಳು ತನ್ನ ಮಕ್ಕಳನ್ನೇ ಕೊಲೆ ಮಾಡಿ, ಬೇರೆಯವರನ್ನು ದೂರಿದ್ದಳು. ಅಪರಾಧ ನಡೆದಲ್ಲಿ ಇದ್ದ ಆಕೆಯ ಬೆರಳಚ್ಚಿನ ಆಧಾರದ ಮೇಲೆ ಶಿಕ್ಷೆ ನೀಡಲಾಯಿತು.

ಕೊಲೆ ಮಾಡಿದ ಜಾಗದಲ್ಲಿ ದೊರೆತ ಫ್ರಾನ್ಸೆಸ್ಕಾ ಜೋನಾಸ್ ಎನ್ನುವ ಮಹಿಳೆಯ ಪ್ರತಿ ಬೆರಳ ಅಚ್ಚೂ ಬೇರೆ ಯಾರದ್ದಕ್ಕೂ ಹೋಲುವುದಿಲ್ಲ ಎಂದು ತಳಿವಿಜ್ಞಾನಿ ಫ್ರಾನ್ಸಿಸ್ ಗಾಲ್ಟನ್ ತೋರಿಸಿದ.

ಆಕಸ್ಮಿಕ ಬಣ್ಣ

ಹೋಳಿ ಹಬ್ಬದ ರಂಗು, ರಂಗೋಲಿಗೆ ಹಚ್ಚುವ ಬಣ್ಣಗಳು, ದಿರಿಸು, ಬಟ್ಟೆಗೆ ಹಾಕುವ ನೂರಾರು ಬಗೆಯ ರಾಸಾಯನಿಕ ಬಣ್ಣಗಳ ಶೋಧ, ಔಷಧವೊಂದನ್ನು ತಯಾರಿಸುವ ಯತ್ನದಲ್ಲಿ ಆದ ಆಕಸ್ಮಿಕ

ವಿಲಿಯಂ ಹೆನ್ರಿ ಪರ್ಕಿನ್ ಎಂಬಾತ ಮಲೇರಿಯಾಗೆ ಬಳಸುವ ಕ್ವಿನೈನ್ ತಯಾರಿಸಲು ಪ್ರಯತ್ನಿಸುತ್ತಿದ್ದಾಗ ಆಕಸ್ಮಿಕವಾಗಿ ಆಮ್ಲ ಬಿದ್ದು ಎಷ್ಟೇ ತೊಳೆದರೂ ಬಣ್ಣ ಹೋಗದ ಪುಡಿ ಹುಟ್ಟಿತು.

ನೆರಿಗೆ ಸಡಿಲಿಸುವ ನಂಜು

ಮುಪ್ಪು ಅಥವಾ ಇತರೆ ಕಾರಣಗಳಿಂದ ಸುಕ್ಕುಗಟ್ಟುವ ಚರ್ಮವನ್ನು ಸೆಟೆಸಿ ಸಮವಾಗಿಸಲು ಬಾಟಾಕ್ಸ್ ಬಳಸುತ್ತಾರೆ.

ಕೆನಡಾದ ವೈದ್ಯ ದಂಪತಿ ಅಲಿಸ್ಟೇರ್ ಮತ್ತು ಜೀನ್ ಕ್ಯಾರುಥರ್ ಕಣ್ಣು ಮಿಟುಕಿಸುವ ಖಾಯಿಲೆ ಇದ್ದವರಿಗೆ ಚಿಕಿತ್ಸೆಗೆಂದು ಬಾಟಾಕ್ಸ್ ಬಳಸಿದರು. ಅದೇ ಸಮಯ ರೋಗಿಗಳ ಹಣೆಯ ನೆರಿಗೆ ಮಾಯವಾಗುವುದನ್ನು ಕಂಡರು. ಸುಕ್ಕು ತೆಗೆಯುವ ಬಾಟಾಕ್ಸ್ ಚಿಕಿತ್ಸೆ ಹೀಗೆ ಆರಂಭವಾಯಿತು.

ಕಲಿ ಕುತೂಹಲಿ

ಕೇಶಾಲಂಕಾರದಲ್ಲಿ ಯಾರಿಗೆ ಆಸಕ್ತಿ ಇಲ್ಲ. ಜನಪ್ರಿಯ ನಟರುಗಳ ಹೇರ್ ಸ್ಟೈಲನ್ನು ಬಿಂಬಿಸುವ ಚಿತ್ರಗಳು ಸಲೂನಿನಲ್ಲಿ ದೊಡ್ಡ, ದೊಡ್ಡದಾಗಿ ಕಾಣಿಸುತ್ತವೆ. ವಿಜ್ಞಾನಿಗಳೂ ಮನುಷ್ಯರೆ. ಅವರಲ್ಲಿಯೂ ಕೆಲವರ ಹೇರ್ ಸ್ಟೈಲು ವಿಶಿಷ್ಟವಾಗಿರುತ್ತದೆ. ಕೇಶ ಕ್ವಿಜ್ ಅಂತಹ ವಿಜ್ಞಾನಿಗಳನ್ನು ಅವರ ಕೇಶಾಲಂಕಾರದ ಮೂಲಕವೇ ಪರಿಚಯಿಸುವ ಸರಣಿ. ಇಲ್ಲಿ ಕೇವಲ ಕೇಶಾಲಂಕಾರವಷ್ಟೆ ಇರುವ ಚಿತ್ರವಿದೆ. ಇದು ಪ್ರಪಂಚದ ಸುಪ್ರಸಿದ್ಧ ವಿಜ್ಞಾನಿಯೊಬ್ಬರ ಚಿತ್ರ. ಯಾರ ಚಿತ್ರ ಎಂದು ನೀವು ಊಹಿಸಬಲ್ಲಿರಾ? ಊಹಿಸಿ ಉತ್ತರಗಳನ್ನು kutuhalikannada@gmail.comಗೆ ಕಳಿಸಿ. ಈ ಚಿತ್ರವನ್ನು ಡೌನ್ ಲೋಡ್ ಮಾಡಿಕೊಂಡು ಚಿತ್ರವನ್ನು ಪೂರ್ತಿ ಮಾಡಿ ಕಳಿಸಿದರೆ, ಅದನ್ನೂ ನಾವು ಪ್ರಕಟಿಸುವೆವು. ಕೇಶ ಕ್ವಿಜ್ಜಿನ ಉತ್ತರ ಮುಂದಿನ ತಿಂಗಳ ಸಂಚಿಕೆಯಲ್ಲಿ, ನಿಮ್ಮ ಉತ್ತರಗಳೊಟ್ಟಿಗೆ ಪ್ರಕಟವಾಗುವುದು. ಉತ್ತರ ಕಳಿಸಲು ಕೊನೆಯ ದಿನಾಂಕ:30 ಜೂನ್ 2025.

ಸುಳಿವು... *ಯಾರೀತ? ಹೇಳಬಲ್ಲಿರಾ? ಒಂದು ಕ್ಲೂ. ನಮ್ಮ ಬದುಕನ್ನು ಹಾಗೂ ಜಗತ್ತಿನ ನಡವಳಿಕೆಯನ್ನೇ ಬದಲಿಸಿದ ಸಾಧನ ಸಾಧ್ಯ ಎಂದು ಕಲ್ಪಿಸಿದವ.*

ಕಲೆ: ಅಜಿತ್ ಕೌಂಡಿನ್ಯ
ಕ್ವಿಜ್: ಕೊಳ್ಳೇಗಾಲ ಶರ್ಮ

ಕೇಶ ಕ್ವಿಜ್– 18– ಉತ್ತರ

ವಿಜ್ಞಾನಿಯ ಹೆಸರು: ಜಾನ್ ಮೆಕಾರ್ಥಿ (John McCarthy)
ಕಾರ್ಯಕ್ಷೇತ್ರ : ಕಂಪ್ಯೂಟರ್ ವಿಜ್ಞಾನ, ಅರಿವಿನ ವಿಜ್ಞಾನ

ಸೆಪ್ಟಂಬರ್ 4, 1927 ರಂದು ಮ್ಯಾಸಚೂಸೆಟ್ಸ್ ನ ಬೋಸ್ಟನ್ ನಲ್ಲಿ ಜನಿಸಿದ ಮೆಕಾರ್ಥಿ ಗಣಿತಶಾಸ್ತ್ರದಲ್ಲಿ ಆರಂಭಿಕ ಒಲವು ತೋರಿಸಿದರು. 1944 ರಲ್ಲಿ ಕ್ಯಾಲಿಫೋರ್ನಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕ್ಯಾಲ್ಟೆಕ್) ಗೆ ಸೇರಿ, 1948 ರಲ್ಲಿ ಗಣಿತಶಾಸ್ತ್ರದಲ್ಲಿ ವಿಜ್ಞಾನ ಪದವಿ ಪಡೆದರು. 1951 ರಲ್ಲಿ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದಿಂದ ಗಣಿತಶಾಸ್ತ್ರದಲ್ಲಿ ಪಿಎಚ್‌ಡಿ ಪಡೆದರು. ಮೆಕಾರ್ಥಿ ತಮ್ಮ ವೃತ್ತಿಜೀವನದ ಬಹುಪಾಲು ಸಮಯವನ್ನು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಕಳೆದರು, ಅಲ್ಲಿ ಅವರು ಕೃತಕ ಬುದ್ಧಿಮತ್ತೆ, ಲಿಸ್ಪ್ ಪ್ರೋಗ್ರಾಮಿಂಗ್ ಭಾಷೆ ಮತ್ತು ಸಮಯ ಹಂಚಿಕೆ ವ್ಯವಸ್ಥೆಗಳ ಕುರಿತು ಸಂಶೋಧನೆ ಮಾಡಿದರು. "ಆರ್ಟಿಫಿಶಿಯಲ್ ಇಂಟೆಲಿಜೆನ್ಸ್" ಎಂಬ ಪದವನ್ನು ಸೃಷ್ಟಿಸಿದ ಮತ್ತು ಲಿಸ್ಪ್ ಪ್ರೋಗ್ರಾಮಿಂಗ್ ಭಾಷೆಯನ್ನು ಅಭಿವೃದ್ಧಿಪಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕಂಪ್ಯೂಟರ್ ವಿಜ್ಞಾನದಲ್ಲಿ "ಕಸ ಸಂಗ್ರಹ" ಎಂಬ ಪರಿಕಲ್ಪನೆಯನ್ನು ಕಂಡುಹಿಡಿದರು. ಮೆಕಾರ್ಥಿ ಕಂಪ್ಯೂಟರ್ ವಿಜ್ಞಾನಕ್ಕೆ ನೀಡಿದ ಕೊಡುಗೆಗಳಿಗಾಗಿ ಹಲವಾರು ಪ್ರಶಸ್ತಿಗಳು ಮತ್ತು ಗೌರವಗಳನ್ನು ಪಡೆದಿದ್ದಾರೆ. ಅವುಗಳಲ್ಲಿ ಪ್ರಮುಖವಾದವು, ಕೃತಕ ಬುದ್ಧಿಮತ್ತೆಗೆ ನೀಡಿದ ಕೊಡುಗೆಗಳಿಗಾಗಿ *ಟ್ಯೂರಿಂಗ್ ಪ್ರಶಸ್ತಿ* (1971) – ಕೃತಕ ಬುದ್ಧಿಮತ್ತೆ ಮತ್ತು ಲಿಸ್ಪ್‌ನ ಮೇಲಿನ ಕೆಲಸಕ್ಕಾಗಿ *ಕ್ಯೋಟೋ ಪ್ರಶಸ್ತಿ* (1988) – ಗಣಿತ, ಸಂಖ್ಯಾಶಾಸ್ತ್ರ ಮತ್ತು ಕಂಪ್ಯೂಟೇಶನಲ್ ವಿಜ್ಞಾನಗಳಿಗೆ ನೀಡಿದ ಕೊಡುಗೆಗಳಿಗಾಗಿ * ರಾಷ್ಟ್ರೀಯ ವಿಜ್ಞಾನ ಪದಕ* (1990).

ಮೆಕಾರ್ಥಿ ರವರು ಅಕ್ಟೋಬರ್ 24, 2011 ರಂದು 84 ನೇ ವಯಸ್ಸಿನಲ್ಲಿ ನಿಧನರಾದರು.

ಈ ಮೇಲಿನ ವಿವರಗಳೊಂದಿಗೆ ಸರಿಯಾದ ಉತ್ತರವನ್ನು ಕಳಿಸಿದವರು: ಶ್ರೀ ಎಂ. ಎಂ. ವಿನಾಯಕ, ಖ/ಔ ಜಗದೀಶ್ವರಯ್ಯ. ಎಂ.ಎಂ, ಹಂಪಸಾಗರ–2(ಸಾ,ಪೋ), ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)–583214. ಕೇವಲ ಹೆಸರನ್ನು ಮಾತ್ರ ಸೂಚಿಸಿದ ಮತ್ತೊಬ್ಬರು ಮೂಡ್ನಣೆಯ ಎಂ. ಎಸ್. ಶೋಭಿತ್. ಇಬ್ಬರಿಗೂ ಧನ್ಯವಾದಗಳು.



ಸ್ಥಳ : ಬೆಂಗಳೂರು, 13.00°N, 77.00°E
ಸಮಯ : 20/05/2025, 22:30 (UTC +05:30)

ಆಕಾಶನಕ್ಷೆಯನ್ನು ಬಳಸುವ ವಿಧಾನ: ಆಗಸದತ್ತ ದೃಷ್ಟಿ ನೆಟ್ಟು, ನಿಮ್ಮ ಕಣ್ಣೆದುರು ನಕಾಶೆಯನ್ನು ಹಿಡಿಯಿರಿ. ನಕ್ಷೆಯಲ್ಲಿ ತೋರಿಸಿರುವ ದಿಕ್ಕುಗಳನ್ನು, ನಮ್ಮ ಭೂಮಿಯ ದಿಕ್ಕುಗಳಿಗೆ ಸರಿಹೊಂದಿಸಿ. ಈಗ ನಕ್ಷೆಯಲ್ಲಿ ತೋರಿಸಿರುವ ನಕ್ಷತ್ರಪುಂಜಗಳನ್ನು, ಗ್ರಹಗಳನ್ನು ಹಾಗೂ ನಕ್ಷತ್ರಗಳನ್ನು ಆಗಸದಲ್ಲಿ ಗುರುತಿಸಲು ಪ್ರಯತ್ನಿಸಿ. (ವಿ. ಸೂ. : ಈ ಆಕಾಶ ನಕ್ಷೆಯನ್ನು ಡೌನ್ಲೋಡ್ ಮಾಡಿಕೊಂಡು ಉಪಯೋಗಿಸಲು, ಇದರೊಂದಿಗೆ ಕೊಟ್ಟಿರುವ ಕ್ಯೂ ಆರ್ ಕೋಡನ್ನು ಸ್ಕ್ಯಾನ್ ಮಾಡಿ. ರಾತ್ರಿಯಾಗಸವನ್ನು ವೀಕ್ಷಿಸುವಾಗ, ಬೆಳಕಿಗೆ, ಕೆಂಪು ಬಣ್ಣದ ದೀಪಗಳನ್ನು ಬಳಸುವುದು ಒಳ್ಳೆಯದು. ಈ ನಕ್ಷೆಯನ್ನು ಬೆಂಗಳೂರಿನ ಸ್ಥಾನಕ್ಕೆ ಅನುಗುಣವಾಗಿ ತಯಾರಿಸಿದ್ದರೂ, ಅತ್ಯಲ್ಪ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಂಡು, ಬೇರೆ ಸ್ಥಾನಗಳಲ್ಲೂ ಬಳಸಬಹುದು.)

ಜೂನ್ 2025 ತಿಂಗಳ ಪ್ರಮುಖ ಖಗೋಳ ವಿದ್ಯಮಾನಗಳು ಇಂತಿವೆ

ಜೂನ್ 1 : ಈ ದಿನ ಚಂದ್ರ ಹಾಗೂ ಮಂಗಳ ಗ್ರಹದ ಸಂಯೋಗ ಜರುಗಲಿದೆ. ಈ ದಿನ ಸಂಜೆ 7:15ರ ಸುಮಾರಿಗೆ ಪಶ್ಚಿಮದ ದಿಗಂತದಿಂದ ಸುಮಾರು 60ಲಿಯಷ್ಟು ಮೇಲೆ ಈ ವಿದ್ಯಮಾನವನ್ನು ನೋಡಬಹುದು.

ಜೂನ್ 1 : ಈ ದಿನ ಭೂಮಿಯನ್ನು ಆಧಾರವಾಗಿಟ್ಟುಕೊಂಡರೆ ಶುಕ್ರಗ್ರಹವು ಸೂರ್ಯನಿಂದ ಅತ್ಯಂತ ದೂರದಲ್ಲಿರುತ್ತದೆ. ಅಂದರೆ ಇಂದು ಸೂರ್ಯೋದಯದ ಸಮಯದಲ್ಲಿ ಶುಕ್ರಗ್ರಹವು ಪೂರ್ವದಲ್ಲಿ ದಿಗಂತದಿಂದ ಸುಮಾರು 41 ಡಿಗ್ರಿ ಎತ್ತರದಲ್ಲಿರುತ್ತದೆ. ಶುಕ್ರಗ್ರಹವನ್ನು ಬರಿಗಣ್ಣಿನಲ್ಲಿ ವೀಕ್ಷಿಸಬಹುದು.

ಜೂನ್ 11 : ಈ ದಿನ ಹುಣ್ಣಿಮೆ. ಈ ಸಮಯದಲ್ಲಿ ಕಾಡು ಸ್ಟ್ರಾಬೆರಿಗಳು ಹಣ್ಣಾಗಲು ಪ್ರಾರಂಭವಾಗುವುದರಿಂದ ಈ ಚಂದ್ರನಿಗೆ 'ಸ್ಟ್ರಾ ಬೆರಿ ಚಂದ್ರ' ಎಂಬ ಹೆಸರೂ ಇದೆ.

ಜೂನ್ 18 : ಈ ದಿನ ಚಂದ್ರ ಹಾಗೂ ಶನಿಗ್ರಹದ ಸಂಯೋಗ ಜರುಗಲಿದೆ. ಈ ದಿನ ರಾತ್ರಿ 12:30ರ ಸುಮಾರಿಗೆ ಆಗ್ನೇಯದ ದಿಗಂತದಿಂದ ಸುಮಾರು 66ಲಿಯಷ್ಟು ಮೇಲೆ ಈ ವಿದ್ಯಮಾನವನ್ನು ನೋಡಬಹುದು.

ಜೂನ್ 21 : ಈ ದಿನ 'ಅಯನ ಸಂಕ್ರಾಂತಿ (Solstice)'. ಭೂಮಿ ತನ್ನ ಅಕ್ಷದ ಸುತ್ತ ಸುತ್ತುವಾಗ, ಗೋಳದ ಅರ್ಧ ಭಾಗ ಸೂರ್ಯನ ಬೆಳಕನ್ನು ಪಡೆದರೆ, ಉಳಿದ ಅರ್ಧ ಭಾಗ ಕತ್ತಲೆಯಲ್ಲಿರುತ್ತದೆ. ಆದರೆ ಭೂಮಿಯ ಅಕ್ಷ 23.5 ಡಿಗ್ರಿ ಓರೆಯಾಗಿರುವುದರಿಂದ ಅದರ ಉತ್ತರಾರ್ಧಗೋಳ ಅಥವಾ ದಕ್ಷಿಣಾರ್ಧಗೋಳವು, ಒಂದು ಇನ್ನೊಂದಕ್ಕಿಂತ ಹೆಚ್ಚು ಬೆಳಕನ್ನು ಪಡೆಯುತ್ತದೆ. ತತ್ಪರಿಣಾಮ, ಹೆಚ್ಚು ಬೆಳಕು ಪಡೆಯುವ ಭಾಗದಲ್ಲಿ ಹಗಲು ದೀರ್ಘವಾಗಿಯೂ ಹಾಗೂ ಉಳಿದ ಭಾಗದಲ್ಲಿ ರಾತ್ರಿ ದೀರ್ಘವಾಗಿಯೂ ಕಂಡುಬರುತ್ತದೆ. ಸೂರ್ಯನ ಸ್ಥಾನಕ್ಕೆ ಹೋಲಿಸಿದಾಗ, ವರ್ಷದಲ್ಲಿ ಎರಡು ಬಾರಿ ಭೂಮಿಯ ಈ ಓರೆಯಾಗಿರುವಿಕೆ ತನ್ನ ಅತ್ಯುಚ್ಚ ಮಟ್ಟವನ್ನು ತಲುಪುತ್ತದೆ. ಆ ದಿನ, ಭೂಮಿಯ ಒಂದು ಗೋಳಾರ್ಧ ಅತಿ ದೀರ್ಘ ಹಗಲನ್ನು ಕಂಡರೆ, ಇನ್ನೊಂದು ಅರ್ಧ, ಅತಿ ದೀರ್ಘ ರಾತ್ರಿಯನ್ನು ಕಾಣುತ್ತದೆ. ಇದನ್ನು 'ಅಯನ ಸಂಕ್ರಾಂತಿ' ಅಥವಾ 'Solstice' ಎಂದು ಕರೆಯುತ್ತಾರೆ. ಜೂನ್ 21, ಉತ್ತರ ಗೋಳಾರ್ಧದಲ್ಲಿ ಬೇಸಿಗೆಯ ಮೊದಲ ದಿನವಾದರೆ, ದಕ್ಷಿಣ ಗೋಳಾರ್ಧದಲ್ಲಿ ಇದು ಚಳಿಗಾಲದ ಮೊದಲ ದಿನವನ್ನು ಸೂಚಿಸುತ್ತದೆ.

ಜೂನ್ 25 : ಈ ದಿನ ಅಮಾವಾಸ್ಯೆ.

ಜೂನ್ 27: ಬೂಟಿಸ್ ನಕ್ಷತ್ರಪುಂಜದಿಂದ ಹೊರಟಂತೆ ಕಾಣುವ ಬೂಟಿಡ್ ಉಲ್ಕಾ ವರ್ಷ ಈ ದಿನ ಉಚ್ಚಮಟ್ಟದಲ್ಲಿರುತ್ತದೆ. ಇಂದು ರಾತ್ರಿ ಸುಮಾರು 9 ಗಂಟೆಗೆ ದೃಗ್ಗೋಚರ ಉಲ್ಕೆಗಳ ಸಂಖ್ಯೆ ಹೆಚ್ಚಿರುತ್ತದೆ.

ವೇಣುಗೋಪಾಲ ಗಾಂವ್ಕರ, ಬೆಂಗಳೂರು ಹವ್ಯಾಸಿ ಖಗೋಳಶಾಸ್ತ್ರಜ್ಞರ ಸಂಘ (ABAA)
E-mail: venuastronomy@gmail.com

ಪದಬಂಧ –29 । ರಚನೆ: ವಿದ್ಯಾ ಹಾಲಭಾವಿ



ಎಡದಿಂದ ಬಲಕ್ಕೆ

2.ಮಧುರವಾದ ಧ್ವನಿ(4)
5.ಕೂಡುವ ಲೆಕ್ಕವಿದು(4)
7.ಸ್ತನಿಗಳಲ್ಲಿ ಎದೆಗೂಡನ್ನು ಉದರಭಾಗದಿಂದ ಬೇರ್ಪಡಿಸುವ ಅಂಗ(2)
8.ಪಿಚಕಾರಿಯು ಉಲ್ಟಾ ಪಲ್ಟಾ ಆಗಿದೆ(4)
9.ಸಮುದ್ರದ ಒಳಗಿನ ಬೆಂಕಿ(5)
11.ಗಣಿತದಲ್ಲಿಎರಡು ರಾಶಿಗಳು ಸಮವೆಂದು ಸೂತ್ರ ಅಥವಾ ಸಿದ್ಧಾಂತದ ಮೂಲಕ ದೃಢೀಕರಿಸುವುದು(5)
15.ವಸ್ತುವಿನ ಭೌತಿಕ ಸ್ಥಿತಿಯನ್ನು ಅನಿಲ ಹಂತದಿಂದ ದ್ರವ ಹಂತಕ್ಕೆ ಬದಲಾಯಿಸುವುದು(5)
17.ಬಾವಲಿಯನ್ನು ಹೀಗೂ ಕರೆಯುತ್ತಾರೆ(4)
18.ತರಂಗವಿಲ್ಲಿ ಉಲ್ಟಾ ಕಾಣುತ್ತಿದೆ(2)
19.ಒಂದು ವಸ್ತುವಿನಲ್ಲಿರುವ ದ್ರವ್ಯದ ಒಟ್ಟು ಮೌಲ್ಯ(4)
21.ಸೂರ್ಯನ ಇನ್ನೊಂದು ಹೆಸರು(4)

ಮೇಲಿಂದ ಕೆಳಕ್ಕೆ

1.ಅಂಕಣದಲ್ಲಿರುವ ಸಂಖ್ಯೆ ಕಾಣುತ್ತಿದೆಯೇ?(2)
3.ತೋಳಿನ ಶಕ್ತಿ ಉಲ್ಟಾ ಕಾಣುತ್ತಿದೆ(4)
4.ಗಣಿತದಲ್ಲಿ ವರ್ಗ ಸಂಖ್ಯೆ ಬರಲು ಕಾರಣವಾದ ಸಂಖ್ಯೆ(4)
6.ಕೂಡಿ ಬಾಳುವಿಕೆ ತಿರುವುಮುರುವಾಗಿದೆ(5)
8.ವಿಶೇಷ ಜ್ಞಾನವುಳ್ಳವನು(3)
9.ನೀರು ಆವಿಯಾಗುವ ಪ್ರಕ್ರಿಯೆ(5)
10.ಮೂಗಿಗೆ ಏರಿಸುವ ತಂಬಾಕಿನ ನಯವಾದ ಪುಡಿ(2)
12.ಒಂದು ಘನ ಅಥವಾ ಅನಿಲದಿಂದ ದ್ರವವನ್ನು ಉತ್ಪಾದಿಸುವ ಪ್ರಕ್ರಿಯೆ ಉಲ್ಟಾ ಆಗಿದೆ(5)
13.ಪ್ರತಿಫಲನದಿಂದ ವಸ್ತುಗಳ ಪ್ರತಿಬಿಂಬವನ್ನು ಉಂಟುಮಾಡುವ ಉಪಕರಣ(3)
14.ಎಲ್ಲಾ ಜೀವಿಗಳಿಗೆ ಅಗತ್ಯವಾದ ಪಾರದರ್ಶಕ ವಾಸನೆಯಿಲ್ಲದ ರುಚಿರಹಿತ ವಸ್ತುಉಲ್ಟಾ ಆಗಿದೆ(2)
15.ಅರು ಮುಖಗಳು ಹನ್ನೆರಡು ಅಂಚುಗಳು ಎಂಟು ಶೃಂಗಗಳನ್ನು ಹೊಂದಿರುವ ಆಯತಾಕಾರದ ಮುಖವುಳ್ಳ ಆಕೃತಿ(4)
16.ಕನ್ನಡಿಗರ ನಾಡಿದು(4)
20.ಕರಾಳರಾತ್ರಿಯಲ್ಲಿ ಕಾಣುತ್ತಿರುವ ಮರದ ಅಂಟು!(2)

ಪದಬಂಧ–28 ಉತ್ತರ



ಸಂಖ್ಯಾ ಬಂಧ–29



ನಿಯಮ

ಬಣ್ಣದ ಮನೆಯಲ್ಲಿ ನೀಡಲಾದ ಮೊತ್ತಕ್ಕೆ ಅನುಗುಣವಾಗಿ ಬರುವ ಅಂಕೆಗಳನ್ನು ಬಲಭಾಗ ಅಥವಾ ಕೆಳಭಾಗದಲ್ಲಿ ರುವ ಬಿಳಿಯ ಖಾಲಿಮನೆಗಳಲ್ಲಿ ಬರೆಯಬೇಕು. ಮೊತ್ತದ ಸಂಖ್ಯೆ ಬರಲು 1 ರಿಂದ 9 ವರೆಗಿನ ಅಂಕೆಗಳನ್ನು ಮಾತ್ರ ಬಳಸಬೇಕು. ಸೊನ್ನೆಯನ್ನು ಉಪಯೋಗಿಸುವಂತಿಲ್ಲ ಹಾಗು ಒಂದು ಮೊತ್ತದ ಸಂಖ್ಯೆ ಬರಲು ಬಳಸಿದ ಅಂಕೆಗಳು ಪುನರಾವರ್ತನೆ ಯಾಗುವಂತಿಲ್ಲ(ಅಂದರೆ 15 ಸಂಖ್ಯೆ ಬರಲು 6+3+6 ಎಂದು ಬರೆಯುವಂತಿಲ್ಲ).

ಸಂಖ್ಯಾ ಬಂಧ–28 ಉತ್ತರ



ಸಾಧಕರ ಸ್ಮರಣೆ

ಕರ್ಟ್ ಗೋಡೆಲ್

ಗಣಿತಜ್ಞ ಹಾಗೂ ತರ್ಕ ಮತ್ತು ತತ್ವವಿಜ್ಞಾನಿ. ಆಸ್ಟ್ರಿಯಾದಲ್ಲಿ ಜನಿಸಿದ ಈತ ಎರಡನೆಯ ಯುದ್ಧದ ಕಾರಣ ಅಮೆರಿಕಕ್ಕೆ ವಲಸೆ ಹೋಗಬೇಕಾಯಿತು. ಅಲ್ಲಿಯ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದಲ್ಲಿ ಗಣಿತ ಪ್ರಾಧ್ಯಾಪಕನಾಗಿ ಹಲವು ಹೊಸ ವಿಚಾರಗಳನ್ನು ಮಂಡಿಸಿದ.

(ಜನನ: 28 ಏಪ್ರಿಲ್ 1908; ಮರಣ: 14 ಜನವರಿ 1978)

(ಕಲೆ: ಶ್ರೀ ಅನಿಲ್ ಜಗಳೂರು; Instagram: @Anils_art)